ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 7 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 82 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯ ಸರ್ಕಾರ ಡೆಂಗ್ಯೂ ಸಾವಿನ ಸಂಖ್ಯೆ ಮುಚ್ಚಿಡುತ್ತಿದೆ


ಬೊಮ್ಮಾಯಿ

ಶಿಗ್ಗಾವಿ, ಜು.6– ರಾಜ್ಯ ಸರ್ಕಾರ ಡೆಂಗ್ಯೂ ಸಾವಿನ ಸಂಖ್ಯೆಯನ್ನು ಮುಚ್ಚಿಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವೈಫಲ್ಯ ಮುಚ್ಚಿಕೊಳ್ಳಲು ಡೆಂಗ್ಯೂ ರೋಗಿಗಳ ಸಾವಿನ ಸಂಖ್ಯೆ ಮುಚ್ಚಿಡುತ್ತಿದೆ. ಹಾವೇರಿಯಲ್ಲಿ ಸೂಕ್ತ ಚಿಕಿತ್ಸೆ ಸಿಗದೇ ಜನರು ದಾವಣಗೆರೆ, ಹುಬ್ಬಳ್ಳಿಗೆ ಹೋಗುತ್ತಿದ್ದಾರೆ. ಸರಿಯಾದ ಚಿಕಿತ್ಸೆ ಸಿಗದೆ ರೋಗಿಗಳು ಸಾವನ್ನಪ್ಪುತ್ತಿದ್ದು, ಸರ್ಕಾರ ಅದನ್ನು ಮುಚ್ಚಿಡುತ್ತಿದೆ ಎಂದರು. ಡೆಂಗ್ಯೂ ಹೆಚ್ಚಾಗುತ್ತಿದೆ ಎಂದು ನಾನು ಮೊದಲೇ ಹೇಳಿದ್ದೆ ಆದರೆ,

● 5ನೇ ಪುಟಕ್ಕೆ

ರಾಜ್ಯದಲ್ಲಿ ಡೆಂಗ್ಯೂ ಮಹಾಮಾರಿ ಹಾವಳಿ ಹಿನ್ನೆಲೆ

ಮೆಡಿಕಲ್ ಎಮರ್ಜೆನ್ಸಿ ಘೋಷಿಸಿ; ಎಲ್ಲರಿಗೂ ಉಚಿತ ಚಿಕಿತ್ಸೆ ನೀಡಿ


ಡಾ.ಸಿ.ಎನ್.ಮಂಜುನಾಥ್

● ಬಿಜೆಪಿ ಸಂಸದ ಡಾ.ಸಿ.ಎನ್.ಮಂಜುನಾಥ್ ಆಗ್ರಹ ● ಡೆಂಗ್ಯೂಗೆ ನಿಖರವಾದ ಚಿಕಿತ್ಸೆ ಇಲ್ಲ; ಇದನ್ನು ತಡೆಯದಿದ್ದರೆ ಘೋರ ಪರಿಣಾಮದ ಎಚ್ಚರಿಕೆ



ಬೆಂಗಳೂರು, ಜು.6– ಡೆಂಗ್ಯೂಗೆ ನಿಖರವಾದ ಚಿಕಿತ್ಸೆ ಇಲ್ಲ. ಇದರ ಜೊತೆಗೆ ಇತರ ಕಾಯಿಲೆಗಳು ಬರುತ್ತವೆ. ಕೋವಿಡ್ ಅನ್ನು ಪ್ಯಾಂಡಮಿಕ್ ಕಾಯಿಲೆ ಎಂದೆವು. ಇದು ಎಂಡಮಿಕ್ ಕಾಯಿಲೆ. ಕೋವಿಡ್ ಮಾದರಿಯಲ್ಲೇ ಇದಕ್ಕೆ ಚಿಕಿತ್ಸೆ ನೀಡಬೇಕು. ಮೆಡಿಕಲ್ ಎಮರ್ಜೆನ್ಸಿ ಘೋಷಣೆ ಮಾಡಬೇಕು ಎಂದು ಸಂಸದ ಡಾ. ಸಿ.ಎನ್.ಮಂಜುನಾಥ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ. ಮಂಜುನಾಥ್, ಡೆಂಗ್ಯೂ ಜ್ವರದ ನಿಯಂತ್ರಣ ಅಂದರೆ ಸೊಳ್ಳೆಯ ನಿಯಂತ್ರಣ. ಸೊಳ್ಳೆ ನಿಯಂತ್ರಣವಾದರೆ ಮಾತ್ರ ಡೆಂಗ್ಯೂ ನಿಯಂತ್ರಣ ಆಗಲಿದೆ. ಮಳೆಗಾಲದ ಪ್ರಾರಂಭದಲ್ಲಿ ಸೊಳ್ಳೆಯಿಂದ ಹರಡುವ ಕಾಯಿಲೆ ಇದು. ಡೆಂಗ್ಯೂ ತಡೆಗಟ್ಟದಿದ್ದರೆ ಚಿಕನ್ ಗುನ್ಯಾ, ಝಿಕಾ ವೈರಸ್ ಬರಬಹುದು ಎಂದು ಎಚ್ಚರಿಸಿದ್ದಾರೆ.

ಡೆಂಗ್ಯೂ ರಾಜ್ಯಾದ್ಯಂತ ಹರಡಿರುವುದರಿಂದ ಇದಕ್ಕೆ ತುರ್ತು ಚಿಕಿತ್ಸೆ ನೀಡುವ ಅಗತ್ಯವಿದೆ. ಇದಕ್ಕಾಗಿ ಮೆಡಿಕಲ್ ಎಮರ್ಜೆನ್ಸಿ ಘೋಷಣೆ ಮಾಡಬೇಕು. ಡೆಂಗ್ಯೂ ನಿಯಂತ್ರಿಸಲು ಪ್ರತ್ಯೇಕ ಟಾಸ್ಕ್ ಫೋರ್ಸ್ ರಚನೆ ಮಾಡಬೇಕು. ಡೆಂಗ್ಯೂ ಪರೀಕ್ಷೆಗೆ ದರ ನಿಗದಿ ಮಾಡಲಾಗಿದೆ. ಲ್ಯಾಬ್‌ಗಳು ಹೆಚ್ಚು ಹಣ ವಸೂಲಿ ಮಾಡಿದರೆ ಅವುಗಳ ಬಾಗಿಲು ಮುಚ್ಚಿಸಬೇಕು ಎಂದಿದ್ದಾರೆ. ಡೆಂಗ್ಯೂ ಫೀವರ್‌ಗೆ ಅಡ್ಮಿಟ್ ಆದವರಿಗೆ ಕೋವಿಡ್ ಸಂದರ್ಭದಲ್ಲಿ ಯಾವ ರೀತಿ ಉಚಿತ ಚಿಕಿತ್ಸೆ ನೀಡಲಾಯಿತೋ, ಅದೇ ರೀತಿ ಡೆಂಗ್ಯೂ ಬಂದವರಿಗೂ ಕನಿಷ್ಠ ಮಾನದಂಡದಲ್ಲಿ ಉಚಿತ ಚಿಕಿತ್ಸೆ ನೀಡಬೇಕು. ಡೆಂಗ್ಯೂ ಬಂದು ಮತ್ತೆ ಹುಷಾರಾಗುವಾಗ ಪ್ಲೇಟ್‌ಲೆಟ್ಸ್ ಕಡಿಮೆ ಆಗುತ್ತದೆ. ಜೊತೆಗೆ ದೇಹದಲ್ಲಿ ನೀರು ತುಂಬಿಕೊಳ್ಳುತ್ತದೆ. ಅವಶ್ಯಕತೆ ಇರುವವರಿಗೆ ಮೊದಲೇ ಚಿಕಿತ್ಸೆ ನೀಡಬೇಕು. ಡೆಂಗ್ಯೂ ಕಾಯಿಲೆಗೆ ಬೇಕಾದ ಮಾತ್ರೆಗಳ ಕೊರತೆ ಕೂಡ ಎದುರಾಗಿದೆ. ವಾರ್ ರೂಮ್ ಮೂಲಕ ಮಾನಿಟರ್ ಮಾಡಬೇಕು. ಮುಂದುವರೆದ ದೇಶಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಕಾಯಿಲೆ ತಡೆದಿದ್ದಾರೆ. ಮಸ್ಕ್ಯೂಟೋ ರೆಫಲೆಂಟ್ಸ್ ಅಂತ ಸ್ಟಿಕ್ಕರ್ ಬರಲಿದೆ. ಅದನ್ನು ಇಲ್ಲೂ ಹಾಕಬೇಕು. ಇದರಿಂದ ಸೊಳ್ಳೆ ಕಡಿಯುವುದರಿಂದ ಕಾಪಾಡಬಹುದು ಎಂದರು.

ಜು.23ರಂದು ಎನ್‌ಡಿಎ 3ನೇ ಅವಧಿಯ ಮೊದಲ ಬಜೆಟ್ ಮಂಡನೆ


ನಿರ್ಮಲಾ ಸೀತಾರಾಮನ್

ನವದೆಹಲಿ, ಜು.6– ದೇಶದಲ್ಲಿ 18ನೇ ಲೋಕಸಭೆ ರಚನೆಯಾಗಿ ಮೋದಿ ಸರ್ಕಾರವು ತನ್ನ ಮೂರನೇ ಅವಧಿಯ ಮೊದಲ ಬಜೆಟ್ ಅನ್ನು ಮಂಡಿಸಲು ಹೊರಟಿದ್ದು, ಕೇಂದ್ರ ಬಜೆಟ್ 2024ರ ದಿನಾಂಕಗಳನ್ನು ಸಹ ಘೋಷಿಸಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜುಲೈ 23ರಂದು ಸಂಸತ್ತಿನಲ್ಲಿ ಬಜೆಟ್ ಮಂಡಿಸಲಿದ್ದಾರೆ.

ವಾಸ್ತವವಾಗಿ, 18ನೇ ಲೋಕಸಭೆಯ ಮೊದಲ ಅಧಿವೇಶನ ಮುಗಿದಿದೆ. ಇದರಲ್ಲಿ ನೂತನವಾಗಿ ಆಯ್ಕೆಯಾದ ಸಂಸದರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆದಿದ್ದು, ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಸಭೆಯನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮಾತನಾಡಿದರು. ಈಗ ಎಲ್ಲರ ಕಣ್ಣು ಬಜೆಟ್ ಅಧಿವೇಶನದತ್ತ ನೆಟ್ಟಿದೆ. ಸಂಸತ್ ಅಧಿವೇಶನ ಜುಲೈ 22ರಿಂದ ಆಗಸ್ಟ್ 12ರವರೆಗೆ ನಡೆಯಲಿದೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ತಮ್ಮ ಎಕ್ಸ್ ಹ್ಯಾಂಡಲ್‌ನಲ್ಲಿ ಬಜೆಟ್ ಅಧಿವೇಶನದ ಬಗ್ಗೆ ಮಾಹಿತಿ ನೀಡಿದ್ದಾರೆ. 2024–25ರ ಕೇಂದ್ರ ಬಜೆಟ್ ಅನ್ನು 2024ರ ಜುಲೈ 23ರಂದು ಲೋಕಸಭೆಯಲ್ಲಿ ಮಂಡಿಸಲಾಗುತ್ತದೆ ಎಂದು ಬರೆದಿದ್ದಾರೆ.

ಕೇಂದ್ರ ಬಜೆಟ್ 2024ರ ದಿನಾಂಕಗಳನ್ನು ಘೋಷಿಸುವುದರೊಂದಿಗೆ, ಮೋದಿ 3.0 ಸರ್ಕಾರದ ಅಡಿಯಲ್ಲಿ ಹಣಕಾಸು ಸಚಿವರು ತೆರಿಗೆದಾರರಿಗೆ ಕೆಲವು ಪ್ರಯೋಜನಗಳನ್ನು ಘೋಷಿಸಬಹುದು ಎಂದು ಬಹಳಷ್ಟು ನಿರೀಕ್ಷೆ ಮತ್ತು ಊಹಾಪೋಹಗಳಿವೆ. ಏತನ್ಮಧ್ಯೆ, ಸುದ್ದಿ ಸಂಸ್ಥೆ ರಾಯಿಟರ್ಸ್ ಎರಡು ಸರ್ಕಾರಿ ಅಧಿಕಾರಿಗಳನ್ನು ಉಲ್ಲೇಖಿಸಿ, ಕೇಂದ್ರ ಸರ್ಕಾರವು

● 5ನೇ ಪುಟಕ್ಕೆ

ಅಂದು ಕೆಂಪೇಗೌಡರು ಕಟ್ಟಿದ ಕೆರೆ–ಕಟ್ಟೆ ಮುಚ್ಚಿ ಈಗ ಬೃಹತ್ ಕಟ್ಟಡಗಳ ನಿರ್ಮಿಸುತ್ತಿರುವುದು ವಿಪರ್ಯಾಸ

● ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ವಿಷಾದ ● ಗೌಡರು ಸರ್ವರ ಹಿತಕ್ಕಾಗಿ ದುಡಿದು ಸರ್ವಜನಾಂಗದ ನಾಯಕರಾದರು ● ಬಸವಣ್ಣನವರ ಕಾಯಕ ಮಂತ್ರದಿಂದ ಸದೃಢ ಭಾರತ ಕಟ್ಟೋಣ ● ಮೈಸೂರು ಕೋರ್ಟ್‌ನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ಮೈಸೂರು, ಜು.6(ಎಸ್‌ಬಿಡಿ)– ನಾಡಪ್ರಭು ಕೆಂಪೇಗೌಡರು ಜನರ ಉಪಯೋಗಕ್ಕಾಗಿ ಕೆರೆ–ಕಟ್ಟೆ ಕಟ್ಟಿಸಿದರು. ಆದರೆ ಪ್ರಸ್ತುತ ಕೆರೆ–ಕಟ್ಟೆ ಮುಚ್ಚಿ ಬೃಹತ್ ಕಟ್ಟಡಗಳನ್ನು ನಿರ್ಮಿಸುತ್ತಿರುವುದು ವಿಪರ್ಯಾಸ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಅವರು ಬೇಸರ ವ್ಯಕ್ತಪಡಿಸಿದರು.

ಮೈಸೂರು ವಕೀಲರ ಸಂಘದ ವತಿಯಿಂದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ 515ನೇ ಜಯಂತ್ಯುತ್ಸವವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಉದ್ಘಾಟಿಸಿ, ಮಾತನಾಡಿದರು.

ವಿಜಯನಗರ ಸಾಮ್ರಾಜ್ಯದ ಯಲಹಂಕ ಸಾಮಂತ ದೊರೆಯಾಗಿದ್ದ ನಾಡಪ್ರಭು ಕೆಂಪೇಗೌಡರು ದೂರದೃಷ್ಟಿತ್ವದೊಂದಿಗೆ ಹಲವು ಕೆರೆ–ಕಟ್ಟೆಗಳನ್ನು ನಿರ್ಮಿಸಿದರು. ಜನೋಪಯೋಗದ ಜೊತೆಗೆ ಅಂತರ್ಜಲ ಕಾಯ್ದುಕೊಳ್ಳಬೇಕೆಂಬ

● 5ನೇ ಪುಟಕ್ಕೆ


ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮನಾಥ ಸ್ವಾಮೀಜಿ, ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರವೀಂದ್ರ ಹೆಗಡೆ, ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್ ಮತ್ತಿತರರು ಕೆಂಪೇಗೌಡರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

ಡ್ರಗ್ಸ್ ಮಾರುವವರು, ರೌಡಿಗಳು, ರಿಯಲ್ ಎಸ್ಟೇಟ್ ದಂಧೆಕೋರರು

ನಿಮಗೆ ಗೊತ್ತಿದ್ದರೂ ಏಕೆ ಕ್ರಮ ಕೈಗೊಳ್ಳುತ್ತಿಲ್ಲ...!

■ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆ
■ ರೌಡಿಗಳಿಗೆ ನಿಮ್ಮನ್ನು ಕಂಡರೆ ಭಯ ಇಲ್ಲ ಎಂದರೆ ಜನ ಯಾರಿಂದ ರಕ್ಷಣೆ ಪಡೆಯಬೇಕು!

ಬೆಂಗಳೂರು, ಜು. 6(ಕೆಎಂಶಿ)– ಡ್ರಗ್ಸ್ ಮಾರುವರು, ರೌಡಿಗಳು ಹಾಗೂ ರಿಯಲ್ ಎಸ್ಟೇಟ್ ದಂಧೆ ನಡೆಸುವವರು ಯಾರು ಎಂಬುದು ಆಯಾ ಠಾಣಾಧಿಕಾರಿಗಳಿಗೆ ಗೊತ್ತಿದ್ದರೂ ಇದನ್ನು ತಡೆಯಲು ವಿಫಲವಾಗಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪೊಲೀಸ್ ಅಧಿಕಾರಿಗಳಿಗೆ ಚಾಟಿ ಬೀಸಿದ್ದಾರೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ 2024ರ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶ ಉದ್ಘಾಟಿಸಿ, ನೂತನ ತಂತ್ರಾಂಶ ಬಿಡುಗಡೆ ಮಾಡಿ ಮಾತನಾಡಿದ ಅವರು, ನಿಮಗೆ ಗನ್‌ಗಳನ್ನು ಕೊಟ್ಟಿರುವುದು ಏತಕ್ಕೆ, ಕಿಸೆಯಲ್ಲಿ ಇಡುವುದಕ್ಕಲ್ಲ, ರೌಡಿಗಳನ್ನು ಎದುರಿಸಲಿಕ್ಕೆ ಎಂದರು. ರೌಡಿಗಳಲ್ಲಿ ಭಯ ಹುಟ್ಟಿಸುವ ಕೆಲಸ ಮಾಡಬೇಕು, ನಿಮ್ಮನ್ನು ಕಂಡರೆ ಭಯ ಇಲ್ಲದಿದ್ದರೆ ಸಾರ್ವಜನಿಕರು ಯಾರಿಂದ ರಕ್ಷಣೆ ಪಡೆಯಬೇಕು ಎಂದು ಪ್ರಶ್ನಿಸಿದರು. ಕೆಲವು ಪೊಲೀಸರಿಗೆ ಇ–ಬೀಟ್ ವ್ಯವಸ್ಥೆ ಜಾರಿಯಲ್ಲಿರುವುದೇ ಗೊತ್ತಿಲ್ಲವೆಂದರೆ ನಾಚಿಕೆ ಆಗಬೇಕು. ಇದನ್ನು ಸರಿಪಡಿಸಿಕೊಳ್ಳಿ ಎಂದರು. ಸಮಾಜದಲ್ಲಿ ಎಲ್ಲರೂ ನಿಶ್ಚಿಂತೆಯಿಂದ, ಭಯಮುಕ್ತವಾಗಿ ವಾಸಿಸುವ ವಾತಾವರಣ ಇರಬೇಕು, ಕಾನೂನು ಸುವ್ಯವಸ್ಥೆ ಸುರಕ್ಷಿತವಾಗಿದ್ದರೆ ಅಭಿವೃದ್ಧಿ, ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಸಾಧ್ಯ. ಇದರಿಂದ ತಲಾ ಆದಾಯ, ಜಿಡಿಪಿ ಬೆಳವಣಿಗೆಯೂ ಆಗುತ್ತದೆ.


ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ, ನೂತನ ತಂತ್ರಾಂಶ ಬಿಡುಗಡೆ ಮಾಡಿದರು.

ಜಾತಿ ವ್ಯವಸ್ಥೆಯಿಂದಾಗಿ ಸಮಾಜ ಅಸಮಾನತೆಯಿಂದ ಕೂಡಿದೆ, ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದರೆ ಕೆಳಗಿನ ಅಧಿಕಾರಿಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾರೆ. ಬೀಟ್, ಸಂಚಾರ, ಹೈವೇ ಪೆಟ್ರೋಲಿಂಗ್ ವ್ಯವಸ್ಥೆಯನ್ನು ತೀವ್ರ ಪರಿಣಾಮಕಾರಿಯಾಗಿ ನಿರ್ವಹಿಸಬೇಕು. ಹುಬ್ಬಳ್ಳಿಯಲ್ಲಿ ಒಂದರ ಹಿಂದೆ ಮತ್ತೊಂದು ಕೊಲೆಗಳು ನಡೆದವು, ಗುಪ್ತಚರ ಪೊಲೀಸರು ಎಚ್ಚರದಿಂದ ಇದ್ದಿದ್ದರೆ ಎರಡನೇ ಕೊಲೆ ತಪ್ಪಿಸಬಹುದಿತ್ತು ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾಯಿತು, ಇವರ ನಿರ್ಲಕ್ಷ್ಯದಿಂದ ಕೊಲೆ ಆಗಿದೆ ಎಂದರು.

ನಿಮ್ಮ ಸಮಸ್ಯೆ ಗೃಹ ಸಚಿವರು, ಡಿಜಿಗೆ ಹೇಳಿ: ವರ್ಗಾವಣೆಗೆ ಪ್ರಭಾವ ಬೀರುವ ಹಾಗೂ ಹಣ ಕೊಟ್ಟು ಟ್ರಾನ್ಸ್‌ಫರ್‌ಗೆ ಪ್ರಯತ್ನಿಸುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ನಿಮಗೆ ಸಮಸ್ಯೆಗಳಿದ್ದರೆ ಗೃಹ ಸಚಿವರು

● 5ನೇ ಪುಟಕ್ಕೆ

ಮೈಸೂರು ಸಾಹಿತ್ಯ ಉತ್ಸವಕ್ಕೆ ಪ್ರಮೋದಾದೇವಿ ಒಡೆಯರ್ ಚಾಲನೆ

ಮೈಸೂರು, ಜು. 6(ಆರ್‌ಕೆ)– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ವತಿಯಿಂದ ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ 2 ದಿನಗಳ ಮೈಸೂರು ಸಾಹಿತ್ಯ ಉತ್ಸವ–2024ರ 8ನೇ ಆವೃತ್ತಿ ಇಂದಿನಿಂದ ಆರಂಭವಾಗಿದೆ.

ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ದೀಪ ಬೆಳಗಿಸುವ ಮೂಲಕ ಮೈಸೂರು ಸಾಹಿತ್ಯ ಉತ್ಸವವನ್ನು ಉದ್ಘಾಟಿಸಿದರು. ಕನ್ನಡ ಚಲನಚಿತ್ರ ನಾಯಕ ನಟ ಹಾಗೂ ಲೇಖಕ ರಮೇಶ್ ಅರವಿಂದ್ ಗೌರವ ಅತಿಥಿಯಾಗಿ ಪಾಲ್ಗೊಂಡಿದ್ದರು.

ನಂತರ ಮಾತನಾಡಿದ ಪ್ರಮೋದಾದೇವಿ ಒಡೆಯರ್, ಮೈಸೂರು ಸಾಹಿತ್ಯ ಉತ್ಸವವು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಹಾಗೂ ಓದುಗರೊಂದಿಗೆ ಸಂಪರ್ಕ ಸಾಧಿಸಲು ವೇದಿಕೆ ಕಲ್ಪಿಸಿಕೊಟ್ಟಿದೆ ಎಂದು ಪ್ರಶಂಸಿಸಿದರು. ಉದ್ಯಮಿ ಹಾಗೂ ಲೇಖಕ ಅರೂಣ್ ರಾಮನ್ ನ್ಯೂಸ್ ಲೆಟರ್ ಅನ್ನು ಬಿಡುಗಡೆ ಮಾಡಿದರು. ಮೊದಲ ಪ್ರತಿಯನ್ನು ಸ್ಯಾಂಡಲ್‌ವುಡ್ ಖ್ಯಾತ ನಟ, ಪರಿಸರವಾದಿ ಸುರೇಶ್ ಹೆಬ್ಳೀಕರ್, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ. ಬೆಳ್ಳಿಯಪ್ಪ, ಖ್ಯಾತ ಲೇಖಕ ಅಶ್ವಿನ್ ಸಂಘಿ ಹಾಗೂ ರಂಗಕರ್ಮಿ ಮಂಡ್ಯ ರಮೇಶ್ ಸ್ವೀಕರಿಸಿದರು.


ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ವತಿಯಿಂದ ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ ಮೈಸೂರು ಸಾಹಿತ್ಯ ಉತ್ಸವದ 8ನೇ ಆವೃತ್ತಿಯನ್ನು ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು. (ಎಡದಿಂದ) ಟ್ರಸ್ಟ್ ಜಂಟಿ ಕಾರ್ಯದರ್ಶಿ ಸಿ.ಆರ್. ಹನುಮಂತ, ಉಪಾಧ್ಯಕ್ಷ ಸ್ಯಾಮ್ ಚೆರಿಯನ್ ಕುಂಬಕಟ್ಟು, ಖಜಾಂಚಿ ರಿಯನ್ ಎಫ್ ಇರಾನಿ, ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ಸಂಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಮೈಸೂರು ಸಾಹಿತ್ಯ ಉತ್ಸವದ ನಿರ್ದೇಶಕಿ ಶುಭ ಸಂಜಯ್ ಅರಸ್, ಗೌರವ ಅತಿಥಿ ನಟ–ಲೇಖಕ ರಮೇಶ್ ಅರವಿಂದ್, ಚಿತ್ರ ನಿರ್ದೇಶಕ, ಪರಿಸರವಾದಿ ಸುರೇಶ್ ಹೆಬ್ಳೀಕರ್, ಉದ್ಯಮಿ ಮತ್ತು ಲೇಖಕ ಅರೂಣ್ ರಾಮನ್, ಟ್ರಸ್ಟ್ ಟ್ರಸ್ಟಿ ಸುಚಿತಾ ಸಂಜಯ್ ಹಾಗೂ ಚಿತ್ರ ನಿರ್ದೇಶಕ ಚಿದಾನಂದ ಎಸ್. ನಾಯಕ್ ಅವರನ್ನು ಚಿತ್ರದಲ್ಲಿ ಕಾಣಬಹುದು.


ಕಾರ್ಯಕ್ರಮದಲ್ಲಿ ಸಾಹಿತಿಗಳನ್ನುದ್ದೇಶಿಸಿ ಮಾತನಾಡಿದ ನಟ ರಮೇಶ್ ಅರವಿಂದ್, ಯಶಸ್ವಿ ಬರಹಗಾರ ಎನಿಸಿಕೊಳ್ಳುವುದು ಕಷ್ಟಕರ. ಆದರೆ, ಓದುವಾಗ ಮುಂದಿನ ಪುಟಕ್ಕೆ ಸಂಪರ್ಕ ಕಲ್ಪಿಸುವ ಕಲೆ ಗೊತ್ತಿದ್ದರೆ ಅದು ಉತ್ತಮ ಲೇಖಕನನ್ನಾಗಿ ಸುವುದರಲ್ಲಿ ಸಂಶಯವಿಲ್ಲ. ಓದುವ ಇಂಗಿತವನ್ನು ಸೃಜಿಸುವ ಪುಸ್ತಕವು ಒಳ್ಳೆಯ ಅನುಭವವನ್ನು ಓದುಗನಿಗೆ ನೀಡಬಲ್ಲದು ಎಂದರು. ತಮ್ಮ ಅನುಭವವನ್ನು ಇದೇ ಸಂದರ್ಭ ಹಂಚಿಕೊಂಡ ರಮೇಶ್ ಅರವಿಂದ್, ನಾಳೆ ನನ್ನ 33ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದ್ದೇನೆ. ಆದರೆ, ಪುಸ್ತಕದೊಂದಿಗಿನ ನನ್ನ ಸಂಬಂಧ ವಿವಾಹ ವಾರ್ಷಿಕೋತ್ಸವಕ್ಕಿಂತ 10 ವರ್ಷ ಹಿಂದಿನದ್ದು ಎಂದರು. ಪುಣೆಯ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಫ್‌ಟಿಐಐ) ವಿದ್ಯಾರ್ಥಿಯಾದ ಮೈಸೂರಿನ ಚಿದಾನಂದ ಎಸ್. ನಾಯಕ್ ತಯಾರಿಸಿರುವ ಕೇನ್ಸ್ ಫಿಲಂ ಫೆಸ್ಟಿವಲ್‌ನಲ್ಲಿ ಉತ್ತಮ ಕಿರುಚಿತ್ರವಾಗಿ ಲಾ ಸಿನೆಫ್ ಪ್ರಶಸ್ತಿ ಗಳಿಸಿದ 'ಸನ್ ಫ್ಲವರ್ಸ್ ವರ್ ದ ಫಸ್ಟ್ ಒನ್ಸ್ ಟು ನೋ' ಕನ್ನಡ ಚಿತ್ರವನ್ನು ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು.

ಪೂರ್ಣ ವರದಿ ಪುಟ: 5–6–7

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್–2015 ಅಧ್ಯಕ್ಷರೂ ಆದ ಉತ್ಸವದ ನಿರ್ದೇಶಕಿ ಶುಭ ಸಂಜಯ್ ಅರಸ್, ಟ್ರಸ್ಟ್‌ನ ಉಪಾಧ್ಯಕ್ಷರಾದ ಸ್ಯಾಮ್ ಚೆರಿಯನ್ ಕುಂಬುಕಟ್ಟು, ಕಾರ್ಯದರ್ಶಿ ಸಿ.ಆರ್.ಹನುಮಂತ, ಖಜಾಂಚಿ ರಿಯನ್ ಎಫ್ ಇರಾನಿ, ಸದಸ್ಯರಾದ ಸುಚಿತ ಸಂಜಯ್ ಹಾಗೂ ಕಿಟ್ಟಿ ಮಂದಣ್ಣ ಉತ್ಸವದಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ

ನಾಳೆ, ನಾಳಿದ್ದು ಕೆಲವೆಡೆ ನೀರು ವ್ಯತ್ಯಯ



ಮೈಸೂರು,ಜು.6(ಎಸ್‌ಪಿಎನ್)–ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಮೂಲ ಸ್ಥಾವರದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜು.8 ಮತ್ತು 9ರಂದು ನೀರು ಸರಬರಾಜಿನಲ್ಲಿ ವಾರ್ಡ್ ನಂ.42ರಿಂದ 51ರ ವ್ಯಾಪ್ತಿಯ ಕೆ.ಜಿ.ಕೊಪ್ಪಲು, ಜನತಾನಗರ, ಶಾರದಾದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ ಹಾಗೂ ವಾರ್ಡ್ ನಂ.54ರಿಂದ 65ರ ವ್ಯಾಪ್ತಿಯ ಗುಂಡು ರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ, ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ ಎಂ–ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಮತ್ತು ಸುತ್ತಮುತ್ತ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ವನ ಮಹೋತ್ಸವ



ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ವನ ಮಹೋತ್ಸವ ಆಚರಿಸಲಾಯಿತು.

ಮೈಸೂರು,ಜು.6–ಕೆ.ಆರ್.ನಗರ ತಾಲೂಕು ಸೇವಾ ಸಮಿತಿ, ತಾಲೂಕು ವಕೀಲರ ಸಂಘ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪ್ರಾದೇಶಿಕ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ವತಿಯಿಂದ ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ವನ ಮಹೋತ್ಸವ ಆಚರಿಸಲಾಯಿತು.

ಪ್ರಧಾನ ಸಿವಿಲ್ ನ್ಯಾಯಾಧೀಶ ಎಸ್.ಚಂದನ್ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಅಸ್ರೀನ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಪ್ರಾಂಶುಪಾಲ ಟಿ.ಸುರೇಶ್ ಅಧ್ಯಕ್ಷತೆ ವಹಿಸಿದ್ದರು.

ತಹಸೀಲ್ದಾರ್ ನರಗುಂದ, ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಸಿ.ಲಿಂಗರಾಜು, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಜಿ.ಕೆ.ಹರೀಶ್, ಆರಕ್ಷಕ ನಿರೀಕ್ಷಕ ಕೃಷ್ಣರಾಜು, ವಲಯ ಅರಣ್ಯಾಧಿಕಾರಿಗಳಾದ ಟಿ.ವಿ. ಹರಿಪ್ರಸಾದ್, ಶ್ರೀಮತಿ ಎಂ.ಆರ್. ರಶ್ಮಿ ಮತ್ತಿತರರು ಉಪಸ್ಥಿತರಿದ್ದರು.

ರಘುನಂದನ್ ಗುರೂಜಿ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಅಖಿಲ ಕರ್ನಾಟಕ ರಘುನಂದನ್ ಗುರೂಜಿ ಅಭಿಮಾನಿ ಬಳಗದಿಂದ ದಕ್ಷಿಣ ಶಿರಡಿ ಸಾಯಿಬಾಬಾ, ದತ್ತಪೀಠ ಸಂಸ್ಥಾಪಕರಾದ ಶ್ರೀ ರಘುನಂದನ್ ಗುರೂಜಿ ಅವರ 39ನೇ ಹುಟ್ಟುಹಬ್ಬ ಆಚರಿಸಲಾಯಿತು. ತಾಪಂ ಸದಸ್ಯ ಶಾಂತರಾಜು, ಗ್ರಾಪಂ ಮಾಜಿ ಅಧ್ಯಕ್ಷ ಲಕ್ಷ್ಮಣ್, ಪುಟ್ಟೇಗೌಡ, ಬಳಗದ ರಾಜ್ಯಾಧ್ಯಕ್ಷ ಪ್ರಶಾಂತ್ ಇನ್ನಿತರರಿದ್ದರು.

ನೂತನ ಜಿಲ್ಲಾಧಿಕಾರಿಗೆ ಅಭಿನಂದನೆ



ಮೈಸೂರು ನೂತನ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರನ್ನು ಪಡುವಾರಹಳ್ಳಿ ಗ್ರಾಮಾಭ್ಯುದಯ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಜೆಡಿಎಸ್ ಮುಖಂಡ ರಮೇಶ್, ಗ್ರಾಮಾಭ್ಯುದಯ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಭೈರಪ್ಪ, ರಾಮಣ್ಣ, ಸೋಮಣ್ಣ, ರಾಮಸ್ವಾಮಿ, ಜಯರಾಂ, ರುಚಿ ಸುರೇಶ್, ಗಂಗಾಧರಗೌಡ ಇತರರಿದ್ದಾರೆ.

ಯೆಸ್ ಡೆವಲಪರ್ಸ್‌ಗೆ ಬೆಸ್ಟ್ ಪ್ಲಾಟೆಡ್ ಡೆವಲಪ್‌ಮೆಂಟ್ ಅವಾರ್ಡ್



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಟಿ.ನರಸೀಪುರದಲ್ಲಿರುವ ಯೆಸ್ ಡೆವಲಪರ್ಸ್ ಪ್ರಾಜೆಕ್ಟ್ 'ಯೆಸ್ ಸಮೃದ್ಧಿ'ಗೆ ಗ್ಲೋಬಲ್ ರಿಯಲ್ ಎಸ್ಟೇಟ್ ಬ್ರಾಂಡ್ ಅವಾರ್ಡ್ ಲಭಿಸಿದೆ. ಯೆಸ್ ಡೆವಲಪರ್ಸ್‌ನ ನೀತಾ ಮನೋಜ್, ಯೆಸ್ ಡೆವಲಪರ್ಸ್‌ನ ಸಿಎಂಡಿ ಮನೋಜ್ ಲೋದಾ ಅವರು ಶ್ಯಾಮ್ ಮರೆಡ್ಡಿ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ನಿಧನ



ರುದ್ರಮ್ಮ

ಮೈಸೂರು,ಜು.6–ಮೈಸೂರಿನ ಇಂದಿರಾನಗರದ ನಿವಾಸಿ ಹಾಗೂ ಕೆಇಬಿ ನಿವೃತ್ತ ಅಧಿಕಾರಿ ದಿವಂಗತ ಬಿ.ಎಲ್.ಬಸವರಾಜ ಅವರ ಪತ್ನಿ ರುದ್ರಮ್ಮ (79) ಅವರು ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್.ಸಿಂಧು



ಮೈಸೂರು, ಜು.6–ಮೈಸೂರು ವಿಜಯನಗರ ಎರಡನೇ ಹಂತದ ನಿವಾಸಿ ಹಾಗೂ ವಕೀಲೆ ಎಲ್.ಸಿಂಧು(51) ನಿನ್ನೆ ನಿಧನರಾದರು. ಮೃತರು ಪತಿ ವಸಂತ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಗೋಕುಲಂ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು. ಇವರ ನಿಧನಕ್ಕೆ ಮೈಸೂರು ಬಾರ್ ಅಸೋಸಿಯೇಷನ್ ಸದಸ್ಯರಾದ ಎಸ್.ಸಲೀಂ ಅಲಿ ಖಾನ್, ಆಯಿಷಾ ಉನ್ನೀಸಾ, ಸಯ್ಯದ್ ಜೀ ಶಾನ್ ಸಂತಾಪ ವ್ಯಕ್ತಪಡಿಸಿದ್ದಾರೆ.



ಕೆ.ನಾಗಣ್ಣ

ಕುರುಬಾರಹಳ್ಳಿ ನಿವಾಸಿ ಕೆ.ನಾಗಣ್ಣ ಹೃದಯಾಘಾತದಿಂದ ಇಂದು ನಿಧನರಾದರು. ಇವರಿಗೆ 60 ವರ್ಷ ವಯಸ್ಸಾಗಿತ್ತು. ಇವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಶ್ರೀಮತಿ ಉಮಾ ಪಟೇಲ್



ಮೈಸೂರಿನ ಹೆಬ್ಬಾಳು ಎರಡನೇ ಹಂತದ ನಿವಾಸಿ, ಹಿರಿಯ ವಕೀಲರಾದ ಹೊಯ್ಸಳ ಅವರ ತಾಯಿ ಶ್ರೀಮತಿ ಉಮಾ ಪಟೇಲ್ ಇಂದು ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ತುಮಕೂರು ಜಿಲ್ಲೆಯ ಹಿರಿಯೂರು ಬಳಿಯ ಹರಿಹಬ್ಬೆ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಬಿನಿ ನಾಲೆಗಳಿಗೆ ನೀರು ಬಿಡಲು ಆಗ್ರಹಿಸಿ ರೈತರ ಪ್ರತಿಭಟನೆ



ಕಬಿನಿ ವ್ಯಾಪ್ತಿಯ ನಾಲೆಗಳು ಮತ್ತು ಕೆರೆಕಟ್ಟೆಗಳಿಗೆ ನೀರು ಬಿಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜು.6(ಜಿಎ)–ಕಬಿನಿ ವ್ಯಾಪ್ತಿಯ ನಾಲೆಗಳು ಮತ್ತು ಕೆರೆಕಟ್ಟೆಗಳಿಗೆ ನೀರು ಬಿಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಕಾಡಾ ಕಚೇರಿ ಎದುರು ಜಮಾವಣೆಗೊಂಡ ರೈತರು ರಾಜ್ಯ ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ನಂತರ ಮಾತನಾಡಿದ ಪ್ರತಿಭಟನಾಕಾರರು, ಕಬಿನಿ ಜಲಾಶಯ ಭರ್ತಿಯಾಗುವ ಹಂತದಲ್ಲಿದ್ದು, ನಾಲೆಗಳಿಗೆ ನೀರು ಬಿಡಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು, ಕಾಡ ಅಧಿಕಾರಿಗಳು ಯಾಕೆ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕಳೆದ ವರ್ಷ ತಮಿಳುನಾಡಿಗೆ ನೀರು ಬಿಟ್ಟು ಕಬಿನಿ ಅಚ್ಚುಕಟ್ಟು ಭಾಗವನ್ನು ಬರಪೀಡಿತ ಪ್ರದೇಶದಂತೆ ಮಾಡಿದ್ದಾರೆ. ಜೀವನೋಪಾಯಕ್ಕೆ ಅಲ್ಪಸ್ವಲ್ಪ ಭತ್ತ, ರಾಗಿ, ಜಾನುವಾರುಗಳಿಗೆ ಮೇವು ಬೆಳೆದುಕೊಂಡು ಕೃಷಿ ಕೂಲಿ ಕಾರ್ಮಿಕರಿಗೆ ಕೆಲಸವನ್ನು ಕೊಟ್ಟು ಜೀವನೋಪಾಯ ನಡೆಸಿಕೊಳ್ಳಲು ಕಾದಿದ್ದ ಕಬಿನಿ ಅಚ್ಚುಕಟ್ಟು ಭಾಗದ ರೈತರಿಗೆ ಬೆನ್ನಿನ ಮೇಲೆ ಬರೆ ಎಳೆದಿದ್ದಾರೆ. ಕಾವೇರಿ ನ್ಯಾಯಾಧೀಕರಣ ಪ್ರಾಧಿಕಾರದ ಆದೇಶವನ್ನು ಪಾಲಿಸಿ ಈ ಭಾಗದ ರೈತರಿಗೆ ದ್ರೋಹ ಮಾಡಿ ಸರ್ಕಾರ ಉಳಿಸಿಕೊಳ್ಳಲು ತಂತ್ರಗಾರಿಕೆ ನಡೆಯುತ್ತಿದೆ ಎಂದು ದೂರಿದರು. ಈ ಸಂದರ್ಭ ಪ್ರತಿಭಟನಾಕಾರರು ಕಾಡಾ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಕಾಡಾ ಎಂಜಿನಿಯರ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಜು.10ರಿಂದ ಕೆರೆಕಟ್ಟೆ ಮತ್ತು ನಾಲೆಗಳಿಗೆ ನೀರು ಬಿಡುತ್ತೇವೆ ಎಂದು ಲಿಖಿತವಾಗಿ ತಿಳಿಸಿದ ನಂತರ ಚಳುವಳಿಯನ್ನು ಕೈಬಿಡಲಾಯಿತು. ಪ್ರತಿಭಟನೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಮೈಸೂರು ಜಿಲ್ಲಾಧ್ಯಕ್ಷ ಹಾಡ್ಯ ರವಿ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು,ಜು.6–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಜು.9ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ.94487 53597, 99161 55453, 94487 38657 ಸಂಪರ್ಕಿಸಿ.

ಇಂದು ನಟನದಲ್ಲಿ 'ಕನ್ನಡ ಕಾವ್ಯ ಕಣಜ'


ಮೈಸೂರು, ಜು. 6–ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ, ನಾಟಕಕಾರ, ಚಿಂತಕ, ರಂಗ ಸಂಘಟಕ, ನೀನಾಸಂನ ನಿರ್ಮಾತೃ ಕೆ.ವಿ.ಸುಬ್ಬಣ್ಣ ಅವರ ನೆನಪಿನಲ್ಲಿ ನಾಟಕೋತ್ಸವವನ್ನು ಹಮ್ಮಿಕೊಳ್ಳುತ್ತಾ ಬರುತ್ತಿದ್ದು, ಇದೇ ಜುಲೈ 7ರಂದು ಸಂಜೆ 6.30ಕ್ಕೆ ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ 'ಕನ್ನಡ ಕಾವ್ಯಕಣಜ' ನಾಟಕ ಪ್ರದರ್ಶನಗೊಳ್ಳಲಿದೆ. ನಾಟಕದ ರಂಗಪಠ್ಯ, ಸಂಗೀತ, ನಿರ್ದೇಶನ ನಾಡಿನ ಹೆಸರಾಂತ ರಂಗಕರ್ಮಿ ಡಾ.ಶ್ರೀಪಾದ ಭಟ್ ಅವರದ್ದು.

ಮೈಸೂರಲ್ಲಿ ಆಂಬುಲೆನ್ಸ್‌ಗೆ ಹಠಾತ್ ಬೆಂಕಿ

ಮೈಸೂರು, ಜು.6(ಎಸ್‌ಪಿಎನ್)–ಚಲುಸುತ್ತಿದ್ದ ಆಂಬುಲೆನ್ಸ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಗಾಹುತಿಯಾದ ಘಟನೆ ಮೈಸೂರಿನ ದಾಸಪ್ಪ ವೃತ್ತದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಶನಿವಾರ ರಾತ್ರಿ ಸಂಭವಿಸಿದ್ದು, ಆಂಬುಲೆನ್ಸ್ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಹೃದ್ರೋಗಿ ಪಾರಾಗಿದ್ದಾರೆ.

ನಂಜನಗೂಡು ಸರ್ಕಾರಿ ಆಸ್ಪತ್ರೆಯಿಂದ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ 108 ಆಂಬುಲೆನ್ಸ್ (ಕೆಎ–51, ಜಿ–5343)ನಲ್ಲಿ ರೋಗಿಯನ್ನು ಕರೆತರಲಾಗುತ್ತಿತ್ತು. ಆಂಬುಲೆನ್ಸ್ ರಾತ್ರಿ 10.30ರ ಸುಮಾರಿನಲ್ಲಿ ದಾಸಪ್ಪ ವೃತ್ತದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಚಲುಸುತ್ತಿದ್ದಾಗ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ವಾಹನವನ್ನು ನಿಲ್ಲಿಸಿದ ಚಾಲಕ ರಮೇಶ್ ಮತ್ತು ಆಂಬುಲೆನ್ಸ್‌ನ ಸ್ಟಾಫ್‌ನರ್ಸ್ ರವೀಶ್ ಅವರು ವಾಹನದಲ್ಲಿದ್ದ ರೋಗಿಯನ್ನು ಕೆಳಗಿಳಿಸಿ ಸಮಯ ಪ್ರಜ್ಞೆ ಮೆರೆದಿದ್ದಾರೆ. ಕ್ಷಣಾರ್ಧದಲ್ಲೇ ಬೆಂಕಿಯ ಜ್ವಾಲೆ ಹರಡಿ ಆಂಬುಲೆನ್ಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.

ನಂತರ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿಗಳು ಬೆಂಕಿಯನ್ನು ನಂದಿಸಿದ್ದಾರೆ. ಈ ಮಧ್ಯೆ ಆಂಬುಲೆನ್ಸ್ ಸಿಬ್ಬಂದಿ ಬೇರೊಂದು ಆಂಬುಲೆನ್ಸ್ ಕರೆಸಿ ರೋಗಿಯನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ಸಾಗಿಸಿದ್ದಾರೆ.



ಬೆಂಕಿ ಹತ್ತಿ ಹುರಿಯುತ್ತಿರುವ ಆಂಬುಲೆನ್ಸ್.

ದಿವಂಗತರಿಗೆ ಗ್ರಾಮಾಭ್ಯುದಯ ಸಂಘದಿಂದ ನುಡಿನಮನ



ಇತ್ತೀಚೆಗೆ ನಿಧನರಾದ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಸೋಮಣ್ಣ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ವೆಂಕಟಾಚಲ ಅವರಿಗೆ ಗ್ರಾಮಾಭ್ಯುದಯ ಸಂಘದಿಂದ ಪಡುವಾರಹಳ್ಳಿಯಲ್ಲಿ ನುಡಿನಮನ ಸಲ್ಲಿಸಲಾಯಿತು. ಈ ವೇಳೆ ಗ್ರಾಮಾಭ್ಯುದಯ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಂ.ಭೈರಪ್ಪ, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಎನ್.ಸ್ವರೂಪ್, ಎಸ್.ಶಿಲ್ಪ, ವಕೀಲರಾದ ಕಲ್ಪನಾ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಗ್ರಾಮದ ಪ್ರಮುಖರಾದ ರಾಮಣ್ಣ, ತಿಮ್ಮಯ್ಯ, ರಾಮಸ್ವಾಮಿ, ಲೋಕೇಶ್ವರ, ರಾಮಚಂದ್ರ, ಎನ್.ಬೆಟ್ಟೇಗೌಡ, ಜಯರಾಂ, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ವೇಣು, ಫಾಲ್ಕನ್ ಪ್ರಸನ್ನ, ದಾಸನಕೊಪ್ಪಲ್ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರಿ ಕಚೇರಿಗಳಲ್ಲಿ ಬಯೋಮೆಟ್ರಿಕ್ ಕಡ್ಡಾಯ



ಮೈಸೂರು, ಜು.6(ಎಂಕೆ)–ಸರ್ಕಾರಿ ಕಚೇರಿಗಳಲ್ಲಿ ಬಯೋಮೆಟ್ರಿಕ್ ಕಡ್ಡಾಯಗೊಳಿಸಿ ಸಿಬ್ಬಂದಿ–ಆಡಳಿತ ಸುಧಾರಣೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಬಿ.ವಿಮಲಾಕ್ಷಿ ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯ ಸರ್ಕಾರದ ಕಚೇರಿಗಳು ಸೇರಿ ಅಧೀನಕ್ಕೊಳಪಡುವ ಎಲ್ಲಾ ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರಿ, ನೌಕರರ ದೈನಂದಿನ ಹಾಜರಾತಿಯನ್ನು ಬಯೋಮೆಟ್ರಿಕ್ ಯಂತ್ರದ ಮೂಲಕ ದಾಖಲಿಸಲು ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲು ಹಲವು ನಿರ್ದೇಶನಗಳನ್ನು ನೀಡಿದೆ. ಆದರೂ ಹಲವೆಡೆ ಈವರೆಗೂ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಅಳವಡಿಕೆಯಾಗಿಲ್ಲ. ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಜಾರಿಗೊಳಿಸದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರಿ ಕಚೇರಿಗಳಲ್ಲಿ ಜು.6ರೊಳಗೆ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಅಳವಡಿಸಿರುವ ವರದಿ ನೀಡಬೇಕು ಎಂದು ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.07.2024 ಭಾನುವಾರ, ಮಳೆ ನಕ್ಷತ್ರ : ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗುಜರಾತ್ ಕರಕುಶಲ ಉತ್ಸವ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ಮೈಸೂರು ಲಿಟರರಿ ಫೋರಂ:** ಮೈಸೂರು ಸಾಹಿತ್ಯ ಸಂಭ್ರಮ, ಎಸ್‌ವಿವೈಎಂ ಮತ್ತು ಗ್ರಾಮ್ ಸಂಸ್ಥಾಪಕ ಡಾ. ಬಾಲಸುಬ್ರಮಣಿಯಮ್ ರಚಿಸಿರುವ 'ಪವರ್ ವಿಥಿನ್, ದಿ ಲೀಡರ್‌ಶಿಪ್ ಲೆಗಸಿ ಆಫ್ ನರೇಂದ್ರ ಮೋದಿ' ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಲೇಖಕ, ಇತಿಹಾಸಕಾರ ಡಾ. ವಿಕ್ರಮ್ ಸಂಪತ್, ಪ್ರಥಮ ಪ್ರತಿ ಸ್ವೀಕಾರ: ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಛೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಸುಧನ್ವ ಧನಂಜಯ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಒಲವು ಫೌಂಡೇಷನ್, ವಿಧಾತ್ರಿ ಮಹಿಳಾ ಸಮಾಜ :** ಪರಿಸರ ಪ್ರೀತಿ ಕವಿಗೋಷ್ಠಿ ಮತ್ತು ಪರಿಸರ ಪ್ರೇಮಿಗಳಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಮುಡಾ ಅಧ್ಯಕ್ಷ ಕೆ. ಮರಿಗೌಡ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪರಿಸರ ಜಾಗೃತಿ ಭಾಷಣ : ನಗರಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀಮತಿ ಎಸ್. ಮೀನಾಕ್ಷಿ, ಮುಖ್ಯ ಅತಿಥಿಗಳು: ಹಿರಿಯ ಕವಯಿತ್ರಿ ಡಾ.ಎ.ಪುಷ್ಪಾ ಅಯ್ಯಂಗಾರ್, ವಿಧಾತ್ರಿ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಜಿ.ಆರ್.ವೀಣಾ, ಒಲವು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ರಾಬರ್ಟ್ ಇ. ಕವನ್ರಾಗ್, ಸನ್ಮಾನಿತರು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಮಾಜಸೇವಕರಾದ ಡಾ. ಎಂ.ಪಿ. ವರ್ಷ, ಶ್ರೀಮತಿ ಲೀಲಾ ಶಿವಕುಮಾರ್, ವೆಂಕಟೇಶ್ ಖರೀದಿ, ಶ್ರೀಮತಿ ಭಾನು ಮೋಹನ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಕಲಾಸುರುಚಿ, ದೇವಗೀತಂ ಚಾರಿಟಬಲ್ ಟ್ರಸ್ಟ್:** ಡಾ.ಕೆ.ಟಿ.ಉದಯಕಿರಣ್ ಪ್ರಸ್ತುತಪಡಿಸುವ ಪ್ರಾತ್ಯಕ್ಷಿಕೆ ವಿಶ್ವ ಸಂಗೀತದಲ್ಲಿ ರಾಗ ಕೀರವಾಣಿ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ :** ಪ್ರತಿಭಾ ಪುರಸ್ಕಾರ ಸಮಾರಂಭ, ಉದ್ಘಾಟನೆ : ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಉದ್ಘಾಟನೆ : ಸಂಘದ ರಾಜ್ಯಾಧ್ಯಕ್ಷ ಸಿ. ರಮೇಶ್, ಅಧ್ಯಕ್ಷತೆ : ಜಿಲ್ಲಾಧ್ಯಕ್ಷ ಹೆಚ್.ಜೆ. ರಾಘವೇಂದ್ರ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಅಧ್ಯಕ್ಷ ಕೆ. ಮರಿಗೌಡ, ಸೆಸ್ಕ್ ತಾಂತ್ರಿಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್, ಸೆಸ್ಕ್ ಅಧೀಕ್ಷಕ ಅಭಿಯಂತರ ಎ.ಎ. ಸುನೀಲ್‌ಕುಮಾರ್, ಕಾರ್ಯಪಾಲಕ ಅಭಿಯಂತರರಾದ ಪೂರ್ಣಚಂದ್ರ ತೇಜಸ್ವಿ, ಶ್ರೀಮತಿ ಎಸ್.ಬಿ. ಅನಿತಾ, ಉಪಸ್ಥಿತರು : ಅಧೀಕ್ಷಕರ ವಿತರಕ ಕೆ.ಎಸ್. ಅಭಿಲಾಷ್, ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್, ರವೀಶ್, ಎಸ್. ಕಿರಣ್, ನವೀನ್‌ಚಂದ್ರ, ಶ್ರೀಮತಿ ಇ.ಎಂ. ಧರಣೇಶ್‌ಕುಮಾರಿ, ಸ್ಥಳ: ಸಾಮ್ರಾಟ್ ಕಲ್ಯಾಣ ಮಂದಿರ, ಉದಯರವಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್, ಸಂಸ್ಕೃತಿ ಪ್ರಕಾಶನ :** ಬಿ.ಎಂ. ಮಹಾದೇವ್ ಮೂರ್ತಿಯವರ ಸವೆದ ಪಯಣ ಆತ್ಮಕಥೆ ಮತ್ತು ಬಾಳತೇರು ಕವನ ಸಂಕಲನ, ಅಧ್ಯಕ್ಷತೆ : ಸಾಹಿತಿ ಹೊರೆಯಾಲ ದೊರೆಸ್ವಾಮಿ, ಪುಸ್ತಕ ಬಿಡುಗಡೆ : ಚಿಂತಕ ಪ್ರೊ. ಕಾಳೇಗೌಡ ನಾಗವಾರ, ಮುಖ್ಯ ಅತಿಥಿಗಳು : ಸಾಹಿತಿ ನಾ. ದಿವಾಕರ, ವಕೀಲ ಬಿ.ಆರ್. ರಂಗಸ್ವಾಮಿ, ಎಸ್. ಚಿಕ್ಕಸಾವಕ, ಸಂಸ್ಕೃತಿ ಸುಬ್ರಮಣ್ಯ, ಬಿ.ಎಂ. ಮಹದೇವಮೂರ್ತಿ, ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಕವಿತಾ ಪ್ರಕಾಶನ:** ರಘುಪತಿ ತಾಮ್ಹನ್‌ಕರ್ ಅವರ ನೋಟಿನ ನಂಟು ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಮುಖ್ಯ ಅತಿಥಿಗಳು: ಕೆನರಾ ಬ್ಯಾಂಕ್ ವಿಭಾಗೀಯ ಪ್ರಬಂಧಕ ಕೆ.ಗೋಪಾಲ, ಲೇಖಕಿ ಡಾ.ಶುಭಶ್ರೀ ಪ್ರಸಾದ್, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಸ್ಥಳ: ಎಸ್.ಪಿ.ಭಟ್ ಸಭಾಂಗಣ, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ–295, ಶರಣೆ ರಾಣಿ ಕುಮಾರಸ್ವಾಮಿ ಅವರಿಂದ ಧ್ಯಾನದ ಮಹಿಮೆ, ಯೋಗಾಭ್ಯಾಸದ ಉಪಯೋಗಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ನಾರಾಯಣ ಹೆಗಡೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಒಡಹುಟ್ಟಿನ ನುಡಿಗಳು– ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ. ತೀತೀರ ರೇಖಾ ವಸಂತ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ರೋಹಿಣಿ ಸುಧಾಪುನ್, ವ್ಯಾಖ್ಯಾನ : ಡಾ.ಬಿ.ವಿ. ವಸಂತ್ ಕುಮಾರ್, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ಸೋಶಿಯಲ್ ರೋಲ್ ಮಾಡೆಲಿಂಗ್ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ. ಬಿ. ಎನ್. ರವೀಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ : ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ : 'ಉಶು' ಆಟಗಾರರಾದ ಅಯನ್ ಅಲಿ, ಅಫ್ಜಾ ಹಾಗೂ ಇವರ ತಂದೆ ಅಮೀರ್ ಜಾನ್ ಅವರೊಂದಿಗೆ ಮಾತುಕತೆ. ನಡೆಸಿಕೊಡುವವರು : ಜಾಂಪಣ್ಣ ಆಶೀಹಾಳ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಎಂ.ಎ. ಶೋಭಾ, 12.45 ಜನಪದ ಸಂಗೀತ: ಚಾಮರಾಜನಗರ ರೇಚಂಬಳ್ಳಿಯ ಲಕ್ಷ್ಮಮ್ಮ ಮತ್ತು ಸಂಗಡಿಗರಿಂದ ಸರಸ್ವತಿ ಹಾಡು, 1.20 ಭಾವಗೀತೆಗಳು – ಟಿ.ಎನ್. ಅಶ್ವಿನಿ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಹುಲಿಯ ಹಾಲಿನ ಮೇವು", 3.40 ಸಿರಿ ಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.45 ಯಕ್ಷಗಾನ : ತಾಳ ಮದ್ದಲೆ, ಪ್ರಸಂಗ–ನರಕಾಸುರ ಮೋಕ್ಷ, ಪ್ರಸ್ತುತಿ–ಕಾಸರಗೋಡು ಪೆರ್ಲದ ಪಡ್ರೆ ಚಂದು ಸ್ಮಾರಕ ಯಕ್ಷಗಾನ ತರಬೇತಿ ಕೇಂದ್ರದ ಕಲಾವಿದರು, 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳೀಮಠ್ ಹಾಗೂ ಕೆ.ಬಿ. ಮೀನಾ, 5.30 ಪಶುಧನ್ ಸೆ ಬೆಹತರ್ ಜೀವನ್ ಸರಣಿ, ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, ಭಾರತ ಸರ್ಕಾರ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ– ಆರ್. ಲೋಕೇಶ್ವರಿ, 7.45 ಆಕಾಶವಾಣಿ ಜಾತ್ರಾ ವಿಶೇಷ : ಮೈಸೂರು ಜಿಲ್ಲೆ, ತಿರುಮಕೂಡಲು ನರಸೀಪುರ ತಾಲೂಕು ತಲಕಾಡು ಹೋಬಳಿ ಮುಡುಕುತೊರೆ ಜಾತ್ರಾ ವಿಶೇಷ ಹಂಚಿಕೊಳ್ಳುತ್ತಾರೆ ಜಾನಪದ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು ಹಾಗೂ ನೀಲಗಾರ ಗಾಯಕ ಡಾ. ಮೈಸೂರು ಗುರುರಾಜ್, ಪ್ರಸ್ತುತಿ : ಅಬ್ದುಲ್ ರಶೀದ್, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಯಳಂದೂರು ತಾಲೂಕು ಯರಿಯೂರಿನ ಜಾನಪದ ಹಾಡುಗಾರ್ತಿ, ಆಶುಕವಿ, ಮಾಳಗರಸಮ್ಮ ಹಾಗೂ ಅವರ ಸಹೋದರಿಯರಾದ ಜಯಲಕ್ಷ್ಮಿ ಮತ್ತು ರತ್ನಮ್ಮ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ತಾಯೂರು ಚನ್ನನಾಯಕ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಉಸ್ತಾದ್ ಫೈಯಾಜ್ ವಾಸೀಫುದ್ದೀನ್ ದಗರ್, ದ್ರುಪದ್, ಧಮರ್

■ **ಜನಸೇವಕ ಯುವ ಬ್ರಿಗೇಡ್ :** ವಿಶ್ವ ಯೋಗ ದಿನಾಚರಣೆ ಅಂಗವಾಗಿ ಉಚಿತ ಹೃದಯ ಸಂಬಂಧಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ, ಅಧ್ಯಕ್ಷತೆ : ಬ್ರಿಗೇಡ್ ಅಧ್ಯಕ್ಷ ಡಿ. ರಾಘವೇಂದ್ರ, ಮುಖ್ಯ ಅತಿಥಿಗಳು : ಯದುವೀರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಮಾಜಿ ಶಾಸಕ ಎಲ್. ನಾಗೇಂದ್ರ, ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಬಿಜೆಪಿ ಮುಖಂಡ ಕವೀಶ್‌ಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಶ್ರೀಮತಿ ಎಂ. ಮೋನಿಕಾ, ಕಿರಣ್ ನಾಯ್ಡು, ಶ್ರೀಮತಿ ಸವಿತಾ ಪುಟ್ಟೇಗೌಡ, ಎಸ್.ಇ. ಗಿರೀಶ್, ಕಲ್ಪನಾ, ಸ್ಥಳ: ನರ್ಮ್ ಯೋಜನೆ ಅಪಾರ್ಟ್‌ಮೆಂಟ್, ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರ, ಮಹದೇವಪುರ, ಬೆಳಗ್ಗೆ 11.30 ರಿಂದ.

■ **ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪೇಯಿಂಟಿಂಗ್ ಮತ್ತು ಡ್ರಾಯಿಂಗ್ ಎಕ್ಸಿಬಿಷನ್, ಸ್ಥಳ: ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್, ಚಾಮರಾಜಪುರಂ, ಮಧ್ಯಾಹ್ನ 12.30ಕ್ಕೆ

■ **ಸ್ವರಾಲಯ ಸಂಗೀತ ಸಂಸ್ಥೆ :** ಸ್ವರಾಲಯ ಸಾಂಸ್ಕೃತಿಕ ಹಬ್ಬ, ಉದ್ಘಾಟನೆ : ಸಂಗೀತ ಶಿಕ್ಷಕ ವಿದುಷಿ ಆರ್. ಲಲಿತಾ, ಮುಖ್ಯ ಅತಿಥಿಗಳು : ಸಂಗೀತ ಶಿಕ್ಷಕರಾದ ವಿದುಷಿ ಶ್ರೀಮತಿ ಸುಬ್ಬಲಕ್ಷ್ಮಿ, ವಿದುಷಿ ಶ್ರೀಮತಿ ವಿಜಯಲಕ್ಷ್ಮಿ, ಅಧ್ಯಕ್ಷತೆ : ವಿದುಷಿ ಶ್ರೀಮತಿ ಡಾ. ಸುಮಹರಿನಾಥ್, ಸನ್ಮಾನಿತರು : ನಾದವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ ಸಂಸ್ಥಾಪಕ ಅಧ್ಯಕ್ಷ ವಿದ್ವಾನ್ ನವೀನ್ ಎಂ.ಎಸ್. ಅಂದಗಾರ್, ಸ್ಥಳ:ಗಾನಭಾರತಿ (ವೀಣೆ ಶೇಷಣ್ಣ ಭವನ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4ಕ್ಕೆ.

■ **ಸ್ಕಾಲರ್ಸ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಗಾಯಕ ಆರ್. ಕೃಷ್ಣಮೂರ್ತಿ (ಡಬಲ್ ವಾಯ್ಸ್) ಅವರ ಸಾರಥ್ಯದಲ್ಲಿ ಮಧುರ ಗಾನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 5ಕ್ಕೆ

■ **ಸಹಾರಾ ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಅಸೋಸಿಯೇಷನ್ :** ಕರಕುಶಲ ಮತ್ತು ಹ್ಯಾಂಡ್‌ಲೂಂ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಹಿಂಭಾಗ, ಸಂಜೆ 5ಕ್ಕೆ.

■ **ರೋಟರಿ ಸೆಂಟ್ರಲ್ ಮೈಸೂರು :** ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಸಾನ್ನಿಧ್ಯ : ಶ್ರೀರಾಮಕೃಷ್ಣ ವಿದ್ಯಾಶಾಲಾ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಪದಗ್ರಹಣ ಅಧಿಕಾರಿ : ಜಿಲ್ಲಾ ಗವರ್ನರ್ ಸತೀಶ್ ಬೋಲಾರ್, ಗೌರವ ಅತಿಥಿಗಳು : ಚೇತನ್ ವಿಶ್ವನಾಥ್, ಸ್ಥಳ: ಹೋಟೆಲ್ ಪೈ ವಿಸ್ತಾ, ಸಂಜೆ 7ಕ್ಕೆ.

1ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 1 ವರ್ಷ ಕಳೆದರೂ ನಿಮ್ಮ ಸವಿನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿರುತ್ತದೆ. ನಿಮ್ಮ ದಿವ್ಯ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಸೋಮಶೇಖರ್.ಎಸ್
(ಪತ್ರಿಕಾ ಏಜೆಂಟ್)
ನಿಧನ: 07.07.2023

ದುಃಖತಪ್ತರು: ತಂದೆ, ತಾಯಿ, ಪತ್ನಿ, ಮಕ್ಕಳು, ತಂಗಿ, ತಮ್ಮ ಮತ್ತು ಸ್ನೇಹಿತರು, ಬಂಧುಗಳು

ವೈಕುಂಠರಾಧನೆ



ನಮ್ಮ ಮನದಲ್ಲಿ ಸದಾ ನಿಮ್ಮ ನೆನಪು

ದುಃಖತಪ್ತರು:
ಶ್ರೀಮತಿ ಸರಸ್ವತಿ ಕೆ.
ವಿನುತ-ಲೋಕೇಶ್,
ಸಂಧ್ಯಾ-ಶಶಿಕುಮಾರ್,
ಪ್ರಜ್ವಲ್ ಕಣ್ಣ,
ನಾಗೇಶ್ ಮತ್ತು
ಕುಟುಂಬವರ್ಗದವರು

ಶ್ರೀ ಕಣ್ಣ ಎನ್.
ಮರಣ-27-06-2024

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

FOR SALE

1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 40x72, 35x45 House Vidyaranyapuram
6. 20x30, Sites For Sale At Yelwala 30x40 Sites at Bogadi Rainbow School

PRAKRUTHI PROPERTIES
95386 90359, 90359 90359

ಸೈಟುಗಳು ಮಾರಾಟಕ್ಕಿವೆ

ಬೋಗಾದಿ ಮೇನ್ ರೋಡ್‌ಗೆ ಹೊಂದಿಕೊಂಡಂತೆ ಮುಡಾದಿಂದ ಅನುಮೋದನೆಗೊಂಡ ಅತೀ ಕಡಿಮೆ ಬೆಲೆಗೆ 30x40 ಅಳತೆಯ ಸೈಟುಗಳು ದೊರೆಯುತ್ತವೆ.

8431146597
8088702979

Aquaguard & Kent Sales and Service

Service charge :300/-

9901200444

FOR RENT

At Vivekananda Nagar Circle, Mysuru. Suitable for Polyclinic, Diagnostic Centre and Hotel. Contact:

9449406844

ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಹತ್ವಾಳ ಮುಖ್ಯ ರಸ್ತೆಯಲ್ಲಿ 1 ಎಕರೆ 28 ಗುಂಟೆ, ಕೋಳದಹುಂಡಿ 1 ಎಕರೆ, 31 ಗುಂಟೆ. ಮದ್ದೂರುಹುಂಡಿ 32 ಗುಂಟೆ, ಮದ್ದೂರು 25 ಗುಂಟೆ, ಮಾವಿನಹಳ್ಳಿ 3 ಎಕರೆ 7ಗುಂಟೆ ಮತ್ತು 4 ಎಕರೆ 10 ಗುಂಟೆ, ಪೆರಿಫೆರಲ್ ರಿಂಗ್ ರಸ್ತೆ ಪಕ್ಕದಲ್ಲಿದೆ. ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ 20 ಗುಂಟೆ, ಇತರೆ ಜಮೀನು ಮತ್ತು ತೋಟಗಳು ಮಾರಾಟಕ್ಕಿವೆ. ಸಂಪರ್ಕಿಸಿ:

9945661696 / 9663793666

ಕೈಲಾಸ ಶಿವಗಣರಾಧನಾ ಆಹ್ವಾನ ಪತ್ರಿಕೆ



ಇವರು ದಿ: 28.6.2024 ರಂದು ಶಿವೈಕ್ಯರಾಗಿದ್ದು ತತ್ಸಂಬಂಧ ಕೈಲಾಸ ಶಿವಗಣರಾಧನಾ ಕಾರ್ಯವನ್ನು ದಿ: 8-7-2024 ಸೋಮವಾರ ಬೆಳಗ್ಗೆ 8 ಗಂಟೆಗೆ ನಮ್ಮ ಸ್ವಗೃಹ ನಂಜನಗೂಡು ತಾಲ್ಲೂಕಿನ ಅಂಬಳೆ ಗ್ರಾಮದಲ್ಲಿ ಏರ್ಪಡಿಸಲಾಗಿದೆ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ಎ.ಪಿ. ಮುದ್ದರಾಮಪ್ಪ
(ಮಾಜಿ ತಾ.ಪಂ. ಅಧ್ಯಕ್ಷರು)

ದುಃಖತಪ್ತರು: ಶ್ರೀಮತಿ ಮಹದೇವಮ್ಮ ಮತ್ತು ಮಕ್ಕಳು ಸೊಸೆಯಂದಿರು, ಅಳಿಯಂದಿರು ಕುಟುಂಬ ವರ್ಗದವರು

ಮೊದಲನೇ ವರ್ಷದ ತಿಥಿಯ ಆಹ್ವಾನ ಪತ್ರಿಕೆ



ಇವರ ಮೊದಲನೇ ವರ್ಷದ ತಿಥಿ ದುನ್ನು ದಿ: 7-7-2024 ಭಾನುವಾರ ಮಧ್ಯಾಹ್ನ 1 ಗಂಟೆಗೆ ನಮ್ಮ ಸ್ವಗೃಹ # 609, 7ನೇ ಕ್ರಾಸ್, ಎಂ. ಬ್ಲಾಕ್, ಸ್ವಪಮಂಗ ರಸ್ತೆ, ಕುವೆಂಪುನಗರ, ಮೈಸೂರು, ಸುಭೋಧ ಶಾಲೆ ಎದುರು ಇಲ್ಲಿ ಏರ್ಪಡಿಸಲಾಗಿದೆ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ಶ್ರೀಮತಿ ಬಿ. ವಿಜಯಲಕ್ಷ್ಮಿ
ಜನನ: 14.01.1951
ಮರಣ: 10.07.2023

ದುಃಖತಪ್ತರು: ಶ್ರೀಮತಿ ಸೌಮ್ಯ ಮತ್ತು ಶ್ರೀ ಬಿ. ಸೋಮಶೇಖರ್ ಹಾಗೂ ಕುಟುಂಬ ವರ್ಗದವರು

ಭೋಜನ: 1.30ಕ್ಕೆ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಿಂಹದಮರಿ ಸೇವಾ ಟ್ರಸ್ಟ್ (ರಿ.) ನ ಸದಸ್ಯರಾದ

ಸ್ವಾಮಿ ಶಿವು ರವರಿಗೆ

ಹುಟ್ಟುಹಬ್ಬದ ಶುಭಾಷಯಗಳು



ಶುಭಕೋರುವವರು :
ನಂಜುಂಡಸ್ವಾಮಿ.
ಅಧ್ಯಕ್ಷರು
ಸಿಂಹದಮರಿ ಸೇವಾ ಟ್ರಸ್ಟ್ (ರಿ.)
ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಗಾಂಧಿನಗರ, 3ನೇ ಮೇನ್, ಮನೆ ನಂ:3852/1 ರಲ್ಲಿ ವಾಸವಾಗಿರುವ ಲೇಟ್.ಕಾಳಯ್ಯರವರ ಮಗನಾದ ಸುಮಾರು 55 ವರ್ಷ ವಯಸ್ಸುಳ್ಳ ಶ್ರೀ.ಕೆ. ಮಹದೇವಸ್ವಾಮಿ ಮತ್ತು ಇವರ ಧರ್ಮ ಪತ್ನಿಯಾದ ಸುಮಾರು 52 ವರ್ಷ ವಯಸ್ಸುಳ್ಳ ಶ್ರೀಮತಿ. ಬಿ. ಆರತಿ ರವರುಗಳು ನನ್ನ ಕಕ್ಷಿದಾರರುಗಳಾಗಿದ್ದು, ಸದರಿ ರವರುಗಳು, ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಕ್ಯಾತಮಾರನಹಳ್ಳಿ, ಕೆ.ಎನ್.ಪುರ, 3ನೇ ಕ್ರಾಸ್, ಮನೆ ನಂ: 4868 ರಲ್ಲಿ ವಾಸವಾಗಿರುವ ಶ್ರೀ. ಲೋಕೇಶ್. ಆರ್. ರವರ ಧರ್ಮಪತ್ನಿಯಾದ ಸುಮಾರು 32 ವರ್ಷ ವಯಸ್ಸುಳ್ಳ ಶ್ರೀಮತಿ. ಶಾಂತಲಾ.ಪಿ ರವರಿಂದ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೀಳಾಳು ಗ್ರಾಮಕ್ಕೆ ಸೇರಿದ ಸರ್ವೆ ನಂ:125/6 ರ ಭಾಗಾಯ್ತು ವಿಸ್ತೀರ್ಣ 01-00 ಎಕರೆ(ಒಂದು ಎಕರೆ) ಭಾಗಾಯ್ತು ಜಮೀನನ್ನು ಕ್ರಯಕ್ಕೆ ಪಡೆಯಲು ಒಪ್ಪಿ ಮಾಲೀಕರು ಮತ್ತು ನನ್ನ ಕಕ್ಷಿದಾರರುಗಳು ಸೇರಿ ದಿನಾಂಕ: 01-07-2024 ರಂದು ಸ್ಥಿರ ಸ್ವತ್ತಿನ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಸದರಿ ಸ್ವತ್ತಿನ ವಿಚಾರವಾಗಿ ಯಾರಿಗಾದರೂ ಸಂಘ, ಸಂಸ್ಥೆ, ಬ್ಯಾಂಕ್, ಹಣಕಾಸು ಸಂಸ್ಥೆಗಳು ಯಾವುದೇ ರೀತಿಯ, ಆಸಕ್ತಿ, ಹಕ್ಕು, ಅಡ್ಡಿ ಆಕ್ಷೇಪಣೆಗಳಿದ್ದಲ್ಲಿ ಅಥವಾ ತಂಟೆ ತಕರಾರುಗಳಿದ್ದಲ್ಲಿ ಮಾಲೀಕತ್ವ ಹೊಂದಿದಲ್ಲಿ, ಸದರಿ ಈ ದಿನದ ಬಗಾಯಿತ್ತು ಒಂದು ವಾರದ (7 ದಿನ) ದೊಳಗಾಗಿ ಲಿಖಿತವಾಗಿ ದಾಖಲೆಗಳೊಂದಿಗೆ ಸದರಿ ಮೇಲ್ಕಂಡ ಸ್ವತ್ತಿನ ಖರೀದಿದಾರರ ಪೈಕಿ ಶ್ರೀ. ಕೆ. ಮಹದೇವಸ್ವಾಮಿ ಅಥವಾ ಈ ಕೆಳಗೆ ಸಹಿ ಹಾಕಿರುವ ವಕೀಲರನ್ನು ಸಂಪರ್ಕಿಸಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಒಂದು ವಾರದ (7 ದಿನ) ವಾಯಿದೆಯ ನಂತರ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರುಗಳು ಸಂಬಂಧಪಟ್ಟ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಸದರಿ ಷೆಡ್ಯೂಲ್ ಸ್ವತ್ತನ್ನು ತಮ್ಮ ಹೆಸರಿಗೆ ಕ್ರಯ ಪತ್ರ ನೋಂದಣೆ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೀಳಾಳು ಗ್ರಾಮಕ್ಕೆ ಸೇರಿದ ಸರ್ವೆ ನಂ:126/6 ರ ಭಾಗಾಯ್ತು ವಿಸ್ತೀರ್ಣ 01-00 ಎಕರೆ(ಒಂದು ಎಕರೆ) ಭಾಗಾಯ್ತು ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ : ಸಾ.ಹಿ.5, ಪಶ್ಚಿಮಕ್ಕೆ : ನೀರು ಹರಿಯುವ ಹಳ್ಳ, ಉತ್ತರಕ್ಕೆ : ಸಾ.ಹಿ.4, ದಕ್ಷಿಣಕ್ಕೆ : ರಸ್ತೆ, ಈ ಮಧ್ಯೆ ಇರುವ ವಿಸ್ತೀರ್ಣ 01-00 ಎಕರೆ (ಒಂದು ಎಕರೆ) ಭಾಗಾಯ್ತು ಜಮೀನು ಮಾತ್ರ.

ಸಹಿ/- ಕೆ. ಮಹದೇವಸ್ವಾಮಿ, ಮೊ: 7892716099

Sd/- SATHISH M. K., B.A.L., LL.B.,
ADVOCATE & NOTARY KAR/233/2005
SOUGANDHIKA LAW CHAMBER
Beside Sub-Registrar Office (Mysore East) Dr.Rajkumar Road, Shakth nagar
MYSURU. Mob: 9342126049
ದಿ.: 06-07-2024

ONLY ONE WAY TAXI CHARGE

Hi! TAXI

MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

HOUSE FOR SALE

Mysore (MUDA) site 30x40, 15 years Building, Vijaynagar 2nd stage, near sidaramaiaha old house, Gf 1 BHK, Covered Carparking, FF 2 BHK, SF Room with toilet, fetching rent 26,000/- 1.65 crores Negotiable .

Owner
8971106460

SHUBHYATRA HOLIDAYS

Mysore
Mob: 74833 73991

Chardham Yathra for 12 days by air.
Few seats are available for September & October

India's Biggest Handicraft & Handloom Exhibition

Handicrafts & Handloom Expo.

SHHA

SAHARA ART & CRAFTS

SHOPPING FESTIVAL 2024

EXHIBITIONS CUM SALE



Artisans and weavers displaying and selling their handicrafts and handlooms product under one roof from all over India.

DATE - 6TH JULY 2024 TO 15TH SEP 2024.

VENUE - SCOUTS AND GUIDS GROUND BEHIND DC OFFICE MYSORE - 570005

Grand Inauguration by Sri K Harish Gowda, MLA Chamaraja Constituency Mysore

Insta ID

Entry & Parking Free All Credit, Debit Cards & Paytm Accepted

9880903786 / 9590018133 / 8892138769

@sahara arts and crafts
@saharaartandcrafts
@sahara arts and crafts

Regd. by Ministry of Textiles, Govt. of India
Organised by Sahara Mahila Swasahaya Sangha
Co-Organised by Sahara Handicraft Handloom Association

ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ನಂ.: ಎಸ್‌ಎಸ್‌ಟಿ/2/ಸಿಆರ್/ಗಿ/ಕ. 11/2024-25 ದಿನಾಂಕ: 06-07-2024

2024ನೇ ಸಾಲಿನ ಶ್ರೀ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳ ವಿವರ:

ಕ್ರ.ಸಂ.	ದಿನಾಂಕ	ಸಮಯ	ಕಾರ್ಯಕ್ರಮದ ವಿವರ
1.	ದಿ: 09-07-2024 ಮಂಗಳವಾರ	ರಾತ್ರಿ: 8.00 ಗಂಟೆಗೆ	ವರಪೂಜಾ ಮಹೋತ್ಸವ
2.	ದಿ: 10-07-2024 ಬುಧವಾರ	ಸಂಜೆ: 5.00 ಗಂಟೆಗೆ	"ಕಾಶೀಯಾತ್ರಾ" ಮಹೋತ್ಸವ ಮತ್ತು ರಾತ್ರಿ 7.15 ರಿಂದ 7.45 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ "ಧಾರಾಮಹೋತ್ಸವ"
3.	ದಿ: 14-07-2024 (ಭಾ) ದಿ: 15-07-2024 (ಸೋ) ದಿ: 16-07-2024(ಮಂ)	ಸಂಜೆ: 7.00ಗಂಟೆಗೆ	ಕಪಿಲಾ ನದಿಯಲ್ಲಿ "ತೆಪ್ಪೋತ್ಸವ" ನಡೆಯಲಿದೆ

ದಿನಾಂಕ: 11-07-2024 ರಿಂದ ದಿನಾಂಕ: 16-07-2024 ರ ವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಶ್ರೀಯವರ ಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ.

ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಜಗದೀಶ್ ಕುಮಾರ್ ಎಂ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.	ಡಾ. ಪಿ. ಶಿವರಾಜು (ಅಯ್ಕೆ ಶ್ರೇಣಿ) ಕ.ಆ.ಸೇ ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.	ಲಕ್ಷ್ಮೀಕಾಂತ ರೆಡ್ಡಿ ಜಿ. ಭಾ.ಆ.ಸೇ ಜಿಲ್ಲಾಧಿಕಾರಿ ಮೈಸೂರು ಜಿಲ್ಲೆ, ಮೈಸೂರು.	ಬಸವರಾಜೇಂದ್ರ ಹೆಚ್, ಭಾ.ಆ.ಸೇ ಆಯುಕ್ತರು, ಹಿಂದೂಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು.

JARIR BOOK STORE, SAUDI ARABIA
Free Recruitment

COUNTER SALESMEN
For English Books, Computer & Peripheral, Video Games, Office Stationery & Arts/Craft, Smart Phone & Electronics, etc.
Aged 23-35 years, 3 years min exp, Smart and fluent in English.
Salary INR 50k+

HEAVY DUTY DRIVERS
Indian heavy licence with min 5 years exp. Salary INR 35k+

FREE ACCOMMODATION, VISA & TICKET
WALK IN INTERVIEW - 7th July 2024 (10am to 4pm)

SHREE GURU RESIDENCY
Jhansi Lakshmi Bai Cross Road,
Devaraja Mohalla, Mysuru, Karnataka - 570001
Please send your CV to: mail@axceltrees.com

Manu Agency, Crystal Tower, No.402, 4th Floor, Gundavali Road No.3, Off M.V. Road, Andheri (East), Mumbai - 400069. (Reg. B-0528/MUM/PER/1000+/5/5488/2000; Valid till : 03/10/2028; DM: 1633811)

HP HYLAND PROPERTIES
DTCP APPROVAL

ನಿಸರ್ಗ ಇಕೋ ಪ್ಯಾರಡೈಸ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ

ಸುಲಭ 4 ಕಂತುಗಳ ಸೌಲಭ್ಯವಿದೆ

ಕೇವಲ ₹650/ ಪ್ರತಿ ಚದರ ಅಡಿ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

74060 01386
90713 86615



ನಕ್ಕರೆ ಅದೇ ಸ್ವರ್ಗ

ಗುಂಡ : ಕೆಲವು ಹುಡುಗಿಯರು ತುಂಬಾ ಕಲಿಯೋದಿಕ್ಕೆ ಆಸಕ್ತಿ ತೋರಿಸೊಲ್ಲ.

ತಿಮ್ಮ : ಯಾಕೆ?

ಗುಂಡ : ಅವರಿಗೆ ಚೆನ್ನಾಗಿ ಗೊತ್ತು. ಪ್ರಪಂಚದ ಯಾವುದೋ ಮೂಲೆಯಲ್ಲಿ ತನಗಾಗಿ ಒಬ್ಬ ನಿದ್ದೆ ಬಿಟ್ಟು ಓದುತ್ತಾ ಇದ್ದಾನೆ ಅಂತ!

ಮೈಸೂರು ಮಿತ್ರ

ಭಾನುವಾರ, 7 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇನ್ನೊಬ್ಬರು ಹೇಗಿರಬೇಕು ಎಂದು ವಿಮರ್ಶಿಸುವ ಬದಲು ನಾವು ಹೇಗಿದ್ದೇವೆ ಎಂದು ನಮ್ಮೊಳಗೇ ಇಣುಕಿ ನೋಡಿಕೊಂಡು ನ್ಯೂನತೆ ಸರಿಪಡಿಸಿಕೊಳ್ಳೋಣ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಷ್ಟರ ಸಂಗದಿ ನೆರಳು ಕೊಂಯ್ಯದೆ ಬಿಡದು ಕೊರಳು

ನಿಮ್ಮ ಪತ್ರಗಳು

ಮಾನವ ಬುದ್ಧಿಮತ್ತೆ ಪ್ರಯೋಗಿಸಿ ಬೋಗಾದಿ ಮುಖ್ಯ ರಸ್ತೆಯಲ್ಲಿ ಜೀವ ಉಳಿಸಬಹುದು



ಮಾನ್ಯರೆ,

ಮೈಸೂರಿನ ಬೋಗಾದಿ ಮುಖ್ಯ ರಸ್ತೆ ಸಿಗ್ನಲ್‌ನಿಂದ ಅಮೃತ ಬಸ್ ನಿಲ್ದಾಣದವರೆಗೆ ವಾಹನ ಸವಾರರಿಗೆ ದುಃಸ್ವಪ್ನವಾಗಿ ಪರಿಣಮಿಸಿದ್ದು, ರಾತ್ರಿ ವೇಳೆ ಮೀಡಿಯನ್‌ಗೆ ಡಿಕ್ಕಿಯಾಗಿ ಅಪಘಾತಗಳು ಸಂಭವಿಸುತ್ತಿವೆ. ಈ ಅಪಘಾತಗಳು ವಾಹನಗಳಿಗೆ ಹಾನಿ, ಸವಾರರಿಗೆ ಗಾಯಗಳು ಮತ್ತು ಮುಖ್ಯ ರಸ್ತೆಯಲ್ಲಿ ಟ್ರಾಫಿಕ್ ಅಡಚಣೆಗೆ ಕಾರಣವಾಗುತ್ತವೆ.

ಮೀಡಿಯನ್ ಅನ್ನು ವ್ಯವಸ್ಥಿತವಾಗಿ ಅಳವಡಿಸಲಾಗಿಲ್ಲ. ರಸ್ತೆಗಳಲ್ಲಿ ಹಳದಿ ಪ್ರತಿಫಲಕಗಳು ಕಾಣೆಯಾಗಿವೆ ಮತ್ತು ದೂರದಿಂದ ಬರುವವರಿಗೆ ಮೀಡಿಯನ್ ಇರುವುದನ್ನು ಖಾತರಿಪಡಿಸಿಕೊಳ್ಳಲು ಉದ್ದವಾದ ಕಂಬಗಳಲ್ಲಿ ಪ್ರತಿಫಲಕಗಳಿಲ್ಲದಿರುವುದು ಮತ್ತು ಅಧಿಕಾರಿಗಳ ಸಾಮಾನ್ಯ ಜ್ಞಾನ ಮತ್ತು ಬದ್ಧತೆಯ ಕೊರತೆಯೇ ಈ ಸಮಸ್ಯೆಗಳಿಗೆ ಕಾರಣವಾಗಿದೆ.

ಈ ಸಮಸ್ಯೆ ಬೋಗಾದಿ ರಸ್ತೆಗೆ ಸೀಮಿತವಲ್ಲ; ಮೈಸೂರಿನಲ್ಲಿ ಅನೇಕ ಸ್ಥಳಗಳಲ್ಲಿ ಮೀಡಿಯನ್‌ಗಳಿಂದ ವಾಹನ ಬಳಕೆದಾರರಿಗೆ ಇದೇ ರೀತಿ ಅಪಾಯ ಸಂಭವಿಸುತ್ತಿದೆ. ಟ್ರಾಫಿಕ್ ಪೋಲೀಸ್ ಇಲಾಖೆಯು (ಕೃತಕ ಬುದ್ಧಿಮತ್ತೆ) ಕ್ಯಾಮೆರಾಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಹೂಡಿಕೆ ಮಾಡುತ್ತಿದೆ. ಕೃತಕ ಬುದ್ಧಿಮತ್ತೆ ಬಳಸಿಕೊಂಡು ವೈಜ್ಞಾನಿಕ ಸುಧಾರಣೆ ಮತ್ತು ಸರಾಸರಿ ಸೂಚಕಗಳ ನಿರ್ವಹಣೆಗಾಗಿ ಕೆಲವು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದರಿಂದ ಜೀವ ಮತ್ತು ಸಂಪನ್ಮೂಲಗಳನ್ನು ಉಳಿಸಬಹುದು.

–ಕಳಕಳಿಯುಳ್ಳ ನಾಗರಿಕ, ಬೋಗಾದಿ, 2.7.2024

■ ಕಾಂಪೌಂಡ್ ಸರಿಪಡಿಸಲು ಮನವಿ

ಮಾನ್ಯರೆ,



ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾ ಗಿರುವ ಝಾನ್ಸಿರಾಣಿ ಲಕ್ಷ್ಮಿ ಬಾಯಿ (ಜೆಎಲ್‌ಬಿ) ರಸ್ತೆಯಲ್ಲಿ ತನ್ನದೇ ವಿಶೇಷತೆಗಳಿಂದ ಶಿಕ್ಷಣಕ್ಕೆ ಹೆಸರುವಾಸಿಯಾಗಿರುವ ಮೈಸೂರು ವಿಶ್ವವಿದ್ಯಾಲಯದ ಪದವಿ ಕಾಲೇಜುಗಳಾದ ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ನಿವಾಸವಿರುವ ಕ್ಯಾಂಪಸ್‌ಗೆ ಸೇರಿದ ಕಾಂಪೌಂಡ್ ಬಿದ್ದಿರುವ ಕಾರಣ ರಾತ್ರಿ ಅಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡುವಂತಾಗುತ್ತದೆ. ಮಹಾರಾಜ ಪದವಿ ಪೂರ್ವ ಕಾಲೇಜಿನ ಮುಂಭಾಗದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ ಮದ್ಯಪಾನ ಮಾಡಿ, ಬಾಟಲಿಗಳನ್ನು ಕಾಲೇಜಿನ ಕಾಂಪೌಂಡ್ ಮತ್ತು ಮರದ ಬುಡದಲ್ಲಿ ಇಟ್ಟಿರುತ್ತಾರೆ. ಇದರಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಸೇರಿ ಮಹಾರಾಜ ಮತ್ತು ಯುವರಾಜ ಕಾಲೇಜಿನ ಇತರ ಸಿಬ್ಬಂದಿಗೆ ಮುಜುಗರ ಉಂಟಾಗದಿರಲು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಕಾಂಪೌಂಡ್ ಸರಿಪಡಿಸಬೇಕಾಗಿ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಅಭಿಷೇಕ್ ವೃತ್ತದ ರಸ್ತೆಯಲ್ಲಿ ಕಸದ ರಾಶಿ ತೆರವುಗೊಳಿಸಿ

ಮಾನ್ಯರೆ,



ಇದು ಮೈಸೂರಿನ ವಿಜಯನಗರ 2ನೇ ಹಂತದ ಸಂಗಂ ವೃತ್ತದಿಂದ ಹೆಬ್ಬಾಳಿನ ಅಭಿಷೇಕ್ ವೃತ್ತಕ್ಕೆ ಹೋಗುವ ಮುಖ್ಯ ರಸ್ತೆ ಪ್ರತಿದಿನ ಇದೇ ರೀತಿ ಕಸದಿಂದ ತುಂಬಿ ದುರ್ನಾತ ಬೀರುತ್ತಾ ಇರುತ್ತದೆ. ನಾಯಿಗಳು, ದನಕರುಗಳು ಕಸವನ್ನೆಲ್ಲಾ ಎಳೆದಾಡಿ, ರಸ್ತೆ ಅರ್ಧ ಭಾಗ ಯಾವಾಗಲೂ ಕೊಳೆತ ಕಸ ತುಂಬಿರುತ್ತದೆ. ಪಾಲಿಕೆಯವರು ವಾರಕ್ಕೊಮ್ಮೆ ಇಲ್ಲಿಂದ ಕಸ ತೆಗೆದುಕೊಂಡು ಹೋದರೂ ಒಂದು ಗಂಟೆಯಲ್ಲಿ ಕಸ ಶೇಕರಣೆಯಾಗುತ್ತದೆ. ಇಲ್ಲಿ ಕಸ ಸುರಿದರೆ ದಂಡ ವಿಧಿಸಲಾಗುವುದು ಎಂಬ ಬೋರ್ಡನ್ನೇ ಮುರಿದು ಹಾಕಲಾಗಿದೆ. ಮನೆ ಮನೆಗೆ ಕಸದ ವಾಹನ ಬಂದರೂ ಇಲ್ಲಿ ಕಸ ಸುರಿಯುವ ಮಹಾನುಭಾವರು ಯಾರು ಎಂಬುದು ತಿಳಿಯುತ್ತಿಲ್ಲ. ನಮ್ಮ ಜನ ಯಾವಾಗ ಪ್ರಜ್ಞಾವಂತರಾಗುತ್ತಾರೋ ದೇವರೇ ಬಲ್ಲ. ಇಲ್ಲಿ ಮೊದಲು ಒಂದು ಕಂಟೈನರ್ ಇತ್ತು. ಇದರೊಳಗೆ ಕಸ ಹಾಕುತ್ತಿದ್ದರಿಂದ ರಸ್ತೆಗೆ ಕಸ ಬರುತ್ತಿರಲಿಲ್ಲ. ಈ ಕಂಟೈನರನ್ನು ಯಾರು ತಿಂದು ತೇಗಿದರೊ ಗೊತ್ತಿಲ್ಲ. ಪುನಃ ಇಲ್ಲೊಂದು ಕಂಟೈನರ್ ಹಾಕಿ ರಸ್ತೆಯಲ್ಲಿ ಸುಗಮವಾಗಿ ಜನರಿಗೆ ಓಡಾಡಲು ಅನುಕೂಲ ಮಾಡಬೇಕಾಗಿ ಪಾಲಿಕೆ ಅಧಿಕಾರಿಗಳಲ್ಲಿ ಮನವಿ.

–ಕೇಶವಮೂರ್ತಿ, ಸಂಗಂ ವೃತ್ತ, ವಿಜಯನಗರ 2ನೇ ಹಂತ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ


ಇದ್ದರು ಮಹಾನುಭಾವರು ಬಿಡಾರಂ ಕೃಷ್ಣಪ್ಪನವರು...

ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಅನೇಕ ಮಹನೀಯರು ತಮ್ಮ ಮಹತ್ತರವಾದ ಕೊಡುಗೆಯನ್ನಿತ್ತಿದ್ದಾರೆ. ಸಂಗೀತವನ್ನು ಆರಾಧಿಸುತ್ತಿದ್ದ, ನಾದದ ಉಪಾಸನೆಯನ್ನು ಮಾಡುತ್ತಿದ್ದ ಕಲೋಪಾಸಕರ ಸಂಖ್ಯೆಗೆ ನಮ್ಮಲ್ಲಿ ಕೊರತೆಯೇನೂ ಇರಲಿಲ್ಲ. ಸಂಗೀತವು ಅವರಿಗೆ ಅತೀ ಪವಿತ್ರವಾದ ಕಲೆಯಾಗಿತ್ತು. ಅದನ್ನು ಅಪವಿತ್ರಗೊಳಿಸದಂತೆ ಜಾಗರೂಕರಾಗಿ ಜತನದಿಂದ ಅದರ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬರುತ್ತಿದ್ದ ಒಂದು ತಲೆಮಾರೇ ನಮ್ಮಲ್ಲಿತ್ತು. ಅಪವಿತ್ರಗೊಳಿಸುವುದೆಂದರೇನು? ಎಂಬ ಪ್ರಶ್ನೆ ಉದ್ಭವಿಸಬಹುದು. ಸಂಗೀತವು ಮೋಕ್ಷಕ್ಕೆ ಸಾಧನ ಎಂದೇ ಪರಿಗಣಿತವಾಗಿತ್ತು. ಆದ್ದರಿಂದ ಅದು ಒಂದು ಯಾಗದಂತೆ, ಪೂಜೆಯಂತೆ ಭಗವಂತನಿಗೆ ಅರ್ಪಣೆಯಾಗುವ ಪವಿತ್ರ ಸಾಧನವಾಗಿತ್ತು. ಮಾರಾಟದ ಸರಕಾಗಿರಲಿಲ್ಲ.

ನಾದೋಪಾಸನೆಯ ಮೂಲಕ ಭಗವಂತನ ಇರುವಿಕೆಯನ್ನು ಅನುಭವಿಸಿದವರು ನಮ್ಮಲ್ಲಿ ಅನೇಕರಿದ್ದರು. ಸಂಗೀತಕ್ಕೆ ಸಂಬಂಧಿಸಿದಂತೆ ಅನೇಕ ಪವಾಡಗಳ ಕತೆಗಳನ್ನೂ ನಾವು ಕೇಳಿದ್ದೇವೆ. **ಸಂತ ತ್ಯಾಗರಾಜ**ರಿಗೆ ಸಂಗೀತವು ಅವರ ಅತ್ಯಂತ ಆಪ್ತ ದೈವವಾಗಿದ್ದ ಶ್ರೀರಾಮನ ಸಾನ್ನಿಧ್ಯವನ್ನು ಹೊಂದುವ ಏಕೈಕ ಸಾಧನವಾಗಿತ್ತು. (ಅವರ ಹಲವು ಕೀರ್ತನೆಗಳಲ್ಲಿ ಇದು ಸೂಚಿತವಾಗಿದೆ) **ಮುತ್ತುಸ್ವಾಮಿ** ದೀಕ್ಷಿತರು ಶ್ರೀಚಕ್ರದ ಉಪಾಸಕರಾಗಿ ತಮ್ಮ ಕೃತಿಗಳಲ್ಲಿ ಅದಕ್ಕೆ ಸಂಬಂಧಿಸಿದ ಹಲವು ರಹಸ್ಯಗಳನ್ನು ಅಡಗಿಸಿಟ್ಟಿದ್ದಾರೆಂದು ಹೇಳುತ್ತಾರೆ. **ಶ್ಯಾಮಾ ಶಾಸ್ತ್ರಿ**ಗಳು ತಮ್ಮ ದೇವಿಯ ಉಪಾಸನೆಯನ್ನು ಸಂಗೀತದ ಮೂಲಕವೇ ಮಾಡಿದ್ದಾರೆ. ವೀಣೆಯನ್ನು ನುಡಿಸುತ್ತಾ ಅದರ ನಾದದಲ್ಲಿ ವಿಲೀನರಾದ ಸ್ಥಿತಿಯನ್ನು ತಲುಪುತ್ತಿದ್ದ **ಶೇಷಣ್ಣ**ನವರಿಗೆ ಮೈಮೇಲಿನ ಪ್ರಜ್ಞೆ ತಪ್ಪಿ, ಏನಾಗುತ್ತಿತ್ತೆಂಬುದರ ಅರಿವು ಇಲ್ಲ ವಾಗುತ್ತಿತ್ತಂತೆ. ಕೆಲವೊಮ್ಮೆ ತಮ್ಮ ವೀಣಾನಾದಕ್ಕೆ ತಾವೇ ಮನ ಸೋತು, ಕಣ್ಣೀರ್ಗರೆಯುತ್ತಾ, ವೀಣೆಯ ಮೇಲೆ ತಲೆಯಿರಿಸಿ, 'ಇಂದು ಮುಂದುವರೆಸಲಾರೆ. ಈ ಮುದುಕನನ್ನು ಕ್ಷಮಿಸಿ' ಎಂದುದನ್ನು ವಿ.ಸೀತಾರಾಮಯ್ಯ ಮುಂತಾದ ಮಹನೀಯರು ಉಲ್ಲೇಖಿಸಿದ್ದಾರೆ. ಭಕ್ತಿಭಾವದಿಂದ ಹಾಡುತ್ತಲೇ, ನುಡಿಸುತ್ತಲೇ ಕೊನೆಯುಸಿರನ್ನೆಳೆದ ಪುಣ್ಯಜೀವಿಗಳೂ ನಮ್ಮಲ್ಲಿ ಆಗಿಹೋಗಿದ್ದಾರೆ.

ಸಂಗೀತವನ್ನು, ದಾನ ಮಾಡಬೇಕಾದ ವಿದ್ಯೆ ಎಂದೇ ಪರಿಗಣಿಸಲಾಗುತ್ತಿತ್ತು. ಅದು ಮಾರಾಟದ ಸರಕಾಗಿರಲಿಲ್ಲ. ಸಂಗೀತವನ್ನು ಕಲಿಯುವವರ ಮತ್ತು ಕಲಿಸುವವರ ನಡುವೆ ಒಂದು ಭಕ್ತಿಭಾವ ಅಲ್ಲಿ ನೆಲೆಸಿರುತ್ತಿತ್ತು. ಶಿಷ್ಯರಿಂದ ಫೀಸು ತೆಗೆದುಕೊಳ್ಳುವ ಕಲ್ಪನೆಯೂ ಅಲ್ಲಿ ಇರಲಿಲ್ಲ. ಶಿಷ್ಯರೆಂದರೆ ಅವರ ಸ್ವಂತ ಮಕ್ಕಳಿದ್ದಂತೆ. ಅವರ ಊಟ, ವಸತಿ, ವಿದ್ಯೆಯ ಕಲಿಕೆ ಸಕಲವೂ ಗುರುಗಳ ಮನೆಯಲ್ಲಿಯೇ. ಹೀಗಾಗಿ ಗುರು ಶಿಷ್ಯರ ಬಾಂಧವ್ಯವು ಎಂದೆಂದೂ ಮುಕ್ಕಾಗದ, ಸದಾ ಸ್ಮರಣೆಯಲ್ಲಿರುವಂತಹ ಮಧುರ ನೆನಪಾಗಿ ಉಳಿಯುತ್ತಿತ್ತು. ಗುರುವಿನ ಪ್ರೀತಿಯ ಜೊತೆಗೆ, ಕಲಿಕೆ ವಿಷಯದಲ್ಲಿ ಕಟ್ಟುನಿಟ್ಟನ್ನೂ ಶಿಷ್ಯ ಅನುಭವಿಸಬೇಕಾಗುತ್ತಿತ್ತು. ಅದು ಬೈಗಳಾಗಿರಬಹುದು ಅಥವಾ ಎಲ್ಲರೆದುರಿನ ಕಪಾಳ ಮೋಕ್ಷವೂ ಆಗಿರಬಹುದಾಗಿತ್ತು. ಗುರುವಿಗೆ ಎದುರಾಡುವ ಉದ್ಧಟತನಕ್ಕೆ ಅಲ್ಲಿ ಆಸ್ಪದವೇ ಇರಲಿಲ್ಲ. ಶಿಷ್ಯನ ಏಳಿಗೆಗಾಗಿ ನಿರಂತರ ಕಣ್ಗಾವಲಿನಲ್ಲಿ ನೋಡಿಕೊಳ್ಳುತ್ತಿದ್ದ ಗುರುವಿಗೆ, ಅವರನ್ನು ಶಿಕ್ಷಿಸುವ ಅಧಿಕಾರವೂ ಇರುತ್ತಿತ್ತು.

ಮೈಸೂರಿನಲ್ಲಿ ಈಗೊಂದು ತಲೆಮಾರಿನ ಹಿಂದೆ ಇಂತಹ ಗುರು ಶಿಷ್ಯರು, ಪವಿತ್ರ ಸಂಗೀತದ, ಆರೆಂಟು ಗಂಟೆಗಳ ಕಾಲ ಕಛೇರಿ ನೀಡುವ, ಅದನ್ನು ಆಸ್ವಾದಿಸುವ ರಸಿಕರು ಇದ್ದರು. ಕೆಲವರು ಅದನ್ನು ದಾಖಲಿಸಿದ್ದಾರೆ. ಮತ್ತೆ ಕೆಲವರು ಅರ್ಥವಾಗದ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಲೌಕಿಕಕ್ಕೆ ಮಹತ್ವ ನೀಡದೆಯಿದ್ದ ಕೆಲವರನ್ನು ನಾಡು ಮರೆಯಬಾರದು. ಅವರ ಕಲಾಸೇವೆಯನ್ನು ನಾವು ಮರೆಯುವಂತಿಲ್ಲ. ಅವರ ಬದುಕು, ಕಲೆಯ ಸೇವೆ ಎಲ್ಲವೂ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಬೇಕು. ಹಾಗೆ ನ್ಯಾಯವಾಗಿ ಸಿಗಬೇಕಾದ ಪ್ರಚಾರ, ಸ್ಮರಣೆ ಸಿಗಲಾರದ ಒಬ್ಬ ಮಹತ್ವದ ಕಲಾವಿದನೆಂದರೆ **ಬಿಡಾರಂ ಕೃಷ್ಣಪ್ಪ**ನವರು. ಸಂಗೀತ ಕ್ಷೇತ್ರಕ್ಕೆ ಸಿಕ್ಕ ಒಬ್ಬ ಅಸಾಮಾನ್ಯ ಗಾಯಕನಾಗಿ, ಅದ್ವಿತೀಯ ಗುರುವಾಗಿ, ಮಹಾನ್ ಭಕ್ತನಾಗಿ, ಒಳ್ಳೆಯ ನಟನಾಗಿ, ವಾಗ್ಗೇಯಕಾರನಾಗಿ, ಎಲ್ಲಕ್ಕೂ ಮಿಗಿಲಾಗಿ ಒಬ್ಬ ಮಾನವೀಯ ಗುಣಗಳಿಂದೊಡಗೂಡಿದ ಮನುಷ್ಯನಾಗಿ, ಅವರು ನಾಡು ಎಂದೆಂದಿಗೂ ನೆನಪಿಡಬೇಕಾದ ಮನುಷ್ಯರಾಗಿದ್ದರೂ ಅದೇಕೆ ಅವರ ಬಗ್ಗೆ ನಾವು ಇಷ್ಟು ಅವಜ್ಞೆ ಬೆಳೆಸಿಕೊಂಡೆವೋ ತಿಳಿಯದು.



ಬಿಡಾರಂ ಕೃಷ್ಣಪ್ಪನವರು

> “ ಮೈಸೂರಿನಲ್ಲಿ ಈಗೊಂದು ತಲೆಮಾರಿನ ಹಿಂದೆ ಇಂತಹ ಗುರು ಶಿಷ್ಯರ, ಪವಿತ್ರ ಸಂಗೀತದ, ಆರೆಂಟು ಗಂಟೆಗಳ ಕಾಲ ಕಛೇರಿ ನೀಡುವ, ಅದನ್ನು ಆಸ್ವಾದಿಸುವ ರಸಿಕರು ಇದ್ದರು. ಕೆಲವರು ಅದನ್ನು ದಾಖಲಿಸಿದ್ದಾರೆ. ಮತ್ತೆ ಕೆಲವರು ಅರ್ಥವಾಗದ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಲೌಕಿಕಕ್ಕೆ ಮಹತ್ವ ನೀಡದೆಯಿದ್ದ ಕೆಲವರನ್ನು ನಾಡು ಮರೆಯಬಾರದು. ಅವರ ಕಲಾ ಸೇವೆಯನ್ನು ನಾವು ಮರೆಯುವಂತಿಲ್ಲ. ಅವರ ಬದುಕು, ಕಲೆಯ ಸೇವೆ ಎಲ್ಲವೂ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಬೇಕು. ಹಾಗೆ ನ್ಯಾಯವಾಗಿ ಸಿಗಬೇಕಾದ ಪ್ರಚಾರ, ಸ್ಮರಣೆ ಸಿಗಲಾರದ ಒಬ್ಬ ಮಹತ್ವದ ಕಲಾವಿದನೆಂದರೆ ಬಿಡಾರಂ ಕೃಷ್ಣಪ್ಪನವರು.

ಆ ಅಪರಾಧವನ್ನು, ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ತುಂಬಿಕೊಡುವಂತಹ ಕಾರ್ಯವನ್ನು ಮೈಸೂರಿನವರೇ ಆದ **ಶ್ರೀಮತಿ ಶೈಲಜಾ ವೇಣುಗೋಪಾಲ್** ಅವರು ಮಾಡಿದ್ದಾರೆ–ಇತ್ತೀಚೆಗೆ ಲೋಕಾರ್ಪಣೆಗೊಂಡ ತಮ್ಮ ಪುಸ್ತಕ **'ಬಿಡಾರಂ ಕೃಷ್ಣಪ್ಪ–ಬದುಕು ಹಾಗೂ ಸಂಗೀತ'**ದಿಂದ.

ಒಬ್ಬ ಕಲಾವಿದನನ್ನು ಕುರಿತು ಬರೆಯುವಾಗ ಅದು ಅವನ ಬದುಕಿನ ಏಳು–ಬೀಳಿನ, ನೋವು–ನಲಿವಿನ ಕತೆಯಷ್ಟೇ ಆಗಿಬಿಡುವ ಸಾಧ್ಯತೆ ಬಹಳ. ಆದರೆ ಈ ಪುಸ್ತಕವು ಬಿಡಾರಂ ಅವರ ಬದುಕು ಮತ್ತು ಕಲೆಯನ್ನಷ್ಟೇ ಕುರಿತು ಹೇಳುವುದಿಲ್ಲ, ಬದಲಿಗೆ ಅವರನ್ನು ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇಟ್ಟು ಕಟ್ಟುವ ಪ್ರಯತ್ನವನ್ನು ಮಾಡಿದ್ದೇನೆಂದು ಅವರೇ ಹೇಳಿರುವಂತೆ ಇದು ಒಂದು ವಿಭಿನ್ನವಾದ, ಸಾರ್ಥಕವಾದ ಯತ್ನ ಎಂದು ಖಂಡಿತವಾಗಿಯೂ ಹೇಳಬಹುದು. ಕೃಷ್ಣಪ್ಪನವರ ಬದುಕಿನ ಹಲವು ಮಜಲುಗಳನ್ನು ಈ ನಿಟ್ಟಿನಿಂದಲೇ ನೋಡುತ್ತಾ ಸಾಗಿರುವುದು ಈ ಪುಸ್ತಕಕ್ಕೆ ಹೊಸ ನೋಟವನ್ನು ದಕ್ಕಿಸಿಕೊಟ್ಟಿದೆ. ಹೊತ್ತಗೆಯನ್ನು ಮತ್ತಷ್ಟು ಅರ್ಥಪೂರ್ಣವನ್ನಾಗಿಸಿದೆ.

ಇದರ ರಚನೆಗಾಗಿ ಲೇಖಕಿಯು ಬಹಳಷ್ಟು ಶ್ರಮ ಪಟ್ಟಿದ್ದಾರೆ. ಬಿಡಾರಂ ಅವರನ್ನು ಕುರಿತು ಬೇರೆ ಭಾಷೆಗಳಲ್ಲಿ ಪ್ರಕಟವಾಗಿರುವ ಪುಸ್ತಕಗಳನ್ನು ಅನುವಾದಿಸುವುದರಿಂದ ಹಿಡಿದು, ಅವರ ಕೃತಿಗಳನ್ನು ಬಲ್ಲವರಿಗೆ ನೀಡಿ, ಅವರ ಧ್ವನಿಮುದ್ರಿಕೆಗಳನ್ನು ವಿದ್ವಾಂಸರಿಗೆ ನೀಡಿ, ಅವುಗಳ ವಿಶ್ಲೇಷಣೆಯನ್ನು ಮಾಡಿಸಿದ್ದಾರೆ. ಬಿಡಾರಂ ಅವರ ಶಿಷ್ಯರ, ಅಭಿಮಾನಿಗಳ ಬರಹವನ್ನು ಬಳಸಿಕೊಂಡಿದ್ದಾರೆ, ಅಲ್ಲದೆ ಅವರ ಸಂಗೀತವನ್ನು ಕೇಳಿ, ಪ್ರತಿಕ್ರಿಯಿಸಿದ್ದ ಕನ್ನಡದ ಅನೇಕ ಮಹನೀಯರ ಬರಹವನ್ನೂ ಉದ್ಧರಿಸಿದ್ದಾರೆ. ಬಿಡಾರಂ ಅವರ ಜೀವಿತಾವಧಿಯ ಮಹತ್ ಸಾಧನೆಯಾದ 'ಶ್ರೀ ಪ್ರಸನ್ನ ಸೀತಾರಾಮಮಂದಿರ'ದ ಸಮಿತಿಯ, ಸರಕಾರದ ಪತ್ರಾಗಾರದ ಅರಮನೆಯ ಪತ್ರಗಳ, ದಶಕಗಳ ಹಿಂದಿನ ಪತ್ರಿಕಾ ಪ್ರಕಟಣೆಯ ಹೀಗೆ ಸಿಗಬಹುದಾದ ಯಾವ ಆಕರವನ್ನೂ ಬಿಡದೆ ತಿರುವಿ ಹಾಕಿ, ಶ್ರಮಪಟ್ಟು ಈ ಅತ್ಯಂತ ಉಪಯುಕ್ತ ಗ್ರಂಥವನ್ನು ರಚಿಸಿದ್ದಾರೆ. ಅದಕ್ಕಾಗಿ ಶೈಲಜಾ ಅವರಿಗೆ ನಾವು ಋಣಿಯಾಗಿರಬೇಕು.

ಶೈಲಜಾ ಮತ್ತು ವೇಣುಗೋಪಾಲ್ ದಂಪತಿ ತಮ್ಮ 'ರಾಗ ಮಾಲಾ'ದ ಪುಸ್ತಕ ಮಾಲಿಕೆಯಿಂದ ಇಂತಹ ಹಲವಾರು ಪುಸ್ತಕಗಳನ್ನು, ಅದೂ ಕಲಾವಿದರನ್ನೇ ಕುರಿತಾದವುಗಳನ್ನು ಹೊರ ತಂದಿದ್ದಾರೆ. ಈ ಪುಸ್ತಕವು ಆ ಮಾಲಿಕೆಯ ಹನ್ನೊಂದನೆಯ ಕೃತಿ.

ಕನ್ನಡ ದೇವರನಾಮಗಳಿಂದಲೇ ಇಡೀ ಕಛೇರಿಯನ್ನು ಮಾಡುವ ಪದ್ಧತಿಯನ್ನು ಆರಂಭಿಸಿದವರೇ ಬಿಡಾರಂ ಕೃಷ್ಣಪ್ಪನವರು. ಪರವೂರುಗಳಲ್ಲಿ ಅವರಿಗೆ ಇದ್ದ ಮರ್ಯಾದೆ, ಗೌರವ, ತಮ್ಮ ಜೀವಮಾನದ ಗಳಿಕೆ ಎಲ್ಲವನ್ನೂ ರಾಮಮಂದಿರದ ನಿರ್ಮಾಣಕ್ಕಾಗಿ ಮೀಸಲಿಟ್ಟದ್ದು, ಶಿಷ್ಯರ ಮೇಲಿನ ಅವರ ಅಭಿಮಾನ, ಆರಂಭದಲ್ಲಿ ಕಟುವಾಗಿದ್ದ ಅವರ ಶಾರೀರವನ್ನು ಕಠಿಣ ಸಾಧನೆಯಿಂದ ತಮಗೆ ಬೇಕಾದಂತೆ ಬಾಗಿಸಿಕೊಂಡದ್ದು, ಅರಮನೆಗೆ ಅವರು ಬರೆದುಕೊಂಡ ಪತ್ರಗಳು, ಎಂದೂ, ಯಾರಿಗೂ ನೋವುಂಟು ಮಾಡದ ಅವರ ಸ್ವಭಾವ, ಅವರ ದಿವ್ಯ ಗಾಯನ ಹೀಗೆ ಪುಸ್ತಕವು ಅನೇಕ ವಾಸ್ತವ ಸಂಗತಿಗಳನ್ನು ಯಾವುದೇ ಉತ್ಪ್ರೇಕ್ಷೆಯಿಲ್ಲದೆ ಒಕ್ಕಣಿಸುತ್ತಾ ಸಾಗುತ್ತದೆ. ಅವರ ಶಿಷ್ಯರನ್ನೂ ಪರಿಚಯಿಸುವ ಕೆಲಸ ಮಾಡಿದ್ದಾರೆ. ಒಟ್ಟಾರೆ ಕನ್ನಡ ಸಾರಸ್ವತ ಲೋಕಕ್ಕೆ, ಸಂಗೀತ ಕ್ಷೇತ್ರಕ್ಕೆ ಇದೊಂದು ಅತ್ಯುಪಯುಕ್ತ ಪುಸ್ತಕ ಎನ್ನುವುದರಲ್ಲಿ ಅನುಮಾನವಿಲ್ಲ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

26. ರಾಜಭಾಷಾ ಭೂಷಣ ಕರ್ಪೂರ ಶ್ರೀನಿವಾಸರಾವ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜಸಾಗರ ಅಣೆಕಟ್ಟೆಯನ್ನು ಕಟ್ಟುವ ಕಾರ್ಯದಲ್ಲಿ ಅನೇಕ ಇಂಜಿನಿಯರುಗಳು ಮಹತ್ವದ ಸೇವೆ ಸಲ್ಲಿಸಿದ್ದಾರೆ. ಕೃಷ್ಣರಾಜಸಾಗರ ಅಣೆಕಟ್ಟೆಯ ಪ್ರವೇಶ ದ್ವಾರದಲ್ಲಿನ ಫಲಕದಲ್ಲಿ ಅವರ ಹೆಸರುಗಳು ರಾರಾಜಿಸುತ್ತಿವೆ. ಆ ತಂತ್ರಜ್ಞರ ಪೈಕಿ ಒಬ್ಬರು **ಕರ್ಪೂರ ಶ್ರೀನಿವಾಸರಾಯರು**. ಕಟ್ಟೆಯ ನಿರ್ಮಾಣವಲ್ಲದೆ, ನಿರ್ಮಾಣದ ಹಂತದಲ್ಲಿ ಮದ್ರಾಸ್ ಸರ್ಕಾರದೊಂದಿಗೆ ತಲೆದೋರಿದ ಸಮಸ್ಯೆಯ ಪರಿಹಾರಕ್ಕಾಗಿ ಮಾತುಕತೆ ನಡೆಸಿದ್ದು ಒಂದು ಮಹತ್ವದ ಕಾರ್ಯವಾದರೆ, ಅವರ ಮತ್ತೊಂದು ಮಹತ್ವದ ಕಾರ್ಯ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಕಟ್ಟಡ ನಿರ್ಮಾಣ ಮಾಡಿಕೊಟ್ಟದ್ದು.

ಬೆಂಗಳೂರಿನ ಬಹಳ ಹಿಂದಿನ ಮತ್ತು ಅನುಕೂಲಸ್ಥ ಮಹಾರಾಷ್ಟ್ರ ಕುಟುಂಬವೊಂದರಲ್ಲಿ ಕರ್ಪೂರ ಶ್ರೀನಿವಾಸರಾಯರು 1863ರಲ್ಲಿ ಜನಿಸಿದರು. ಅವರು ಕರ್ಪೂರ ಸುಬ್ಬರಾಯರ ದ್ವಿತೀಯ ಪುತ್ರರು. ಅವರ ಪೂರ್ವಿಕರೊಬ್ಬರು ತಿರುಪತಿಯ ಶ್ರೀನಿವಾಸ ದೇವರ ಭಕ್ತರಾಗಿದ್ದರು. ದೇವರ ದರ್ಶನಕ್ಕಾಗಿ ತಿರುಪತಿಗೆ ಹೋಗಿದ್ದಾಗ ಬೆಟ್ಟ ಹತ್ತುತ್ತಾ ಪ್ರತಿ ಮೆಟ್ಟಿಲ ಮೇಲೂ ಕರ್ಪೂರದ ದೊಡ್ಡ ಬಿಲ್ಲೆ ಹಚ್ಚುತ್ತಾ ಹೋದರಂತೆ. ಇದರಿಂದಾಗಿ ಅವರ ಕುಟುಂಬಕ್ಕೆ 'ಕರ್ಪೂರ' ಹೆಸರು ಸೇರಿತು. ಹೀಗಾಗಿ ಶ್ರೀನಿವಾಸರಾಯರು ಕೂಡ 'ಕರ್ಪೂರ' ಶ್ರೀನಿವಾಸರಾಯರಾದರು.

ಬಡತನದ ಕುಟುಂಬದಲ್ಲಿ ಜನಿಸಿದ್ದ ಇವರು ನೌಕರಿಗಾಗಿ ಪೂನಾದಲ್ಲಿ ಪ್ರಯತ್ನಿಸುತ್ತಿದ್ದಾಗ ವಕೀಲರೊಬ್ಬರು ಕೊಡಿಸಿದ ವಿದ್ಯಾರ್ಥಿವೇತನದಿಂದ ಓದು ಮುಂದುವರಿಸಿ ಬಿ.ಎಸ್.ಸಿ. ಪದವಿ ಪಡೆದರು. ಕಾಲೇಜು ವಿದ್ಯಾಭ್ಯಾಸದ ನಂತರ ಎಲ್.ಸಿ.ಇ. ಪದವಿ ಗಳಿಸಿ ಮುಂಬಯಿ ಸರ್ಕಾರದಲ್ಲಿ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿದರು. ಕ್ರಮೇಣ ಸೂಪರಿಂಟೆಂಡೆಂಟಿಂಗ್ ಇಂಜಿನಿಯರ್ ಮಟ್ಟಕ್ಕೆ ಬಂದರು. ಕೃಷ್ಣರಾಜಸಾಗರ ಅಣೆಕಟ್ಟೆ ನಿರ್ಮಾಣ ಕಾರ್ಯದ ಛೀಫ್ ಇಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿ ನೇಮಕವಾದಾಗ ನಿವೃತ್ತರಾಗಿದ್ದ ಶ್ರೀನಿವಾಸರಾಯರನ್ನು ಮೈಸೂರಿಗೆ ಕರೆದುಕೊಂಡು ಬಂದು ಮಹಾರಾಜರು ತಮ್ಮ ಸರ್ಕಾರದಲ್ಲಿ ಛೀಫ್ ಇಂಜಿನಿಯರಾಗಿ ನೇಮಿಸಿದರು. ವಿಶ್ವೇಶ್ವರಯ್ಯನವರ ನಂತರ ಇವರಿಗೆ ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಸೇತುವೆ ಕಟ್ಟುವ ಕಾರ್ಯದ ಜವಾಬ್ದಾರಿ ವಹಿಸಲಾಯಿತು. ಅದರ ನಿರ್ಮಾಣದ ಜೊತೆಗೆ ಕಾವೇರಿ ನೀರಿನ ಬಗ್ಗೆ ಮದ್ರಾಸ್ ಸರ್ಕಾರದೊಂದಿಗೆ ಇವರು ಮಹತ್ವದ ಮಾತುಕತೆಗಳನ್ನು ನಡೆಸಿದರು. ನವೆಂಬರ್ 1912ರಿಂದ ಜನವರಿ 1917ರವರೆಗೆ ಛೀಫ್ ಇಂಜಿನಿಯರ್ ಸ್ಥಾನದಲ್ಲಿದ್ದು ಕೃಷ್ಣರಾಜಸಾಗರ ಅಣೆಕಟ್ಟೆಯ ನಿರ್ಮಾಣದಲ್ಲಿ ಶ್ರೀನಿವಾಸರಾಯರು ಮಹತ್ವದ ಪಾತ್ರ ವಹಿಸಿದರು.

ಮಹಾರಾಜರು ಇವರ ವಿಶಿಷ್ಟ ಸೇವೆಯನ್ನು ಗುರುತಿಸಿ ಇವರಿಗೆ 'ರಾಜಸಭಾ ಭೂಷಣ' ಬಿರುದು ನೀಡಿ ಗೌರವಿಸಿದರು. 1923ರಲ್ಲಿ ನಿವೃತ್ತರಾದ ಮೇಲೆ ಅವರು ಸಂಸ್ಕೃತ ಮತ್ತು ಭಾರತೀಯ ತತ್ವಶಾಸ್ತ್ರಗಳ ಅಧ್ಯಯನದಲ್ಲಿ ತೊಡಗಿದರು. ಕರ್ಪೂರ ಶ್ರೀನಿವಾಸರಾಯರು ಬಹಳಷ್ಟು ಧಾರ್ಮಿಕ ಶ್ರದ್ಧೆಯುಳ್ಳವರು. 1893ರಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕಾಕ್ಕೆ ಭೇಟಿ ಕೊಡುವ ಮುನ್ನ ಅವರನ್ನು ಭೇಟಿ ಮಾಡುವ ಅವಕಾಶ ಇವರಿಗೆ ಸಿಕ್ಕಿತ್ತು. ಇದು ಅವರ ಧಾರ್ಮಿಕ ಶ್ರದ್ಧೆಗೆ ಇನ್ನಷ್ಟು ಇಂಬು ನೀಡಿತು. ಸಂಸ್ಕೃತ ಭಾಷೆಯ ಕಲಿಕೆಯನ್ನು ಉತ್ಸಾಹದಿಂದ ಪ್ರಾರಂಭಿಸಿದರು. ಇವರ ಪ್ರತಿಭೆಯನ್ನು ಪಂಡಿತರು ಮೆಚ್ಚಿದರು. ಪ್ರತಿಷ್ಠಿತ ಸಂಸ್ಕೃತ ವಿದ್ವಾಂಸರಾದ ಇವರಿಗೆ 'ವಿದ್ಯಾಭೂಷಣ' ಪ್ರಶಸ್ತಿ ನೀಡಲಾಯಿತು.

ಶ್ರೀನಿವಾಸರಾಯರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಟ್ಟಡ ಕಟ್ಟುವ ಕಾರ್ಯದಲ್ಲಿ ಅಗ್ರಗಣ್ಯರಾಗಿದ್ದರು. ಪರಿಷತ್ತಿಗೆ ಶ್ರೀಕೃಷ್ಣರಾಜ ಪರಿಷನ್ಮಂದಿರ ಕಟ್ಟಿಕೊಟ್ಟು ಅದಕ್ಕೆ ಸ್ವಂತ ನೆಲೆಯನ್ನು ಕಲ್ಪಿಸಿಕೊಟ್ಟ ಮಹನೀಯರು ಇವರು. 1915ರಲ್ಲಿ ಪರಿಷತ್ತು ಪ್ರಾರಂಭವಾದಾಗ 500 ರೂ. ಕೊಟ್ಟು ಮೊದಲ ಪೋಷಕರಾದರು. ಡಿ.ವಿ.ಜಿ. ಅವರ ಪ್ರಕಾರ ಶ್ರೀನಿವಾಸರಾಯರು ಪಟ್ಟ ಶ್ರಮ ಅಸಾಧ್ಯವಾದುದು. ಎಲ್ಲಿಂದಲೋ ಸದಸ್ಯರನ್ನೂ, ಹಣವನ್ನೂ ಒದಗಿಸುತ್ತಿದ್ದರು. ನಿರ್ಮಾಣದ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ಸಮಸ್ತ ಕರ್ನಾಟಕದ ವಿದ್ವಜ್ಜನರ ಪರಿಚಯ ಅವರಿಗಿತ್ತು. ಪರಿಷತ್ತಿನ ಒಂದು ಸಮ್ಮೇಳನವನ್ನೂ ತಪ್ಪಿಸಿಕೊಂಡವರಲ್ಲ. ಪ್ರತಿಯೊಂದು ಸಮ್ಮೇಳನದಲ್ಲೂ ಹಾಜರಿದ್ದು ತಮ್ಮ ಭಾಷಣದಿಂದಲೇ ಮಾತ್ರವಲ್ಲದೆ ವ್ಯಕ್ತಿಪ್ರಭಾವದಿಂದಲೂ ಸಭೆಗೆ ಕಳೆಕಟ್ಟುತ್ತಿದ್ದರು. ಪರಿಷತ್ತಿನ ಹಿತದ ಬಗ್ಗೆ ಹಗಲು ರಾತ್ರಿ ಚಿಂತಿಸುತ್ತಿದ್ದರು. ಕಟ್ಟಡದ ಉದ್ಘಾಟನೆ ಅವರಿಂದಲೇ ಆಗಿದೆ.

ಪರಿಷತ್ತಿಗೆ ಇವರು ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ ಹಳಗನ್ನಡ ಗ್ರಂಥಗಳ ಸಂಪಾದನೆ. ಇವರು ಪಂಪನ ವಿಕ್ರಮಾರ್ಜುನ ವಿಜಯವನ್ನು ತಾಳೇಗರಿಗಳ ಆಧಾರದಲ್ಲಿ ಸಂಶೋಧಿಸಿ ಪ್ರಕಟಿಸಿದರು. ಪಂಪಭಾರತ, ಪಂಪ ರಾಮಾಯಣಗಳನ್ನು ವಿದ್ಯಾ ಇಲಾಖೆಗಾಗಿ ಸಿದ್ಧಪಡಿಸಿದರು. ಇವರ ಅವಧಿಯಲ್ಲಿ ಪಂಪ ರಾಮಾಯಣ, ಸೋಮೇಶ್ವರ ಶತಕ, ಶಬ್ದಮಣಿ ದರ್ಪಣ, ಚಾವುಂಡರಾಯ ಪುರಾಣ, ಶಟ್ಪದಿ ಕಾವ್ಯಗಳ ನಿಘಂಟು, ಜ್ಯೋತಿವಿನೋದಿನಿ ಮುಂತಾದ ಕಾವ್ಯಗಳು ಸಂಶೋಧಿತವಾಗಿ ಪ್ರಕಟಗೊಂಡವು. ಸ್ವತಃ ಹಲವಾರು ಕೃತಿಗಳನ್ನು ರಚಿಸಿದರು.

ಕರ್ಪೂರ ಶ್ರೀನಿವಾಸರಾಯರು ಪರಿಷತ್ತಿನ ಉಪಾಧ್ಯಕ್ಷರಾಗಿ 1920ರಿಂದ 1933ರವರೆಗೆ 13 ವರ್ಷಗಳ ಕಾಲ ಮುನ್ನಡೆಸಿದರು. ಹಾಸನದಲ್ಲಿ ನಡೆದ ಐದನೆಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಆರನೆಯ ಸಮ್ಮೇಳನದಿಂದ 18ನೇ ಸಮ್ಮೇಳನದವರೆಗೆ 12 ಸಮ್ಮೇಳನಗಳನ್ನು ನಡೆಸಿದ ಕೀರ್ತಿ ಇವರದು. ಇದುವರೆಗೆ ಪರಿಷತ್ತಿನ ಯಾವ ಅಧ್ಯಕ್ಷರೂ ತಮ್ಮ ಅಧಿಕಾರಾವಧಿಯಲ್ಲಿ ಇಷ್ಟೊಂದು ಸಮ್ಮೇಳನಗಳನ್ನು ನಡೆಸಿಲ್ಲ ಎನ್ನಲಾಗಿದೆ.

ಶ್ರೀನಿವಾಸರಾಯರು ಪ್ರಥಮ ಮೈಸೂರು ಸಂಸ್ಥಾನದ ಕಾರ್ಯಕಾರಿ ಮಂಡಳಿಯ ಚುನಾಯಿತ ಸದಸ್ಯರಾಗಿದ್ದರು. ಧಾರ್ಮಿಕ ಶ್ರದ್ಧೆಯ ಬಗ್ಗೆಯೂ ಆಸಕ್ತಿ ಹೊಂದಿದ್ದ ಕರ್ಪೂರ ಶ್ರೀನಿವಾಸರಾಯರು ಆ ವಿಷಯಗಳ ಬಗ್ಗೆ ಅನೇಕ ಉಪನ್ಯಾಸಗಳನ್ನು ನೀಡಿದರು. ವಿವಿಧ ತತ್ವಶಾಸ್ತ್ರಗಳ ಮೇಲೆ ಅವರ ಉಪನ್ಯಾಸಗಳು ಸರಳವಾಗಿದ್ದು ಕೇಳುಗರಿಗೆ ಸುಲಭವಾಗಿ ಅರ್ಥವಾಗಿ ಆ ವಿಷಯಗಳ ಬಗ್ಗೆ ನಂಬಿಕೆ ಹುಟ್ಟಿಸುತ್ತಿದ್ದವು. ಅವರೊಡನೆ ಸಂಭಾಷಣೆ ಬೋಧಪ್ರದವೂ, ಉತ್ಸಾಹ ಮೂಡಿಸುವಂತದ್ದೂ ಆಗಿದ್ದವು. ಅಂತಿಮ ವರ್ಷಗಳಲ್ಲಿ ಅವರು ಶ್ರೀಮನ್ಮಧ್ವ ಸಿದ್ಧಾಂತ ಸಭೆಯ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿ ಬಹಳ ವರ್ಷಗಳು ಅದರ ಉಪಾಧ್ಯಕ್ಷರೂ ಆಗಿದ್ದರು.

ಶ್ರೀನಿವಾಸರಾಯರದು ಕೊಡುಗೈ ದಾನಿ. ಅವರ ಸಹಾಯ ಯಾಚಿಸಿ ಯಾರಾದರೂ ಸಂಸ್ಕೃತ ತಿಳಿದವರು, ವೈದಿಕರು ಅವರ ಬಳಿ ಬಂದರೆ ಅವರನ್ನು ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಕೊನೆಗಾಲದಲ್ಲಿ ಇವರು ಪಾರ್ಶ್ವವಾಯುವಿಗೆ ಒಳಗಾಗಿ ನರಳುವಂತಾಯಿತು. ಆದರ್ಶ ಗುಣಗಳ ಕರ್ಪೂರ ಶ್ರೀನಿವಾಸರಾಯರು 1933ರಲ್ಲಿ ಕಾಲವಾದಾಗ ಅವರ ಸ್ನೇಹಿತರು ಮತ್ತು ಅಭಿಮಾನಿಗಳು ಮಮ್ಮಲ ಮರುಗಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಒಂದನೇ ಪುಟದಿಂದ

ಬೃಹತ್ ಕಟ್ಟಡಗಳ ನಿರ್ಮಿಸುತ್ತಿರುವುದು ವಿಪರ್ಯಾಸ

ಸದುದ್ದೇಶದಿಂದ ಈ ಸತ್ಕಾರ್ಯ ಮಾಡಿದರು. ಆದರೆ ಇಂದಿನ ಸ್ಥಿತಿಯೇ ಬೇರೆ. ಇಂದಿನ ನಾಯಕರು ಹಲವು ಕೆರೆ-ಕಟ್ಟೆಗಳನ್ನು ಮುಚ್ಚಿದ್ದಾರೆ. ಕೆರೆ-ಕಟ್ಟೆಗಳನ್ನು ಮುಚ್ಚಿ ಅಪಾರ್ಟ್‌ಮೆಂಟ್ ನಿರ್ಮಿಸಿದ್ದಾರೆ. ಹೀಗೆಲ್ಲಾ ಆದಾಯ ಮೂಲ ಹುಡುಕುತ್ತಿರುವುದು ವಿಪರ್ಯಾಸ ಎಂದರು.

ನಿಜವಾದ ನಾಯಕರೆಂದರೆ ಯಾರು?: ಕೆಂಪೇಗೌಡರು ಬಯಸಿ ಒಕ್ಕಲಿಗ ಸಮುದಾಯದಲ್ಲಿ ಹುಟ್ಟಿದವರಲ್ಲ. ಮಹದೇವಭಟ್ಟರ ಗುರುಕುಲ ಆಶ್ರಮದಲ್ಲಿ ವಿದ್ಯಾಭ್ಯಾಸ ಪಡೆದ ಅವರಲ್ಲಿ ಭೇದಭಾವ ಇರಲಿಲ್ಲ. 18ನೇ ವಯಸ್ಸಿಗೆ ವಿವಾಹವಾದ ಅವರು ಅದೇ ವಯಸ್ಸಿನಲ್ಲಿ ಯಲಹಂಕದ ಸಾಮಂತ ದೊರೆಯಾದರು. ಆ ಮೂಲಕ ಹದಿನಾರನೇ ಶತಮಾನದಲ್ಲೇ ನಾಡಿಗೆ ಅತ್ಯುತ್ತಮ ದೊರೆ ಸಿಕ್ಕಿದ್ದರು. ಅವರು ಒಂದು ಜಾತಿಗೆ ಸೀಮಿತವಾಗಿ ಸೇವೆ ಮಾಡಿದವರಲ್ಲ. ಸರ್ವರ ಹಿತಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡಿದರು. ಸುಂದರ ನಾಡನ್ನು ಕಟ್ಟಬೇಕು. ಆ ಮೂಲಕ ಪ್ರಜೆಗಳಿಗೆ ಸಮೃದ್ಧ ಜೀವನವನ್ನು ಕಲ್ಪಿಸಬೇಕು ಎಂಬ ಆಶಯದೊಂದಿಗೆ ಕೆರೆ-ಕಟ್ಟೆ ನಿರ್ಮಿಸಿದರು. ದೇವಾಲಯಗಳು ಹಾಗೂ ಕಲ್ಯಾಣಿಗಳನ್ನು ನಿರ್ಮಿಸಿದರು. ಎಲ್ಲಾ ಜನಾಂಗದವರ ಕುಲಕಸುಬುಗಳನ್ನು ಪ್ರೋತ್ಸಾಹಿಸಿ, ಆರ್ಥಿಕ ಶಕ್ತಿ ನೀಡುವುದಕ್ಕಾಗಿ 64 ಪೇಟೆಗಳನ್ನು ಕಟ್ಟಿ, ಸರ್ವ ಜನಾಂಗದ ನಾಯಕರಾದರು. ಬುದ್ಧ, ಬಸವ, ಅಂಬೇಡ್ಕರ್ ಅವರಂತೆ ದೂರದೃಷ್ಟಿತ್ವದ ಮಹನೀಯರಾದರು. ಸರ್ವರ ಅಭ್ಯುದಯಕ್ಕಾಗಿ ನಿಷ್ಪಕ್ಷಪಾತವಾಗಿ ಸೇವೆ ಮಾಡಿದವರು ಮಾತ್ರ ನಿಜವಾದ ನಾಯಕರು. ಅಂತಹವರು ಜನಮಾನಸದಲ್ಲಿ ಅಜರಾಮರವಾಗಿ ಉಳಿಯುತ್ತಾರೆ ಎಂದು ಅಭಿಪ್ರಾಯಿಸಿದರು.

ಸದೃಢ ಭಾರತ ಕಟ್ಟೋಣ: ಬಸವಣ್ಣನವರು ಕಾಯಕವೇ ಕೈಲಾಸ ಎನ್ನುವ ಮೂಲಕ ಕೆಲಸದಲ್ಲಿ ದೇವರು ಕಂಡರೆ ಆತ್ಮ ಸಂತೃಪ್ತಿ ಪ್ರಾಪ್ತವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿದರು. ಸ್ವಾಮಿ ವಿವೇಕಾನಂದರು ಶಿಸ್ತು, ಶ್ರಮ, ಸಮಯ ಪ್ರಜ್ಞೆ, ಆತ್ಮವಿಶ್ವಾಸ ಹಾಗೂ ನಿರ್ಭಯತೆ ಎಂಬ ಪಂಚಮಂತ್ರಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿಕೊಟ್ಟರು. ಗಾಂಧೀಜಿಯವರು ಆತ್ಮಸಾಕ್ಷಿಯೇ ಸರ್ವಶ್ರೇಷ್ಠ ನ್ಯಾಯಾಲಯ ಎಂದರು. ಮಹನೀಯರನ್ನು ಒಂದು ಜಾತಿ ಚೌಕಟ್ಟಿನಲ್ಲಿ ಕಾಣುವಂತಹ ಸಂಕುಚಿತ ಮನೋಭಾವ ಅಳಿಯಬೇಕು. ಮಹನೀಯರ ಜಯಂತಿ ಜೊತೆಗೆ ಅವರ ನಿಷ್ಠೆಯನ್ನು ರೂಢಿಸಿಕೊಳ್ಳಬೇಕು. ಪ್ರತಿಯೊಬ್ಬರ ಹೆಡ್(ತಲೆ), ಹಾರ್ಟ್ (ಹೃದಯ) ಹಾಗೂ 'ಹ್ಯಾಂಡ್'(ಕೈ) ಈ ಮೂರು 'H' ಗಳು ನಿಯಂತ್ರಣದಲ್ಲಿದ್ದರೆ ಸಮಾಜ ಚೆನ್ನಾಗಿರುತ್ತದೆ. ಒಟ್ಟಾರೆ ಪೂರ್ವಜರ ಆಶೋತ್ತರಗಳಿಗೆ ತಕ್ಕಂತೆ ನಾಲ್ಕಾರು ಜನರಿಗೆ ಅನುಕೂಲವಾಗುವಂತೆ ನಡೆದುಕೊಂಡು ಸದೃಢ ಭಾರತ ಕಟ್ಟೋಣ ಎಂದು ಆಶಿಸಿದರು.

ತವರಿಗೆ ಬಂದಂತೆ ಖುಷಿ...

ಮೊದಲಿಗೆ ನಾನು ಪ್ರಧಾನ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸಿದ್ದು ಮೈಸೂರಿನಲ್ಲಿ. ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ಸೇವೆಗೆ ಹಾಜರಾಗಿದ್ದೆ. 2 ವರ್ಷ 10 ತಿಂಗಳು ಇಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತ್ತು. ಈ ನೆಲದಲ್ಲಿ ನ್ಯಾಯ ನಿರ್ಣಯ ಮಾಡಿದ್ದರ ಬಗ್ಗೆ ಆತ್ಮ ಸಂತೃಪ್ತಿ ಇದೆ. ಇಲ್ಲಿಂದ ವರ್ಗಾವಣೆ ಆದಾಗಲೂ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ನನ್ನಿಂದ ಏನಾದರೂ ತಪ್ಪಾಗಿದ್ದರೆ ನನಗೇ ಶಿಕ್ಷೆ ನೀಡು, ಇಲ್ಲವಾದರೆ ಶ್ರೀರಕ್ಷೆ ನೀಡು ಎಂದು ಬೇಡಿದ್ದೆ. ಹನ್ನೆರಡು ವರ್ಷದ ನಂತರ ಈಗ ಬಂದಿದ್ದೇನೆ. ಹೆಣ್ಣುಮಕ್ಕಳು ತವರಿಗೆ ಬಂದಂತೆ ಖುಷಿಯಾಗಿದೆ. ನಿಮ್ಮ ಪ್ರೀತಿ ಮತ್ತಷ್ಟು ಖುಷಿ ಹೆಚ್ಚಿಸಿದೆ.

-ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್

ರಾಷ್ಟ್ರ ಸಮೃದ್ಧಿಗೆ ಶಿಕ್ಷಣ-ಆರೋಗ್ಯ: ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಶಿಕ್ಷಣ ಮತ್ತು ಆರೋಗ್ಯ ಬಹುಮುಖ್ಯ. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಈ ಎರಡೂ ಸೇವೆಯನ್ನು ನೀಡುತ್ತಿದೆ. ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲೂ ಮಹತ್ವದ ಪಾತ್ರ ವಹಿಸಿದ್ದ ವಕೀಲರು ಸ್ವಾತಂತ್ರ್ಯ ನಂತರವೂ ಸಮಾಜದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದಾರೆ. ಈ ನಿಟ್ಟಿನಲ್ಲಿ ಸಂಸ್ಥಾನದ ವತಿಯಿಂದ ಕಾನೂನು ಶಿಕ್ಷಣವನ್ನೂ ಕಲ್ಪಿಸಬೇಕು ಎಂದು ಇದೇ ವೇಳೆ ಶ್ರೀಗಳಿಗೆ ಮನವಿ ಮಾಡಿದರು.

ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಮಾತನಾಡಿದರು. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್ ಸೇರಿದಂತೆ ಪದಾಧಿಕಾರಿಗಳು, ಸಮಿತಿಗಳ ಸದಸ್ಯರು, ನ್ಯಾಯಾಧೀಶರುಗಳು ಉಪಸ್ಥಿತರಿದ್ದರು.

ಬಜೆಟ್ ಮಂಡನೆ

ಕೇಂದ್ರ ಬಜೆಟ್‌ನಲ್ಲಿ ಗ್ರಾಮೀಣ ವಸತಿಗಾಗಿ ರಾಜ್ಯ ಸಬ್ಸಿಡಿಯನ್ನು ಹೆಚ್ಚಿಸಲು ತಯಾರಿ ನಡೆಸುತ್ತಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ 50 ಪ್ರತಿಶತದಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಬರೆದಿದ್ದೆ.

ನಿರ್ಮಲಾ ಸೀತಾರಾಮನ್ ಹೆಸರಿನಲ್ಲಿ ವಿಶಿಷ್ಟ ದಾಖಲೆ: ಈ ವರ್ಷ ಎರಡು ಬಾರಿ ಬಜೆಟ್ ಮಂಡಿಸಲಾಗುತ್ತಿದೆ. ಮಧ್ಯಂತರ ಬಜೆಟ್ ಅನ್ನು ಫೆಬ್ರವರಿ 1, 2024ರಂದು ಮಂಡಿಸಿತ್ತು. ಆದರೆ ಇದೀಗ ಹೊಸ ಸರ್ಕಾರ ರಚನೆಯಾದ ನಂತರ ಪೂರ್ಣ ಪ್ರಮಾಣದ ಕೇಂದ್ರ ಬಜೆಟ್ ಮಂಡನೆಯಾಗಲಿದೆ. ಈ ಬಾರಿ ಬಜೆಟ್ ಮಂಡನೆಯೊಂದಿಗೆ ಹಾಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೆಸರಿನಲ್ಲಿ ವಿಶಿಷ್ಟ ದಾಖಲೆ ದಾಖಲಾಗಲಿದೆ. ಏಕೆಂದರೆ, ಈ ಮೂಲಕ ಸತತ ಏಳು ಕೇಂದ್ರ ಬಜೆಟ್ ಮಂಡಿಸಿದ ಮೊದಲ ಹಣಕಾಸು ಸಚಿವೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಈ ವಿಷಯದಲ್ಲಿ ಅವರು ಮೊರಾರ್ಜಿ ದೇಸಾಯಿಯವರನ್ನು ಹಿಂದಿಕುತ್ತಾರೆ. ದೇಸಾಯಿ ಅವರು ಸತತ ಆರು ಬಾರಿ ಬಜೆಟ್ ಮಂಡಿಸಿದ್ದರು.

ಏಕೆ ಕ್ರಮ ಕೈಗೊಳ್ಳುತ್ತಿಲ್ಲ...!

ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ತಿಳಿಸಿ, ಸರಿಪಡಿಸಿಕೊಳ್ಳಿ, ಕಾನೂನು ಮೀರಿ ಕೆಲಸ ಮಾಡಿ ಎಂದು ಸರ್ಕಾರ ಯಾವತ್ತೂ ಬಯಸಲ್ಲ, ಕಾನೂನು ಪ್ರಕಾರ ಕೆಲಸ ಮಾಡದಿದ್ದರೆ ಸರ್ಕಾರ ಸಹಿಸಲ್ಲ. ಜನರ ನಡುವೆ ಪೊಲೀಸರು, ಅಧಿಕಾರಿಗಳು ಸಮವಸ್ತ್ರದಲ್ಲಿ ಹೆಚ್ಚೆಚ್ಚು ಕಾಣಿಸಿಕೊಳ್ಳಬೇಕು. ಇದು ಜನ ಸಾಮಾನ್ಯರಿಗೆ ಧೈರ್ಯ ತಂದುಕೊಡುತ್ತದೆ. ಪೊಲೀಸರು ಹೆಚ್ಚೆಚ್ಚು ಜನಸಂಪರ್ಕ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಜನರಿಗೆ ಪೊಲೀಸ್ ಬಳಿ ಹೋದರೆ ನ್ಯಾಯ ಸಿಗುತ್ತದೆ ಎನ್ನುವ ಆತ್ಮವಿಶ್ವಾಸ ಹೆಚ್ಚಾಗಬೇಕು. ಶಾಂತಿ ಸಭೆಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ನಿಯಮಿತವಾಗಿ ನಡೆಸಲೇಬೇಕು ಎಂದು ಸೂಚಿಸಿದರು.

ಫೇಕ್ ನ್ಯೂಸ್ ತಡೆಯದಿದ್ದರೆ ಕ್ರಮ: ಫೇಕ್‌ನ್ಯೂಸ್ ವಿಪರೀತ ಹೆಚ್ಚುತ್ತಿವೆ, ಸಮಾಜದ ನೆಮ್ಮದಿಗೆ ಕಂಟಕವಾಗಿವೆ. ಇವುಗಳ ಪ್ರಸಾರ ತಡೆಗಟ್ಟಿ, ಇಲ್ಲವಾದರೆ ಕ್ರಮ ಎದುರಿಸಿ ಎಂದು ಪೊಲೀಸ್ ಅಧಿಕಾರಿಗಳನ್ನು ಎಚ್ಚರಿಸಿದರು. ಫೇಕ್‌ನ್ಯೂಸ್‌ಗಳ ತಡೆಗೆ ಫ್ಯಾಕ್ಟ್‌ಚೆಕ್ ಘಟಕಗಳನ್ನು ಸ್ಥಾಪಿಸಲಾಗಿದೆ, ಆದರೂ ಫೇಕ್‌ನ್ಯೂಸ್‌ಗಳು ಹೆಚ್ಚಾಗುತ್ತಿವೆ. ಇದನ್ನು ಸಹಿಸಲು ಸಾಧ್ಯವಿಲ್ಲ.

ಎಐ ಬಳಸಿಕೊಳ್ಳಿ: ಕೃತಕ ಬುದ್ಧಿಮತ್ತೆ (ಎಐ) ಬಳಸಿ, ಸ್ವಯಂ ಪ್ರೇರಿತ ದೂರುಗಳನ್ನು ಹೆಚ್ಚೆಚ್ಚು ದಾಖಲಿಸಿ. ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲೇಬೇಕು. ಪೊಲೀಸ್ ಮ್ಯಾನ್ಯುಯಲ್ ಪ್ರಕಾರ ಎಸ್‌ಪಿ, ಡಿಸಿಪಿ, ಐಜಿಗಳು ತಮ್ಮ ವ್ಯಾಪ್ತಿಯ ಪ್ರತಿ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಕಡ್ಡಾಯ.

ಬೆಟ್ಟಿಂಗ್, ಮಾದಕ ದ್ರವ್ಯ ಮಾರಾಟ ನಿಲ್ಲಿಸಿ: ಎಸ್‌ಪಿ ಮತ್ತು ಐಜಿಗಳು ತಮ್ಮ ವ್ಯಾಪ್ತಿಯ ಪ್ರತಿ ಠಾಣೆಗೆ ಹೋಗಿ ಪರಿಶೀಲಿಸಿದರೆ ಅಕ್ರಮ ಕ್ಲಬ್‌ಗಳು, ಇಸ್ಪೀಟ್, ಬೆಟ್ಟಿಂಗ್, ಮಾದಕದ್ರವ್ಯ ಮಾರಾಟ ತಡೆಗಟ್ಟಬಹುದು, ಇವುಗಳನ್ನು ನಿಲ್ಲಿಸದಿದ್ದರೆ ಎಸ್‌ಪಿ ಮತ್ತು ಐಜಿ ಮಟ್ಟದ ಅಧಿಕಾರಿಗಳನ್ನೂ ನೇರ ಹೊಣೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ನಾಳೆಯಿಂದಲೇ ಎಸ್‌ಪಿ ಮತ್ತು ಐಜಿಗಳು ಠಾಣೆಗಳಿಗೆ ಭೇಟಿ ನೀಡಬೇಕು, ಅರ್ಧಗಂಟೆಯಲ್ಲಿ ಶಾಸ್ತ್ರ ಮುಗಿಸದೆ ಕೂಲಂಕುಷ ಪರಿಶೀಲನೆ ನಡೆಸಬೇಕು.

ತಪ್ಪುಗಳನ್ನು ಸರಿಮಾಡಿಕೊಂಡು ಗುಣಾತ್ಮಕ ಪೊಲೀಸ್ ವ್ಯವಸ್ಥೆ ಗಟ್ಟಿಗೊಳಿಸುವ ಮೂಲಕ ದೇಶದಲ್ಲಿ ಕರ್ನಾಟಕ ಪೊಲೀಸ್‌ಗೆ ಇರುವ ಉನ್ನತ ಹೆಸರನ್ನು ಉಳಿಸಿ, ಬೆಳೆಸಬೇಕು.

ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಕೋಮುಗಲಭೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ್ದಕ್ಕೆ ಗೃಹ ಸಚಿವರಿಗೆ ಹಾಗೂ ಕರ್ನಾಟಕ ಪೊಲೀಸ್‌ಗೆ ಅಭಿನಂದನೆಗಳು ಎಂದರು.

ಡೆಂಗ್ಯೂ ಸಾವಿನ ಸಂಖ್ಯೆ ಮುಚ್ಚಿಡುತ್ತಿದೆ

ಸರ್ಕಾರ ಯಾವುದೇ ವ್ಯವಸ್ಥೆ ಮಾಡಿಲ್ಲ. ರೋಗಿಗಳು ಪರದಾಡುತ್ತಿದ್ದಾರೆ. ಸಾವು ನೋವು ಹೆಚ್ಚಾಗುತ್ತಿವೆ. ಈಗಾಗಲೇ ಹಲವಾರು ಸಾವು ಆಗಿದೆ. ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಡೆಂಘಿ ಸಾವು ಹಾವೇರಿಯಲ್ಲಿ ಆಗಿದೆ. ಕೂಡಲೇ ಡಿ.ಹೆಚ್ ಒ ವರ್ಗಾವಣೆ ಮಾಡಬೇಕು. ಸಮರ್ಥ ಡಿ.ಹೆಚ್ ಒ ಹಾಕಬೇಕು ಯಾರನ್ನೂ ವಾಪಾಸ್ ಕಳಿಸದೇ ಚಿಕಿತ್ಸೆ ಮಾಡಬೇಕು. ಆಶಾ ಕಾರ್ಯಕರ್ತೆಯರ ಸಹಾಯ ತೆಗೆದುಕೊಂಡು ಜಾಗೃತಿ ಮೂಡಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ದಿವಾಳಿಯಾಗಿರುವುದನ್ನು ಪ್ರತಿ ಹೆಜ್ಜೆಯಲ್ಲಿ ಪ್ರದರ್ಶನ ಮಾಡುತ್ತಿದೆ. ಪೆಟ್ರೋಲ್ ಡೀಸೆಲ್‌ನಿಂದ ಹಿಡಿದು ಎಲ್ಲಾ ದರ ಹೆಚ್ಚಳ ಮಾಡಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಅನುದಾನವನ್ನು ವರ್ಗಾಯಿಸುತ್ತಿದ್ದಾರೆ. ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ 14,000 ಕೋಟಿ ರೂ. ಅನುದಾನ ಬಳಕೆ ಆಗಬೇಕಿತ್ತು. ಆದರೆ ಎಲ್ಲಾ ಹಣ ಗ್ಯಾರಂಟಿಗಳಿಗೆ ಹೋಗುತ್ತಿದೆ. ಕಾಂಗ್ರೆಸ್‌ನವರು ಓಟಿಗಾಗಿ ಮಾಡಿದ ಯೋಜನೆಗಳಿಗೆ ಎಸ್‌ಸಿ, ಎಸ್‌ಟಿ ಹಣ ಬಳಸುತ್ತಿದ್ದಾರೆ ಎಸ್‌ಸಿ, ಎಸ್‌ಟಿಗಳಿಗೆ ಸರ್ಕಾರ ಮೋಸ ಮಾಡುತ್ತಿದೆ. ಸರ್ಕಾರ ಸುಭದ್ರವಾಗಿದ್ದರೆ ಅವರ ಹಣಕ್ಕೆ ಯಾಕೆ ಕೈ ಹಾಕಿದ್ದಾರೆ. ವಾಲ್ಮೀಕಿ ನಿಗಮದ ಹಣ ಕೂಡಾ ಲೂಟಿ ಮಾಡಿದ್ದಾರೆ. ಎಸ್‌ಸಿ, ಎಸ್‌ಟಿ, ಒಬಿಸಿ ಜನರಿಗೆ ರಾಜ್ಯ ಸರ್ಕಾರ ದ್ರೋಹ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ತಾಜ್ ಮಹಲ್ ಬಳಿಕ ಮೈಸೂರು ಅರಮನೆ ಹೆಚ್ಚು ಛಾಯಾಚಿತ್ರ ಹೊಂದಿರುವ ಪ್ರಸಿದ್ಧ ತಾಣ

ಖ್ಯಾತ ಛಾಯಾಗ್ರಾಹಕ ಅಶ್ವಿನಿ ರಂಜನ್



ಗೋಷ್ಠಿಯಲ್ಲಿ ಖ್ಯಾತ ಛಾಯಾಗ್ರಾಹಕ ಅಶ್ವಿನಿರಂಜನ್ ಅವರೊಂದಿಗೆ ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಚರ್ಚೆ ನಡೆಸಿದರು.

ಮೈಸೂರು,ಜು.6(ಪಿಎಂ)- ತಾಜ್ ಮಹಲ್ ನಂತರದಲ್ಲಿ ಮೈಸೂರು ಅರಮನೆಯು ಹೆಚ್ಚು ಛಾಯಾಚಿತ್ರಗಳನ್ನು ಹೊಂದಿರುವ ಪ್ರಸಿದ್ಧ ತಾಣವಾಗಿದೆ. ಜೊತೆಗೆ ಹೆಚ್ಚು ಜನ ಭೇಟಿ ನೀಡುವ ಸ್ಥಳವೂ ಆಗಿದೆ ಎಂದು ಮೈಸೂರಿನ ವಾಣಿಜ್ಯೋದ್ಯಮಿ, ಲೇಖಕ, ಪ್ರಥಮ್ ಮೈಸೂರ್ (ಎನ್‌ಜಿಓ) ಸಂಸ್ಥಾಪಕ ಟ್ರಸ್ಟಿ ಹಾಗೂ ಖ್ಯಾತ ಛಾಯಾಗ್ರಾಹಕ ಅಶ್ವಿನಿರಂಜನ್ ಹೇಳಿದರು.

ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ 'ಇನ್ ಟ್ರೂ ಕಲರ್ಸ್; ಕಪ್ಪು ಬಿಳುಪು ಛಾಯಾಚಿತ್ರಗಳು ಹಾಗೂ ಅಶ್ವಿನ್ ಅವರ ಜೀವನದ ನೆಚ್ಚಿನ ನೆನಪುಗಳು ಮತ್ತು ಕಥೆಗಳು' ಕುರಿತು ಶನಿವಾರ ನಡೆದ ಆಂಗ್ಲಾ (ಇಂಗ್ಲಿಷ್) ಚರ್ಚಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗೋಷ್ಠಿ ನಡೆಸಿಕೊಟ್ಟ ಹಿರಿಯ ಸಾಹಿತಿಯೂ ಆದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಮಾತನಾಡಿ, ಇಂದು ಬೆಳಗ್ಗೆ ಇದೇ ಫೆಸ್ಟ್‌ನಲ್ಲಿ ಅಶ್ವಿನಿ ರಂಜನ್ ಅವರ 'ಇನ್ ಟ್ರೂ ಕಲರ್ಸ್' ಕಾಫಿ ಟೇಬಲ್ ಪುಸ್ತಕ ಬಿಡುಗಡೆಗೊಂಡಿತು. ಇದು 113 ಛಾಯಾಚಿತ್ರಗಳು ಹಾಗೂ 15 ಸಣ್ಣ ಕಥೆಗಳನ್ನು ಒಳಗೊಂಡಿದೆ ಎಂದು ಹೇಳಿ, ಅನುಭವ ಹಂಚಿಕೊಳ್ಳುವಂತೆ ಅಶ್ವಿನಿ ರಂಜನ್ ಅವರಿಗೆ ಹೇಳಿದರು.

ಬಳಿಕ ಮಾತು ಮುಂದುವರೆಸಿದ ಅಶ್ವಿನಿ ರಂಜನ್, ಈ ಪುಸ್ತಕದಲ್ಲಿ ನನ್ನ 22 ವರ್ಷಗಳ ಪಯಣ ಕಾಣಬಹುದು. ಇದು ಕೇವಲ ಛಾಯಾಚಿತ್ರ ಮತ್ತು ಸಣ್ಣ ಕಥೆಗಳನ್ನು ಒಳಗೊಂಡಿರುವ ಕಾಫಿ ಟೇಬಲ್ ಪುಸ್ತಕ ಮಾತ್ರವಲ್ಲ. ಇದು ನಾನು ಎರಡು ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದಾಗ ಸಂಪರ್ಕಕ್ಕೆ ಸಿಕ್ಕ ಜನರ ಬಗ್ಗೆ ಹಾಗೂ ಆ ಗ್ರಾಮೀಣ ಪ್ರದೇಶದ ಜನರ ಬದುಕಿನ ಚಿತ್ರಣವನ್ನು ಒಳಗೊಂಡಿದೆ. ಕಪ್ಪು ಮತ್ತು ಬಿಳುಪಿನ ಮಾಧ್ಯಮ ಇರುವುದು ಇದರ ವಿಶೇಷ ಎಂದು ತಿಳಿಸಿದರು. ಕಪ್ಪು ಮತ್ತು ಬಿಳುಪು ಬಣ್ಣಗಳು ಬೇಗ ಗಮನ ಸೆಳೆಯುತ್ತವೆ. ಜೊತೆಗೆ ಕಪ್ಪು ಮತ್ತು ಬಿಳಿ ಬಣ್ಣವು ಬಹುಶಃ ವಾಸ್ತವಕ್ಕೆ ಹತ್ತಿರದಲ್ಲಿದೆ. ಅಲ್ಲದೆ, ಚಿತ್ರದಲ್ಲಿನ ವೈಶಿಷ್ಟ್ಯಗಳನ್ನು ನೋಡಲು ಯಾವುದೇ ಗೊಂದಲಗಳು ಈ ಬಣ್ಣದ ಛಾಯಾಚಿತ್ರಗಳಲ್ಲಿ ಇರುವುದಿಲ್ಲ ಎಂಬುದು ನನ್ನ ಅಭಿಪ್ರಾಯ ಎಂದರು.

ಖ್ಯಾತ ಛಾಯಾಗ್ರಾಹಕ ಟಿ.ಎಸ್.ಸತ್ಯನ್ ಅವರೊಂದಿಗಿನ ಒಡನಾಟ ಮತ್ತು ಛಾಯಾಗ್ರಾಹಕರಾಗಿ ಅವರು ನೀಡಿದ ಸಲಹೆ ಬಗ್ಗೆ ಪ್ರಸ್ತಾಪಿಸಿದ ಅಶ್ವಿನಿ ರಂಜನ್, ನಾನು ಚಿಕ್ಕವನಿದ್ದಾಗ ಸತ್ಯನ್ ಅವರ ಛಾಯಾಚಿತ್ರಗಳನ್ನು 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'ದಲ್ಲಿ ನೋಡಿದ್ದೆ. ಮುಂದೆ 1998ರಲ್ಲಿ ನಾನು ಅವರನ್ನು ಭೇಟಿಯಾಗುವ ಅವಕಾಶ ದೊರೆಯಿತು. ಅವರ ಮಗ ನಾಗೇಂದ್ರ ಅವರೊಂದಿಗಿನ ನನ್ನ ಆಕಸ್ಮಿಕ ಭೇಟಿಯು ಸತ್ಯನ್ ಭೇಟಿಗೆ ಕಾರಣವಾಯಿತು ಎಂದು ಹೇಳಿದರು.

ಪ್ರಥಮ್ ಮೈಸೂರ್‌ನ ಸೇವಾ ಚಟುವಟಿಕೆಗಳ ಸಂಬಂಧ ಸತ್ಯನ್ ಹಲವು ಛಾಯಾಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಈ ಸಂದರ್ಭದಲ್ಲಿ ಅವರಿಂದ ಛಾಯಾಗ್ರಹಣದ ಬಗ್ಗೆ ಕಲಿಯಲು ನನಗೆ ಅವಕಾಶ ದೊರೆಯಿತು ಎಂದು ಸ್ಮರಿಸಿದರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಸೇರಿದಂತೆ ಹಲವು ಗಣ್ಯರು ಹಾಗೂ ಸಾಹಿತ್ಯಾಸಕ್ತರು ಹಾಜರಿದ್ದರು.

ಕಾಲ್ಪನಿಕವಲ್ಲದ ಸಾಹಿತ್ಯ ಕುರಿತು ಚರ್ಚೆ



ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ ಶನಿವಾರ ಕಾಲ್ಪನಿಕವಲ್ಲದ ಸಾಹಿತ್ಯ- ವಾಸ್ತವಕ್ಕೆ ಹಿಡಿದ ಕನ್ನಡಿ, ಕಾಲ್ಪನಿಕವಲ್ಲದ ಕಥೆಯನ್ನು ಆಸಕ್ತಿದಾಯಕವಾಗಿಸುವ ಸವಾಲುಗಳು ಕುರಿತು ಮಾಜಿ ರಾಯಭಾರಿಗಳಾದ ರವಿಜೋಶಿ, ಕೃಷ್ಣ ಶ್ರೀನಿವಾಸನ್ ಹಾಗೂ ಲೇಖಕ ನಿಖಿಲ್ ಜೆ.ಆಳ್ವಾ ಚರ್ಚೆ ನಡೆಸಿದರು.

ರಾಜ್ಯ ಬಿಜೆಪಿ ನಾಯಕರಿಂದ ಡಾ.ರಾಧಾ ಮೋಹನ್ ಅಗರ್ವಾಲ್ ಅವರಿಗೆ ಅಭಿನಂದನೆ



ಬೆಂಗಳೂರಿನ ಜಗನ್ನಾಥ ಭವನದಲ್ಲಿ ಕರ್ನಾಟಕ ರಾಜ್ಯ ಬಿಜೆಪಿ ನೂತನ ಉಸ್ತುವಾರಿ ಡಾ.ರಾಧಾ ಮೋಹನ್ ಅಗರ್ವಾಲ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಇದೇ ವೇಳೆ ಪಕ್ಷದ ಸಂಘಟನೆ ವಿಚಾರವಾಗಿ ಚರ್ಚಿಸಲಾಯಿತು. ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್, ಚಾಮರಾಜನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಮ್ ಗೌಡ, ರಾಜೀವ್, ಮಾಜಿ ಶಾಸಕರಾದ ಎಸ್.ಬಾಲರಾಜು, ಹರ್ಷವರ್ಧನ್, ಮುಖಂಡರಾದ ರಾಮಚಂದ್ರ, ಕೃಷ್ಣನಾಯಕ್, ಫಣೀಶ್, ಅಶೋಕ್, ಸಿ.ರಮೇಶ್, ನೂರೊಂದು ಶೆಟ್ಟಿ, ಪ್ರಣಯ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಮಾನದಲ್ಲಿ ತಾಂತ್ರಿಕ ದೋಷ: 12 ಗಂಟೆಗಳಿಂದ ಪ್ರಯಾಣಿಕರು ಲಾಕ್

ಬೆಂಗಳೂರು, ಜು.6- ದೆಹಲಿಯಿಂದ ಬೆಂಗಳೂರಿಗೆ ಹಾರಬೇಕಿದ್ದ ಸ್ಪೈಸ್‌ಜೆಟ್ ಏರ್‌ಲೈನ್ಸ್ ಸಿಬ್ಬಂದಿ ಎಡವಟ್ಟಿನಿಂದಾಗಿ ಪ್ರಯಾಣಿಕರು 12 ಗಂಟೆಗಳ ಕಾಲ ವಿಮಾನದಲ್ಲೇ ಲಾಕ್ ಆಗಿ ಪರದಾಡಿದ ಘಟನೆ ವರದಿಯಾಗಿದೆ.



ನಿನ್ನೆ ಸಂಜೆ ದೆಹಲಿಯಿಂದ ಬೆಂಗಳೂರಿಗೆ ಹೋಗುವ SG 8151ನ ಸ್ಪೈಸ್ ಜೆಟ್ ಏರ್‌ಲೈನ್ಸ್ ವಿಮಾನವನ್ನು ಏರಿದ ಸುಮಾರು 60 ಪ್ರಯಾಣಿಕರು ಸತತ 12 ಗಂಟೆಗಳಿಗೂ ಅಧಿಕ ಕಾಲ ವಿಮಾನದೊಳಗೆ ಲಾಕ್ ಆಗಿ ಪರದಾಡಿದ್ದಾರೆ.

ತಾಂತ್ರಿಕ ದೋಷ ಎಂದು ನಿನ್ನೆ ಸಂಜೆಯಿಂದ ಬೆಳಗ್ಗೆವರೆಗೂ ದೆಹಲಿ ಏರ್ಪೋರ್ಟ್‌ನಲ್ಲೆ ಫ್ಲೈಟ್ ನಿಲ್ಲಿಸಲಾಗಿದ್ದು ಪ್ರಯಾಣಿಕರನ್ನು ಹೊರಗೆ ಬಿಡದೆ ಸಿಬ್ಬಂದಿ ಎಡವಟ್ಟು ಮಾಡಿದ್ದಾರೆ. ಅಲ್ಲದೆ, ಪ್ರಯಾಣಿಕರಿಗೆ ಊಟ, ತಿಂಡಿ ವ್ಯವಸ್ಥೆಯೂ ಮಾಡದೆ ಫ್ಲೈಟ್‌ನಲ್ಲೇ ಕೂರಿಸಿದ್ದಾರೆ. ಈ ವೇಳೆ ಆಚೆಯೂ ಹೋಗಲಾಗದೆ ಒಳಗೂ ಇರಲಾಗದೆ ಪ್ರಯಾಣಿಕರು ಪರದಾಡಿದ್ದು, ಆಕ್ರೋಶ ಹೊರ ಹಾಕಿದ್ದಾರೆ.

ಪ್ರತಿಯೊಬ್ಬರ ಆರೋಗ್ಯದ ಮಾನದಂಡ ವಿಭಿನ್ನ; ಖ್ಯಾತ ಡಯೆಟಿಷಿಯನ್ ಶೋನಾಲಿ ಸಬೆರ್ವಾಲ್



ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ ಆಹಾರ ಕ್ರಮ ಕುರಿತು ಖ್ಯಾತ ಡಯೆಟಿಷಿಯನ್ ಹಾಗೂ ಲೇಖಕಿ ಶೋನಾಲಿ ಸಬೆರ್ವಾಲ್ ಅವರೊಂದಿಗೆ ಲೇಖಕಿ ಅನುಜಾ ಚಂದ್ರಮೌಳಿ ಚರ್ಚೆ ನಡೆಸಿದರು.

ಮೈಸೂರು,ಜು.6(ಪಿಎಂ)- ಉತ್ತಮ ಆರೋಗ್ಯವೆಂದರೆ ಅದು ಕೇವಲ ದೈಹಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಆರೋಗ್ಯವನ್ನೂ ಒಳಗೊಂಡಿರುತ್ತದೆ. ಅದೇ ನೈಜ ಆರೋಗ್ಯವಾಗಿದ್ದು, ಪ್ರತಿಯೊಬ್ಬರ ಆರೋಗ್ಯದ ಮಾನದಂಡಗಳು ವಿಭಿನ್ನತೆಯಿಂದ ಕೂಡಿರುತ್ತವೆ ಎಂದು ಖ್ಯಾತ ಡಯೆಟಿಷಿಯನ್ ಹಾಗೂ ಲೇಖಕಿ ಶೋನಾಲಿ ಸಬೆರ್ವಾಲ್ ಹೇಳಿದರು.

ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ 'ಸರಿಯಾದ ಆಹಾರ ಕ್ರಮ ಆಯ್ಕೆಯಲ್ಲಿ ಗೊಂದಲ; ಸಮಗ್ರ ದೃಷ್ಟಿಕೋನ (Confusion to Correction: A Macro Perspective)' ಕುರಿತು ಶನಿವಾರ ನಡೆದ ಆಂಗ್ಲ(ಇಂಗ್ಲಿಷ್) ಚರ್ಚಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಾನು ಕೆಲಸ ಮಾಡುವ ಕ್ಷೇತ್ರದಲ್ಲಿ ದೇಹದ ಗಾತ್ರದ ಬಗೆಗಿನ ಕೀಳರಿಮೆ ಹೆಚ್ಚಿದೆ. ನನ್ನ ಒಂದು ಪುಸ್ತಕದಲ್ಲಿ ಈ ಬಗ್ಗೆ ಸಾಕಷ್ಟು ವಿವರಿಸಿದ್ದೇನೆ. ನಾವು ನಮ್ಮ ವಯೋಮಾನದ ಹಂತಕ್ಕೆ ಇರುವುದನ್ನು ಸ್ವೀಕರಿಸಲೇಬೇಕು. ನನ್ನ ಬಗ್ಗೆಯೇ ಹೇಳುವುದಾದರೆ ಶೋನಾಲಿ ಈಗ 20 ವರ್ಷದ ಕೇವಲ 48 ಕೆಜಿ ತೂಕದ ಶೋನಾಲಿ ಅಲ್ಲ, ನನ್ನ ವಯೋಮಾನ ಹೆಚ್ಚಾಗಿದೆ ಅಥವಾ ಬದಲಾಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ವಿವಿಧ ಹಂತಗಳಲ್ಲಿ ದೇಹದ ಆಕಾರವು ಬದಲಾಗಲಿದೆ ಎಂದರು. ನಾನು ಬಹಳಷ್ಟು ಬಾಲಿವುಡ್ ಸೆಲೆಬ್ರಿಟಿಗಳ ಆಹಾರ ಕ್ರಮದ ಬಗ್ಗೆ ಕೆಲಸ ಮಾಡಿದ್ದೇನೆ. ನೀವು ಕ್ಯಾಮೆರಾದಲ್ಲಿ ನೋಡುವಂತೆ ಹಲವರು ಇರುವುದಿಲ್ಲ. ಅವರು ಅನೇಕ ಅನಾರೋಗ್ಯ ಸಮಸ್ಯೆಗಳನ್ನು ಹೊಂದಿದ್ದಾರೆ. ಬಹಳಷ್ಟು ಮಂದಿ ಥೈರಾಯ್ಡ್ ಸಮಸ್ಯೆ ಹೊಂದಿದ್ದಾರೆ. ಆದರೆ ಅವರು ಆ ಬಗ್ಗೆ ಎಲ್ಲಿಯೂ ಹೇಳಿಕೊಳ್ಳುವುದಿಲ್ಲವಷ್ಟೇ ಎಂದು ಹೇಳಿದರು.

ಪ್ರತಿಯೊಬ್ಬರ ಆರೋಗ್ಯ ಹಾಗೂ ಆಹಾರ ಕ್ರಮ ವೈಯಕ್ತಿಕವಾದವು. ಸಕ್ಕರೆ ಅಂಶದ ಬಗ್ಗೆ ನಮ್ಮ ಸಮಾಜದಲ್ಲಿ ಸಾಕಷ್ಟು ತಪ್ಪು ಕಲ್ಪನೆ ಇದೆ. ಸಕ್ಕರೆ ಅಂಶವಿಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಸಕ್ಕರೆ ಅಂಶದಲ್ಲಿ ಸಮತೋಲನ ಕಾಯ್ದುಕೊಳ್ಳಲು ಧಾನ್ಯಗಳನ್ನು ಹೊಂದಿದ ಆಹಾರ ಕ್ರಮ ರೂಢಿಸಿಕೊಳ್ಳಬೇಕಾಗುತ್ತದೆ ಎಂದು ವಿವರಿಸಿದರು.

ಮಹಿಳೆಯರ ಮೇಲಿನ ಶೋಷಣೆ ಅಭಿವ್ಯಕ್ತಕ್ಕೂ ಕಾವ್ಯಗಳು ಸಹಕಾರಿ




ಕಾವ್ಯ ಸಂವಾದದಲ್ಲಿ ಲೇಖಕಿಯರಾದ (ಎಡದಿಂದ) ಸೋನಾಲಿ ಪಟ್ನಾಯಕ್, ರುಗ್ಮಣಿ ಪ್ರಭಾಕರ್, ಸೋನ್ಯಾ ಜೆ ನಾಯರ್, ಕವಿತಾ ರತ್ನ, ರೋಶೆಲ್ ಪೋಟ್ಕರ್ ಕಾವ್ಯ ವಾಚಿಸಿದರು.

ಮೈಸೂರು, ಜು.6(ಎಂಕೆ)- ಕಾವ್ಯಗಳು ಭಾವನೆಗಳ ಪ್ರತಿಬಿಂಬವಾಗಿದ್ದು, ರಸಸ್ವಾದದೊಂದಿಗೆ ವಸ್ತುನಿಷ್ಠತೆಯಿಂದ ಕೂಡಿದ್ದು, ಲಯಬದ್ಧವಾಗಿರಲಿವೆ ಎಂದು ಕಾವ್ಯಗಳ ರಚನೆ ಕುರಿತ ಸಂವಾದದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಲೇಖಕಿಯರಾದ ರುಗ್ಮಣಿ ಪ್ರಭಾಕರ್, ಕವಿತಾ ರತ್ನ, ಸೋನ್ಯಾ ಜೆ ನಾಯರ್, ಸೋನಾಲಿ ಪಟ್ನಾಯಕ್, ರೋಶೆಲ್ ಪೋಟ್ಕರ್ ಅವರು, ತಮ್ಮ ತಮ್ಮ ಕಾವ್ಯಗಳನ್ನು ವಾಚಿಸುವ ಮೂಲಕ ಗಮನ ಸೆಳೆದರಲ್ಲದೆ ಕಾವ್ಯಗಳ ಮಹತ್ವ ತಿಳಿಸಿಕೊಟ್ಟರು. ಹೆಣ್ಣಿನ ಭಾವನೆಗಳನ್ನು ವ್ಯಕ್ತಪಡಿಸಲು ಕಾವ್ಯಗಳು ಸುಲಭಮಾರ್ಗವಾಗಿದೆ. ಹಾಗೆಯೇ ರಾಮಾಯಣ, ಮಹಾಭಾರತವೂ ಕಾವ್ಯಗಳಾಗಿದ್ದು, ಜನ ಮಾನಸದಲ್ಲಿ ನೆಲೆಯೂರಿವೆ ಎಂದರು. ಕಾವ್ಯಗಳನ್ನು ಬಿಟ್ಟು ಬಿಟ್ಟು ಬರೆಯುವುದು ಕಷ್ಟ, ಬರೆಯುವ ಆಲೋಚನೆ ಹಾಗೂ ವಿಚಾರ ಮನನವಾದ ಕೂಡಲೇ ಬರೆದರೆ ಇನ್ನಷ್ಟು ಸುಲಭವಾಗುತ್ತದೆ. ಇತ್ತೀಚಿನ ದಿನಗಳನ್ನು ರಸಸ್ವಾದದ ಅಭಿರುಚಿಯುಳ್ಳ ಕಾವ್ಯಗಳ ಓದುವಿಕೆ ಹೆಚ್ಚಾಗಿದೆ. ಕನಸುಗಳು ಕೂಡ ಕಾವ್ಯಗಳಾಗಿ ಬದಲಾಗುವುದುಂಟು. ಪ್ರಸಕ್ತ ವಿದ್ಯಮಾನಗಳು, ಮಹಿಳೆಯರ ಮೇಲಿನ ಶೋಷಣೆಯನ್ನು ಅಭಿವ್ಯಕ್ತಪಡಿಸಲು ಕಾವ್ಯಗಳು ಸಹಕಾರಿಯಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಲ್ಲಿ ಬಾಬೂಜಿ ಅವರಿಗೆ ಪುಷ್ಪನಮನ



ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಡಾ.ಬಾಬು ಜಗಜೀವನ್ ರಾಂ ಅವರ 38ನೇ ಪುಣ್ಯಸ್ಮರಣೆ ಅಂಗವಾಗಿ ರೈಲ್ವೆ ನಿಲ್ದಾಣ ಮುಂಭಾಗ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾಧ್ಯಕ್ಷ ಶಂಕರ, ಶಿವಣ್ಣ, ನಾಗರಾಜು, ಸ್ವಾಮಿ, ಗಿರೀಶ್‌ಕುಮಾರ್, ರಾಜು, ಶೇಖರ್, ರಾಚಪ್ಪ, ಮಹೇಶ, ಕರಿಯಪ್ಪ, ಮಣಿಕಂಠ, ಸಿದ್ದರಾಜು ಇನ್ನಿತರರು ಉಪಸ್ಥಿತರಿದ್ದರು.

ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳಲ್ಲಿ ಭರವಸೆಯ ಬೆಳಕು

'ಮಕ್ಕಳೊಡನೆ ನಾವಿದ್ದೇವೆ' ಆಪ್ತ ಸಮಾಲೋಚನೆ, ಸಂವಾದದಲ್ಲಿ ಸಂತ್ರಸ್ತರಿಗೆ ಚೈತನ್ಯ ತುಂಬಿ ಅಭಯ

ಮೈಸೂರು, ಜು.6(ಜಿಎ)-ಮೈಸೂರಿನ ಒಡನಾಡಿ ಸಂಸ್ಥೆಯ ಮಡಿಲು ಪುನರ್ವಸತಿ ಕೇಂದ್ರದಲ್ಲಿ ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಕ್ಕಳೊಡನೆ ನಾವಿದ್ದೇವೆ ಎಂಬ ಆಪ್ತ ಸಮಾಲೋಚನೆ ಮತ್ತು ಸಂವಾದ ನಡೆಸಲಾಯಿತು.



ಮೈಸೂರಿನ ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದಲ್ಲಿ ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 'ಮಕ್ಕಳೊಡನೆ ನಾವಿದ್ದೇವೆ' ಎಂಬ ಆಪ್ತ ಸಮಾಲೋಚನೆ ಮತ್ತು ಸಂವಾದ ನಡೆಯಿತು.

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಮಕ್ಕಳು ಮತ್ತು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿದ್ದು, ಸಂತ್ರಸ್ತ ಬಾಲಕಿಯರು ಹಾಗೂ ಲೈಂಗಿಕ ದೌರ್ಜನ್ಯಕ್ಕೊಳಗಾದ ಕುಟುಂಬಗಳು ಯಾತನಾಮಯ ಬದುಕು ದೂಡುತ್ತಿರುವ ಸಂದರ್ಭಗಳು ಹೆಚ್ಚಾಗಿ ಕಂಡು ಬರುತ್ತಿವೆ. ಅಂತಹವರನ್ನು ಸುಧಾರಿಸುವ ಹಾಗೂ ಅವರ ಜೊತೆ ನಿಲ್ಲುವ ಉದ್ದೇಶದಿಂದ ಒಡನಾಡಿ ಸೇವಾ ಸಂಸ್ಥೆ, ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಮತ್ತು ಪಿಯುಸಿಎಲ್ ಅವರೆಲ್ಲರೂ ಒಗ್ಗೂಡಿ ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ "ಮಕ್ಕಳೊಡನೆ ನಾವಿದ್ದೇವೆ" ಎಂಬ ಆಶಯದೊಡನೆ ಅವರಿಗೆ ಆಪ್ತ ಸಮಾಲೋಚನೆ, ಭರವಸೆಯ ನಾಯಕತ್ವವನ್ನು ಸೃಷ್ಟಿಸಲು ಈ ಸಂವಾದದನ್ನು ಏರ್ಪಡಿಸಲಾಗಿತ್ತು.

ಸಂವಾದದಲ್ಲಿ ಸಂತ್ರಸ್ತ ಮಕ್ಕಳ ಪರವಾಗಿ ಸೂಕ್ಷ್ಮವಾದಂತಹ ವಿಚಾರಗಳನ್ನಿಟ್ಟುಕೊಂಡು ಮಾತನಾಡುತ್ತಾ, ಈ ಸಮಾಜದ ನಾಗರಿಕರಾದ ನಾವು ನಿಮ್ಮನ್ನು ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ನಿಮ್ಮ ಸಂದಿಗ್ಧ ಪರಿಸ್ಥಿತಿಗಳಲ್ಲಿ ನಿಮ್ಮ ಜೊತೆ ನಿಲ್ಲುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸಂತ್ರಸ್ತ ಮಕ್ಕಳು ನಾವು ಒಂಟಿ ಎಂಬ ಭಾವನೆ, ಅವರ ಮೇಲೆ ನಡೆದ ದೌರ್ಜನ್ಯ ಹಾಗೂ ನೋವು ಇವೆಲ್ಲಾದರಿಂದ ನಂಬಿಕೆಯನ್ನು ಕಳೆದುಕೊಂಡಿದ್ದು, ಹೀಗಾಗಿ ಈ ಮಕ್ಕಳಲ್ಲಿ ಭರವಸೆ ಹಾಗೂ ಅವರಲ್ಲಿ ಹೊಸ ಚೈತನ್ಯವನ್ನು ಮೂಡಿಸುವ ಉದ್ದೇಶವಾಗಿತ್ತು. ಕಾನೂನಿನಲ್ಲಿ ಬಲಿಷ್ಠರೊಡನೆ ಹೋರಾಡಿ, ನಾವು ಗೆಲ್ಲಲು ಸಾಧ್ಯವಿಲ್ಲ ಎಂಬ ಅವರ ಮನಸ್ಥಿತಿಯನ್ನು ಬದಲಿಸಿ, ಮಕ್ಕಳನ್ನು ಮಾನಸಿಕವಾಗಿ ಸದೃಢಗೊಳಿಸುವುದು ಈ ಸಂವಾದದ ಮುಖ್ಯ ಆಶಯ. ಸತ್ಯ ಮತ್ತು ಪ್ರಾಮಾಣಿಕವಾದ ನಡೆ ಗೆದ್ದೇ ಗೆಲ್ಲುತ್ತದೆ ಎಂಬ ಅಭಿಪ್ರಾಯ ಮೂಡಿಸುವುದು ನೈತಿಕವಾಗಿ ಮೈಸೂರಿನ ನಾಗರಿಕರಾದ ನಮ್ಮ ಜವಾಬ್ದಾರಿ ಎಂದು ಸಂವಾದದಲ್ಲಿ ಒಕ್ಕೊರಲಿನಿಂದ ಅಭಿಪ್ರಾಯಪಟ್ಟರು.

ಸಂವಾದದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಈ.ರತಿರಾವ್, ಪ್ರೊ.ಸಬೀಹಾ ಭೂಮಿಗೌಡ, ಪ್ರೊ.ಭೂಮಿಗೌಡ, ಪ್ರೊ.ಕಾಳಚನ್ನೇಗೌಡ, ಪ್ರೊ.ಬಿ.ಸಿ.ಮಂಜುಳ, ಪ್ರೊ.ಲತಾ.ಕೆ.ಬಿದ್ದಪ್ಪ, ಪ್ರೊ.ಪಿ.ಎನ್. ಶ್ರೀದೇವಿ, ಪ್ರೊ.ವನಜ, ಸುಶೀಲಾ ಬಸು, ನಾ.ದಿವಾಕರ, ಸವಿತಾ.ಪ.ಮಲ್ಲೇಶ್, ಸಂತೋಷ್, ಲೀಲಾ ವೆಂಕಟೇಶ್, ಪಿ.ಪುರುಷೋತ್ತಮ, ಡಾ.ಸಾರಿಕ ಪ್ರಸಾದ್ ಹಾಗೂ ಪಿಯುಸಿಎಲ್‌ನ ಕಮಲ್ ಗೋಪಿನಾಥ್, ಒಡನಾಡಿ ಸ್ಟ್ಯಾನ್ಲಿ-ಪರಶು ಮತ್ತು ಸಂಸ್ಥೆಯ ಸಹಭಾಗಿಗಳು ಉಪಸ್ಥಿತರಿದ್ದರು.

ಡೆಂಗ್ಯೂಗೆ ಬೆಂಗಳೂರಲ್ಲಿ ಬಾಲಕ ಸಾವು; ಝೀಕಾಗೆ ಶಿವಮೊಗ್ಗದಲ್ಲಿ ವೃದ್ಧ ಬಲಿ

ಬೆಂಗಳೂರು: ರಾಜ್ಯದಲ್ಲಿ ಡೆಂಗ್ಯೂ ಜ್ವರದ ಅಬ್ಬರ ಹೆಚ್ಚಾಗುತ್ತಿದೆ. ಹಾಸನದಲ್ಲಿ ಮಕ್ಕಳ ಸಾವಿನ ನಂತರ ಬೆಂಗಳೂರಿನಲ್ಲಿ ಡೆಂಗ್ಯೂಗೆ 11 ವರ್ಷದ ಬಾಲಕ ಮೃತಪಟ್ಟಿದ್ದಾನೆ. ಅಂಜನಾಪುರದ 11 ವರ್ಷದ ಬಾಲಕ ಗಗನ್ ಶುಕ್ರವಾರ ತಡರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

ಚೈತನ್ಯ ಟೆಕ್ನೋ ಶಾಲೆಯಲ್ಲಿ ಓದುತ್ತಿದ್ದ ಬಾಲಕ ಗಗನ್ ಕೆಲ ದಿನಗಳಿಂದ ಡೆಂಗ್ಯೂ ಜ್ವರದಿಂದ ಬಳಲುತ್ತಿದ್ದ.

ಶಿವಮೊಗ್ಗದ ಗಾಂಧಿನಗರದಲ್ಲಿ ಝೀಕಾ ವೈರಸ್‌ಗೆ 74 ವರ್ಷದ ವೃದ್ಧ ಬಲಿಯಾಗಿದ್ದಾರೆ. ಜೂ.19ರಂದು ತೀವ್ರ ಜ್ವರದಿಂದ ಬಳಲುತ್ತಿದ್ದ ಅವರಲ್ಲಿ ಝೀಕಾ ವೈರಸ್ ಇರುವುದು ಪತ್ತೆಯಾಗಿತ್ತು. ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ಡಿಸ್ಚಾರ್ಜ್ ಮಾಡಲಾಗಿತ್ತು. ಗುರುವಾರ ಮನೆಗೆ ಕರೆದೊಯ್ದಿದ್ದರು. ಆದರೆ ನಿನ್ನೆ ಮನೆಯಲ್ಲಿ ವೃದ್ಧ ಮೃತಪಟ್ಟಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ನಿವಾಸಿ ವೇಣು ಡೆಂಗ್ಯೂ ಜ್ವರಕ್ಕೆ ಮೃತಪಟ್ಟಿದ್ದಾರೆ ಎಂದು ಶಂಕಿಸಲಾಗಿದೆ. ಮೃತರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದರು.

ಮೈಸೂರು ಸಾಹಿತ್ಯ ಉತ್ಸವ–2024ರ 8ನೇ ಆವೃತ್ತಿ ಆರಂಭ

ರಮೇಶ್ ಅರವಿಂದ್ 'ಇನ್ ಟ್ರೂ ಕಲರ್ಸ್' ಕಾಫಿ–ಟೇಬಲ್ ಪುಸ್ತಕ ಬಿಡುಗಡೆ

ಮೈಸೂರು, ಜು. 6(ಆರ್‌ಕೆ)– ಉದ್ಯಮಿ ಹಾಗೂ ಲೇಖಕ ಅಶ್ವಿನಿ ರಂಜನ್ ಬರೆದಿರುವ ಸಂಬಂಧಿಸಿದ ವಿವರಣೆ ಹಾಗೂ ಛಾಯಾಚಿತ್ರಗಳನ್ನೊಳಗೊಂಡ 'ಇನ್ ಟ್ರೂ ಕಲರ್ಸ್' ಶೀರ್ಷಿಕೆಯ ಕಾಫಿ–ಟೇಬಲ್ ಪುಸ್ತಕವನ್ನು ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆದ ಮೈಸೂರು ಸಾಹಿತ್ಯ ಉತ್ಸವ ಕಾರ್ಯಕ್ರಮದಲ್ಲಿ ನಟ ರಮೇಶ್ ಅರವಿಂದ್ ಇಂದು ಬಿಡುಗಡೆ ಮಾಡಿದರು.

ಅಶ್ವಿನಿ ರಂಜನ್ ಸೃಜನಶೀಲ ಛಾಯಾಗ್ರಾಹಕರೂ ಆಗಿದ್ದು, ತಾವು ತೆಗೆದ ಚಿತ್ರಗಳ ಸುತ್ತ ಕಥೆ ಹೆಣೆಯುವ ಅಪರೂಪದ ಬರವಣಿಗೆ ಕೌಶಲ ಹೊಂದಿದವರು. ಈ ಪುಸ್ತಕದಲ್ಲಿರುವ ಫೋಟೋಗಳನ್ನು ನೋಡಿದಾಗ ಅವರು ತಮ್ಮ ಕಣ್ಣುಗಳಿಂದಷ್ಟೇ ಅಲ್ಲದೆ, ಮನಸ್ಸು ಮತ್ತು ಹೃದಯದ ಒಳಗಣ್ಣಿನಿಂದಲೂ ಕ್ಯಾಮರಾ ಲೆನ್ಸ್‌ನಲ್ಲಿ ಛಾಯಾಚಿತ್ರದ ವಸ್ತುವನ್ನು ನೋಡಬಲ್ಲವರು ಎಂಬುದು ಸ್ಪಷ್ಟವಾಗುತ್ತದೆ.



ಲೇಖಕ ಅಶ್ವಿನಿ ರಂಜನ್ (ಬಲದಿಂದ ಎರಡನೆಯವರು) ಅವರ 'ಇನ್ ಟ್ರೂ ಕಲರ್ಸ್' ಕಾಫಿ–ಟೇಬಲ್ ಪುಸ್ತಕವನ್ನು ನಟ ರಮೇಶ್ ಅರವಿಂದ್ ಬಿಡುಗಡೆ ಮಾಡಿದರು. ಲೇಖಕರ ಪತ್ನಿ ಶಶಿರಂಜನ್ ಹಾಗೂ ಪುತ್ರ ನಿಖಿಲ್‌ರಂಜನ್‌ರನ್ನು ಚಿತ್ರದಲ್ಲಿ ಕಾಣಬಹುದು.



ಪ್ರಮೋದಾದೇವಿ ಒಡೆಯರ್‌ರೊಂದಿಗೆ ಲೇಖಕ ಅಶ್ವಿನಿ ರಂಜನ್.

ಉದಾಹರಣೆಗೆ, ಪುಸ್ತಕದ 68ನೇ ಪುಟದಲ್ಲಿನ ಮೈಸೂರು ಅರಮನೆ ಚಿತ್ರ, 71ನೇ ಪುಟದಲ್ಲಿನ ಅರಮನೆ ಉತ್ತರದ ರಸ್ತೆಗೆ ಅಡ್ಡಲಾಗಿರುವ ಖಾಕಿ ಷಾ ಮಸೀದಿ ಮತ್ತು ಸಂಬಂಧಿಸಿದ ಪಠ್ಯಗಳು ವಿಶೇಷ ಎನಿಸಿವೆ. ಇಲ್ಲಿ ಒಬ್ಬ ಛಾಯಾಗ್ರಾಹಕರಾಗಿ ತನಗೆ ಬೇಕಾದದ್ದನ್ನು ಪಡೆಯಲು ಎದುರಿಸಿದ ಸವಾಲುಗಳು ಅಶ್ವಿನಿ ರಂಜನ್ ಅವರ ಧೈರ್ಯವನ್ನು ತೋರುತ್ತದೆ.

ಅದೇ ರೀತಿ 100 ಮತ್ತು 101ನೇ ಪುಟದಲ್ಲಿರುವ ಚಿತ್ರ ಮತ್ತು ಮಾಹಿತಿಗಳು ವಿಶೇಷ ಎನಿಸಿವೆ. ಹೀಗಾಗಿ ಟೇಬಲ್ ಪುಸ್ತಕಕ್ಕಿಂತ ಮಿಗಿಲಾಗಿದ್ದು, ಓದುಗರ ಕಣ್ಣುಗಳಿಗೆ ರಸದೌತಣ ನೀಡುತ್ತವೆ. ನಮ್ಮ ಜೀವನ ಮತ್ತು ಸಮಯದ ಬಗ್ಗೆ ಯೋಚಿಸುವಂತೆ ಮಾಡುವ ಛಾಯಾಚಿತ್ರಗಳು ನಮ್ಮನ್ನು ಭಾವುಕರಾಗಿಸುತ್ತವೆ.

ಪ್ರತೀ ಚಿತ್ರವೂ ಅಸಾಧಾರಣ ಸಂಯೋಜನೆ, ಬೆಳಕು ಮತ್ತು ನೆರಳಿನ ಮಿಶ್ರಣದೊಂದಿಗೆ ಅತ್ಯುನ್ನತವಾಗಿ ಪ್ರಜ್ವಲಿಸುತ್ತಿವೆ. ಅಶ್ವಿನಿ ರಂಜನ್ ತಮ್ಮ ಕ್ಯಾಮರಾವನ್ನು ಕೌಶಲದಿಂದ ನಿರ್ವಹಿಸಿ ಸೃಜನಶೀಲ ಕಲ್ಪನೆಯೊಂದಿಗೆ ವಿಷಯವನ್ನು ಗುರ್ತಿಸಿದ್ದಾರೆ. ಭಾರತದ ಸರ್ವಶ್ರೇಷ್ಠ ಛಾಯಾಗ್ರಾಹಕರಾದ ಟಿ.ಎಸ್.ಸತ್ಯನ್ ಅವರಿಂದ ಪಡೆದ ಸಲಹೆ, ಮಾರ್ಗದರ್ಶನವನ್ನು ಹೇಳಿದ್ದಾರೆ. ಕಡೇ ದಿನಗಳಲ್ಲಿ ಸತ್ಯನ್ ಮೈಸೂರಲ್ಲಿ ನೆಲೆಸಿದ್ದರು. ಆ ವೇಳೆ ಸತ್ಯನ್, ಅಶ್ವಿನಿ ರಂಜನ್‌ಗೆ ನೀಡಿದ್ದ ಸಲಹೆಗಳೆಂದರೆ, ಮರಳಿ ಪ್ರಯತ್ನ ಮಾಡಿ. ನೀವು ಗುರಿ ತಲುಪುತ್ತೀರಿ ಎಂಬುದು. ಅದರಂತೆ ಅಶ್ವಿನಿ ರಂಜನ್ ನಿಜಕ್ಕೂ ಒಬ್ಬ ಸೃಜನಾತ್ಮಕ ಫೋಟೋಗ್ರಾಫರ್ ಆಗಿ ಹೊರಹೊಮ್ಮಿದ್ದಾರೆ.



ಸದರ್ನ ಸ್ಟಾರ್ ಹೋಟೆಲಿನಲ್ಲಿ ನಡೆದ ಮೈಸೂರು ಸಾಹಿತ್ಯ ಉತ್ಸವದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕ ಸಮೂಹ


ಕಾದಂಬರಿಕಾರ ಅಶ್ವಿನ್ ಸಂಘಿ ಅವರನ್ನು ರೋಮಾಂಚನಗೊಳಿಸಿದ ಮೂರು 'ಇ'ಗಳು

ಮೈಸೂರು, ಜು. 6(ಆರ್‌ಕೆ)– ಮೈಸೂರು ಸಾಹಿತ್ಯ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಖ್ಯಾತ ಕಾದಂಬರಿಕಾರ ಅಶ್ವಿನ್ ಸಂಘಿ ಅವರೊಂದಿಗೆ ಉದ್ಯಮಿ ಮತ್ತು ಲೇಖಕ ಅರೂಣ್ ರಾಮನ್ ಸಂವಾದ ನಡೆಸಿದರು.

'ಆಲೋಚನೆಗಳು, ಪದಗಳು ಮತ್ತು ಡೀಡ್ಸ್–ಯೋ ರಾಷ್ಟ್ರೀಯನ್, ಒಳ್ಳೆಯತನ, ಮಾಂತ್ರಿಕ ವಲಸೆ' ವಿಷಯ ಕುರಿತ ಚರ್ಚೆ ಸಂದರ್ಭ ರೋಜಾಬಾಲ್ ಲೈನ್, ಚಾಣಕ್ಯನ ಪಠಣ, ಕೃಷ್ಣ ಕೀ, ಸಿಯಾಲ್ ಕೋಟ ಕೀ ಮುಂತಾದ ಥ್ರಿಲ್ಲರ್‌ಗಳಿಗೆ ಅಶ್ವಿನ್ ಸಂಘಿ ಖ್ಯಾತರಾಗಿದ್ದಾರೆ.

'ಎಜುಕೇಷನ್, ಎಂಟರ್‌ಟೈನ್ ಮತ್ತು ಎನ್‌ಲೈಟನ್' ಈ ಮೂರು 'ಇ'ಗಳು ಕಾದಂಬರಿಗಾರ ಅಶ್ವಿನ್ ಸಂಘಿ ಅವರನ್ನು ರೋಮಾಂಚನಗೊಳಿಸಿವೆ ಎಂಬುದನ್ನು ಅವರ ಮಾತಿನಿಂದಲೇ ತಿಳಿದು ಸಂವಾದದಲ್ಲಿ ಪಾಲ್ಗೊಂಡ ಸಭಿಕರನ್ನು ಮೂಕ ವಿಸ್ಮಯಗೊಳಿಸಿತು.

ಮಾರ್ವಾಡಿ ಕುಟುಂಬದಿಂದ ಬಂದವರಾದ ಸಂಘಿ, ತಮ್ಮ ಬುದ್ಧಿವಂತಿಕೆ ಹಾಗೂ ಹಾಸ್ಯ ಮಿಶ್ರಿತ ಚರ್ಚೆ ವೇಳೆ ಸಂಪತ್ತಿನ ದೇವತೆಯಾದ 'ಲಕ್ಷ್ಮಿ' ಮತ್ತು ಜ್ಞಾನ ದೇವತೆಯಾದ 'ಸರಸ್ವತಿ' ನಡುವಿನ ಸಂಬಂಧವನ್ನು ತಾವು ಹೇಗೆ ಪರಿಗಣಿಸಿದೆ ಎಂಬುದನ್ನು ವಿವರಿಸಿದರು.



ಅರೂಣ್ ರಾಮನ್‌ರೊಂದಿಗೆ ಸಂವಾದದಲ್ಲಿ ಅಶ್ವಿನ್ ಸಂಘಿ (ಎಡಬದಿ)

2002ರಲ್ಲಿ ಕುಟುಂಬದ ವಿವಾಹದಲ್ಲಿ ಭಾಗವಹಿಸಲೆಂದು ಕಾಶ್ಮೀರದ ಶ್ರೀನಗರಕ್ಕೆ ಭೇಟಿ ನೀಡಿದ ನಂತರ ಬರವಣಿಗೆಯಲ್ಲಿ ತಾವು ತೊಡಗಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ತಿಳಿಸಿ ಸಭಿಕರಲ್ಲಿ ಕುತೂಹಲ ಮೂಡಿಸಿದ ಅವರು, ಆ ದಿನಗಳಲ್ಲಿ ಶ್ರೀನಗರದಲ್ಲಿ ಭಯೋತ್ಪಾದಕತೆ ಉತ್ತುಂಗದಲ್ಲಿತ್ತು ಹಾಗೂ ಮುಂಬೈಗೆ ಹಿಂದಿರುಗಲು ನಾನು ಪ್ರಯಾಣಿಸಬೇಕಿದ್ದ ವಿಮಾನವನ್ನು ರದ್ದುಗೊಳಿಸಲಾಗಿತ್ತು. ಯಾವುದಾದರೂ ಒಳ್ಳೆಯ ಸ್ಥಳಕ್ಕೆ ಕರೆದೊಯ್ಯುವಂತೆ ನನ್ನ ಡ್ರೈವರ್‌ಗೆ ಕೇಳಿದ್ದೆ. ಆದರಿಲ್ಲಿ ಸಂವಾದ ನಡೆಸುತ್ತಿರುವ ಅರೂಣ್ ರಾಮನ್ ಶ್ರೀನಗರದ ಇಸ್ಲಾಮಿಕ್ ಸಂತ ಸೈಯ್ಯದ್ ನಾಸಿರ್ ಉದ್ದಿನ್ ಸಮಾಧಿ ಸ್ಥಳ ರೋಜಾ ಬಾಲ್ ದೇಗುಲದ ಬಗ್ಗೆ ಗಮನ ಸೆಳೆದಿದ್ದಾರೆ ಎಂದು ಸಂಘಿ ಪ್ರಾಸಂಗಿಕವಾಗಿ ನುಡಿದರು.

ಓದುಗರಲ್ಲಿ ಆಸಕ್ತಿ ಹುಟ್ಟುಹಾಕಲು ಕಥೆ ಹೇಳುವ ಬಗ್ಗೆ ತಮ್ಮ ಪತ್ನಿಯಿಂದ ಪಡೆದ ಪ್ರೇರಣೆ, ಪುಸ್ತಕವನ್ನು ಬರೆದು ಮುಗಿಸಿದ ಬಳಿಕ ಪ್ರಕಾಶಕರಿಂದ ನಿರಾಕರಣೆಗಳನ್ನು ಎದುರಿಸಿದ ಅನುಭವ ಹಂಚಿಕೊಂಡ ಅವರು, ಪುಸ್ತಕ ಬರೆಯಲು ಪೂರಕವಾಗಬಲ್ಲ ಮಾಧ್ಯಮಗಳ ಸಂಬಂಧಿತ ಬರವಣಿಗೆಯ ಶಿಸ್ತು ಪ್ರಮುಖವಾಗಿ ಬೇಕಾಗುತ್ತದೆ ಎಂದರು.

'ಅವಿಭಜಿತವಾದ ಬಂಧ', ಕುಡುಕ ಬರಹಗಾರ, ಶಾಂತವಾಗಿ ಸಂಪಾದಿಸಿ ಪದಗುಚ್ಛಗಳ ಮೂಲಕ ಸಭಿಕರನ್ನು ನಗೆಗಡಲಲ್ಲಿ ಮುಳುಗಿಸಿದ ಸಂಘಿ, ಮುಂದಿನ ದಿನ ಮಾರ್ಕೆಟಿಂಗ್ ಆರಂಭಿಸಿದಾಗ ಅದು ಹ್ಯಾಂಗೋವರ್ ಆಗಿತ್ತು ಎಂದರಲ್ಲದೇ, 'ಮ್ಯಾಜಿಷಿಯನ್ಸ್ ಆಫ್ ಮಜ್ದಾ', 'ಭಾರತ ಸರಣಿ–7' ಬರೆದ ಅನುಭವವನ್ನು ಇದೇ ಸಂದರ್ಭ ಹಂಚಿಕೊಂಡರು.

50 ವರ್ಷವಾದರೂ ಕಿಶೋರ್‌ಕುಮಾರ್ ಗಾಯನದ ಹಾಡುಗಳು ಜನರ ಬಾಯಲ್ಲಿ ಗುನುಗುತ್ತಿವೆ


ಮೈಸೂರು, ಜು.6(ಬಿಎಲ್‌ಯು)– ಆರ್.ಡಿ. ಬರ್ಮನ್ ಸಂಗೀತ ಸಂಯೋಜನೆಯಲ್ಲಿ ಕಿಶೋರ್ ಕುಮಾರ್ ಹಾಡಿರುವ ಸುಶ್ರಾವ್ಯವಾದ ನೂರಾರು ಹಾಡುಗಳು 50 ವರ್ಷವಾದರೂ ಜನರ ಬಾಯಲ್ಲಿ ಇನ್ನು ಗುನುಗುತ್ತಿವೆ ಎಂದು ಲೇಖಕ ಶಂತನು ರೇ ಚೌಧರಿ ಅಭಿಪ್ರಾಯಪಟ್ಟರು.

ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 70ರ ದಶಕದ ಹಿಂದಿ ಸಿನಿಮಾದ ಸ್ಟಾರ್‌ಗಳು ಮತ್ತು ಸ್ಟೈಲ್ ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಲೆಯಂತಹ ಸಿನಿಮಾಗಳನ್ನು ಕಾಳಸಂತೆಯಲ್ಲಿ 120 ರೂ.ಗೆ ಟಿಕೆಟ್ ಖರೀದಿಸಿ ನೋಡುವ ಪರಿಸ್ಥಿತಿ ಇತ್ತು. ಅಷ್ಟರ ಮಟ್ಟಿಗೆ ಸಿನಿಮಾ ನೋಡಲು ಅಂದಿನ ಜನರು ಮುಗಿಬೀಳುತ್ತಿದ್ದರು ಎಂದು 1970ರಲ್ಲಿ ಸಿನಿಮಾ ಬಗ್ಗೆ ಜನರಿಗಿದ್ದ ತೀವ್ರಾಸಕ್ತಿಯನ್ನು ಮೆಲುಕು ಹಾಕಿದರು.

ಮಕ್ಕಳು ಸೇರಿದಂತೆ ಮನೆ ಮಂದಿಯೆಲ್ಲಾ ಸೇರಿ ಥಿಯೇಟರ್‌ಗೆ ಹೋಗಿ ಸಿನಿಮಾ ನೋಡುವ ಕಾಲವಿತ್ತು. ನಾನು ಕೂಡ ತಂದೆ ತಾಯಿ ಜೊತೆ ಸಿನಿಮಾ ನೋಡಲು ಹೋಗುತ್ತಿದ್ದೆ. ಆ ದಿನದಲ್ಲಿ ಸಿನಿಮಾದಲ್ಲಿ ಬರುವ ಬಹಳಷ್ಟು ಪಾತ್ರಗಳು ವಿಭಿನ್ನವಾಗಿತ್ತು. ಜೊತೆಗೆ ವಯೋವೃದ್ಧರಾಗಿ ಎಲ್ಲರೂ ಕುಳಿತು ನೋಡುವ ಸಿನಿಮಾಗಳು ಬರುತ್ತಿದ್ದವು ಎಂದರು. ಆದರೆ ತರುವಾಯ ಹಿಂದಿ ಸಿನಿಮಾ ರಂಗದಲ್ಲಿ ಕೂಡ ಸ್ವಲ್ಪ ಬದಲಾವಣೆ ಆಯಿತು. ಸಿನಿಮಾದಲ್ಲಿ ಗ್ಲಾಮರಸ್ ಇರಬೇಕು ಎಂಬ ಕಾರಣಕ್ಕೆ ಪಾಶ್ಚಿಮಾತ್ಯ ಶೈಲಿಯನ್ನು ಅನುಸರಿಸಲಾಯಿತು. ಇದರ ಪರಿಣಾಮ ನಟ–ನಟಿಯರ ವಸ್ತ್ರ ವಿನ್ಯಾಸದಲ್ಲಿ ಬದಲಾವಣೆ ತರಲಾಯಿತು. ಜೊತೆಗೆ ಲೈಂಗಿಕತೆಯನ್ನು ಪ್ರಚೋದಿಸುವ ದೃಶ್ಯಗಳನ್ನು ಚಿತ್ರೀಕರಿಸಲಾಯಿತು ಎಂದರು.

ನಾಯಕ ಮತ್ತು ನಾಯಕಿ ಮಳೆಯಲ್ಲಿ ನೆನೆದು ಹಾಡುವ ಹಾಡಿನ ಕೆಲವು ದೃಶ್ಯಗಳು ಬಂದಾಗ ನಮ್ಮ ತಂದೆ ತಾಯಿ ಕಣ್ಣು ಮುಚ್ಚಿಕೊಳ್ಳುವಂತೆ ಆ ದೃಶ್ಯ ವೀಕ್ಷಣೆಗೆ ನಿರ್ಬಂಧಿಸುತ್ತಿದ್ದರು ಎಂದು ಶಂತನು ರೇ ಚೌಧರಿ ಬಾಲ್ಯದ ದಿನಗಳನ್ನು ನೆನೆದರು. ಆದರೆ ಇಂದು ಕಾಲ ಬದಲಾಗಿದೆ. ಮಲ್ಟಿಪ್ಲೆಕ್ಸ್‌ಗಳಿಗೆ ಹೋಗಿ 500 ರೂ. ಕೊಟ್ಟು ಪಾಪ್‌ಕಾರ್ನ್ ಖರೀದಿಸಿ ಸಿನಿಮಾ ನೋಡುತ್ತಾರೆ. ಓಟಿಟಿಯಲ್ಲಿ ಕೂಡ ಸಿನಿಮಾ ವೀಕ್ಷಿಸುತ್ತಾರೆ. ಆಧುನಿಕತೆಗೆ ತಕ್ಕಂತೆ ಸಿನಿಮಾ ವೀಕ್ಷಣೆಯ ಶೈಲಿ ಕೂಡ ಬದಲಾಗಿದೆ ಎಂದರು.

1970ರ ದಶಕದ ಸಿನಿಮಾ ನೆನಪು ಮೆಲುಕು ಹಾಕಿದ ಲೇಖಕ ಶಂತನು ರೇ ಚೌಧರಿ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 70ರ ದಶಕದ ಹಿಂದಿ ಸಿನಿಮಾದ ಸ್ಟಾರ್‌ಗಳು ಮತ್ತು ಸ್ಟೈಲ್ ಕುರಿತ ವಿಚಾರಗೋಷ್ಠಿಯಲ್ಲಿ ಲೇಖಕ ಶಂತನು ರೇ ಚೌಧರಿ ಮಾತನಾಡಿದರು. ಲೇಖಕರಾದ ಮೈಥಿಲಿ ರಾವ್ ಹಾಗೂ ಬಾಲಾಜಿ ವಿಠಲ್ ಅವರನ್ನು ಚಿತ್ರದಲ್ಲಿ ಕಾಣಬಹುದು.

1970 ರ ದಶಕದ ಸಿನಿಮಾಗಳ ಕಥಾವಸ್ತು ವೀಕ್ಷಕರಲ್ಲಿ ತೀವ್ರಾಸಕ್ತಿ ಮೂಡಿಸುತ್ತಿತ್ತು. ಪ್ರತಿಯೊಂದು ಸಿನಿಮಾ ಕಥೆಯು ಜನರ ಬದುಕಿಗೆ ಹತ್ತಿರವಾಗಿರುತ್ತಿತ್ತು. ಜೊತೆಗೆ ಪ್ರತಿ ಹಾಡು ಇಂಪಾಗಿರುತ್ತಿತ್ತು. ಅದರಲ್ಲೂ ಆರ್.ಡಿ.ಬರ್ಮನ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದ ಕಿಶೋರ್‌ಕುಮಾರ್ ಗಾಯನದ ಹಾಡುಗಳು ಸುಶ್ರಾವ್ಯವಾಗಿರುತ್ತಿದ್ದವು. 50 ವರ್ಷವಾದರೂ ಆ ಹಾಡುಗಳನ್ನು ಈಗಿನ ಜನರು ಗುನುಗುತ್ತಾರೆ. ಅಂದು ಶೋಲೆ ಸಿನಿಮಾಗೆ ಮಾಡಿದ ವೆಚ್ಚ 3 ಲಕ್ಷ. ಅದೇ ದೊಡ್ಡ ಬಜೆಟ್‌ನ ಸಿನಿಮಾ ಎನ್ನಲಾಗುತ್ತಿತ್ತು. ಇಡೀ ದೇಶದಲ್ಲೇ ಶೋಲೆ ಧೂಳೆಬ್ಬಿಸಿತು. ಈ ಸಿನಿಮಾ ನಿರ್ಮಾಪಕರಿಗೆ 38 ಲಕ್ಷ ರೂಪಾಯಿ ಲಾಭ ತಂದುಕೊಟ್ಟಿತು ಎಂದು ತಿಳಿಸಿದರು. ಈಗ ಹೇಗೆ ಪೈರಸಿ ಸಿನಿಮಾಗಳನ್ನು ಕಾಡುತ್ತಿದೆಯೊ ಹಾಗೆ, 1990ರ ನಂತರದ ದಿನಗಳಲ್ಲಿ ವಿಡಿಯೋ ಕ್ಯಾಸೆಟ್‌ಗಳು ಸಿನಿಮಾಗಳಿಗೆ ದೊಡ್ಡ ಹೊಡೆತ ನೀಡಿದವು ಎಂದರು.

ರಂಗಭೂಮಿ ಹಿನ್ನೆಲೆ: ಇದೇ ವೇಳೆ ಮಾತನಾಡಿದ ಲೇಖಕಿ ಮೈಥಿಲಿ ರಾವ್, ಅಂದಿನ ಸಿನಿಮಾದ ಬಹಳಷ್ಟು ನಾಯಕ, ನಟಿಯರು ರಂಗಭೂಮಿ ಹಿನ್ನೆಲೆಯಿಂದ ಬಂದವರಾಗಿದ್ದರು. ಇದರಿಂದ ಸಿನಿಮಾದಲ್ಲಿನ ಪ್ರತಿಯೊಂದು ದೃಶ್ಯವೂ ನೈಜತೆಯಿಂದ ಕೂಡಿರುತ್ತಿತ್ತು. ಇದರಿಂದ ಸಿನಿಮಾ ನೋಡುವ ವೀಕ್ಷಕರು ಆ ಪಾತ್ರದಲ್ಲಿ ತಲ್ಲೀನರಾಗಿರುತ್ತಿದ್ದರು. ಜೊತೆಗೆ ತಮ್ಮೆದುರೇ ಘಟನೆ ನಡೆಯುತ್ತಿದೆ ಎಂಬಂತೆ ಸಿನಿಮಾ ದೃಶ್ಯವನ್ನು ಅನುಭವಿಸುತ್ತಿದ್ದರು ಎಂದರು. ಇನ್ನು 1970ರ ದಶಕದ ಪ್ರತಿಯೊಂದು ಹಾಡು ಇಂಪಾಗಿರುವುದರ ಜೊತೆಗೆ ಅರ್ಥಗರ್ಭಿತವಾಗಿರುತ್ತಿತ್ತು. ಪ್ರತಿಯೊಂದು ಪದದಲ್ಲೂ ತತ್ವವಿರುತ್ತಿತ್ತು. ಸಿನಿಮಾಗಳ ಹಾಡಿನ ದೃಶ್ಯದ ಚಿತ್ರೀಕರಣಕ್ಕಾಗಿ ಜಮ್ಮು–ಕಾಶ್ಮೀರ್, ಹಿಮಾಚಲ ಪ್ರದೇಶದಂತಹ ಬೆಟ್ಟ ಗುಡ್ಡಗಳ ಹಸಿರಿನ ವಾತಾವರಣವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು ಎಂದು ಮೈಥಿಲಿ ರಾವ್ ಹೇಳಿದರು. 1970–80ರ ದಶಕದ ಸಿನಿಮಾಗಳ ಬಗ್ಗೆ ಆಸಕ್ತಿ ಹೊಂದಿರುವ ಬಹಳಷ್ಟು ಜನರಿದ್ದಾರೆ. ಈ ಹಿನ್ನೆಲೆ ಇಂದಿನ ವಿಚಾರ ಗೋಷ್ಠಿಯಲ್ಲಿ ಹಳೆ ಬೇರು, ಹೊಸ ಚಿಗುರಿನ ತಲೆಮಾರಿನ ಜನರೆಲ್ಲಾ ಒಟ್ಟಿಗೆ ಕುಳಿತು ಹಳೆಯ ಸಿನಿಮಾಗಳ ಬಗ್ಗೆ ಮಾತನಾಡಿದರು ಹಾಗೂ ಚರ್ಚಿಸಿದರು. ಲೇಖಕ ಬಾಲಾಜಿ ವಿಠಲ್ ಕೂಡ ವಿಚಾರಗೋಷ್ಠಿಯಲ್ಲಿ ಹಿಂದಿ ಸಿನಿಮಾದ ಬಗ್ಗೆ ಮಾತನಾಡಿದರು.

ಮನುಷ್ಯ ನಾಗರಿಕನಾದಂತೆ ವನ್ಯಜೀವಿ ಸಂಪತ್ತಿಗೆ ಕಂಟಕ

- ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ವಿಷಾದ
- ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಉರಗ ತರಂಗ–ಕಲಿಸಿ, ತಿಳಿಸಿ, ಉಳಿಸಿ' ಗೋಷ್ಠಿಯಲ್ಲಿ ಮಾಹಿತಿ

ಮೈಸೂರು, ಜು.6(ಎಂಟಿವೈ)– ಮನುಷ್ಯ ನಾಗರಿಕನಾದಂತೆ ಪ್ರಕೃತಿ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿರುವುದರಿಂದ ಉರಗ ಸೇರಿದಂತೆ ಪ್ರಾಣಿ–ಪಕ್ಷಿ ಸಂಕುಲ ನಾಶವಾಗುತ್ತಿದೆ ಎಂದು ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ವಿಷಾದಿಸಿದ್ದಾರೆ.

ಎಂಟನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ' ಕಾರ್ಯಕ್ರಮದಲ್ಲಿ 'ಉರಗ ತರಂಗ–ಕಲಿಸಿ, ತಿಳಿಸಿ, ಉಳಿಸಿ' ಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಿ ಮೇಲೆ ಮನುಷ್ಯನಿಗೆ ಮುನ್ನವೇ ಮಿಲಿಯನ್ ವರ್ಷಗಳ ಹಿಂದೆಯೇ ಉರಗ ಸೇರಿದಂತೆ ಪ್ರಾಣಿ–ಪಕ್ಷಿ ಸಂಕುಲ ನೆಲೆಸಿತ್ತು. ಮನುಷ್ಯ ಅನಾಗರಿಕನಾಗಿ ಬದುಕುತ್ತಿದ್ದಾಗ ವನ್ಯಜೀವಿ ಸಂತತಿಗೆ ಯಾವುದೇ ಸಮಸ್ಯೆ ಇರಲಿಲ್ಲ. ಆತ ನಾಗರಿಕತೆಗೆ ಅನುಗುಣವಾಗಿ ಪ್ರಗತಿ ಸಾಧಿಸುತ್ತಾ ಬಂದಂತೆ ಪ್ರಾಣಿ–ಪಕ್ಷಿ ಸಂಕುಲದ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿದೆ. ನಮ್ಮ ಸ್ವಾರ್ಥಕ್ಕಾಗಿ ಪರಿಸರವನ್ನು ಹಾಳು ಮಾಡುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ 'ಉರಗ ತರಂಗ–ಕಲಿಸಿ, ತಿಳಿಸಿ, ಉಳಿಸಿ' ಕುರಿತು ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ಮಾತನಾಡಿದರು.

ನಾನು 1976–77ರಲ್ಲಿ ಹುಡುಗಾಟಕ್ಕೆ ಉರಗ ಸಂರಕ್ಷಣೆಗಿಳಿದೆ. ಅಂದು ಎದುರು ಮನೆಗೆ ಹಾವೊಂದು ಬಂದಿತ್ತು. ಅದನ್ನು ಕಂಡು ಆ ಮನೆಯ ಮಹಿಳೆ ಚೀರಾಡುತ್ತಿದ್ದನ್ನು ಗಮನಿಸಿ ನಾನು ಹೋಗಿ ನೋಡಿದಾಗ ಹಾವು ಕಂಡುಬಂತು. ಆಗ 10–11 ವರ್ಷದ ಬಾಲಕನಾಗಿದ್ದ ನಾನು ಹುಡುಗಾಟದಿಂದಲೇ ಆ ಹಾವನ್ನು ರಕ್ಷಿಸಿದೆ. ಇಂದು ಅದನ್ನೇ ವೃತ್ತಿಯಾಗಿ ಮುಂದುವರೆಸಿದ್ದೇನೆ. ಈಗ ದೇಶದುದ್ದಗಲಕ್ಕೂ ಹಾವುಗಳ ಸಂತತಿ ಸಂರಕ್ಷಣೆ ಕುರಿತಂತೆ ಜನರಲ್ಲಿ ಜಾಗೃತಿ ಉಂಟಾಗಿದೆ. ಸಣ್ಣ ಹಾವು ಕಂಡರೂ ಉರಗ ಸಂರಕ್ಷಕರನ್ನು ಕರೆಸಿ ಅದನ್ನು ರಕ್ಷಣೆ ಮಾಡುವಂತೆ ಹೇಳುವ ದೊಡ್ಡ ಮನಸ್ಸು ಜನರಲ್ಲಿ ಕಂಡುಬರುತ್ತಿದೆ. ಇದು ಉತ್ತಮ ಬೆಳವಣಿಗೆ. ಪರಿಸರ ಸಮತೋಲನ ಕಾಯ್ದುಕೊಳ್ಳಬೇಕಾದರೆ ಎಲ್ಲಾ ಪ್ರಾಣಿ–ಪಕ್ಷಿ, ಕೀಟಗಳ ಸಂತತಿ ರಕ್ಷಣೆಗೆ ಸಹಕರಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಇತ್ತೀಚೆಗಷ್ಟೇ 'ಸ್ನೇಕ್ಸ್ ಆಫ್ ಮೈಸೂರು' ಪುಸ್ತಕವನ್ನು ಅಡವಿ ಫೌಂಡೇಷನ್ ಹೊರತಂದಿದೆ. ಆ ಪುಸ್ತಕದಲ್ಲಿ ಮೊದಲಿಗೆ ನನ್ನ ಬಗ್ಗೆ ಮಾಹಿತಿ ನೀಡಿದ್ದಾರೆ. ಹಾವುಗಳ ಸಂಪೂರ್ಣ ವಿವರಣೆ, ಕಚ್ಚಿದರೆ ಚಿಕಿತ್ಸಾ ವಿಧಾನ ಅದರಲ್ಲಿದೆ. ಅಡವಿ ಫೌಂಡೇಷನ್ ಮುಖ್ಯಸ್ಥ ಪವನ್ ಜೋಶಿ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರು ವನ್ಯಜೀವಿ ಸಂಪತ್ತು ಹೊಂದಿರುವ ನಗರವಾಗಿದೆ. ಸುತ್ತಲೂ ಅರಣ್ಯ ಪ್ರದೇಶವಿದ್ದು, ಪ್ರಾಕೃತಿಕ ಸಂಪತ್ತನ್ನು ಹೇರಳವಾಗಿ ಹೊಂದಿರುವ ಜಿಲ್ಲೆಯೂ ಆಗಿದೆ. ಈ ನಿಟ್ಟಿನಲ್ಲಿ ಉರಗ ಸಂತತಿ ಸೇರಿದಂತೆ ವನ್ಯಜೀವಿ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದರು. ಅಡವಿ ಫೌಂಡೇಷನ್ ಯೋಜನಾ ವ್ಯವಸ್ಥಾಪಕ ವರ್ಷ ಆನಂದ್ ಉಪಸ್ಥಿತರಿದ್ದರು.

ಭೂಮಿ ಮೇಲಿನ ಶೇ.70ರಷ್ಟು ಕೆರೆಗಳು ನಾಶವಾಗಿವೆ

- ಪರಿಸರವಾದಿಯೂ ಆದ ಹಿರಿಯ ನಟ ಸುರೇಶ್ ಹೆಬ್ಳೀಕರ್ ವಿಷಾದ
- ತೇಜಸ್ವಿಯವರಿಂದ ಸಾವಿರಾರು ಜನ ಪರಿಸರ ಪ್ರೇಮಿಗಳಾದರು: ಶಶಿಧರ್ ಹಾಲಾಡಿ

ಮೈಸೂರು, ಜು.6(ಜಿಎ)–ಭೂಮಿ ಮೇಲೆ ಶೇ.70ರಷ್ಟು ಕೆರೆಗಳು ನಾಶವಾಗಿದ್ದು, ಈಗ ಸ್ವಾಭಾವಿಕ ಪರಿಸರವಿಲ್ಲ ಎಂದು ಪರಿಸರವಾದಿ, ಹಿರಿಯ ನಟ ಸುರೇಶ್ ಹೆಬ್ಳೀಕರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿಯ 'ಕಾಡು–ನಾಡು–ಕಾಪಾಡು' ಸಾಹಿತ್ಯ–ಸಿನಿಮಾ ಮತ್ತು ಪರಿಸರ ಚಿಂತನೆ ಕುರಿತು ಆಯೋಜಿಸಿದ್ದ ಗೋಷ್ಠಿಯಲ್ಲಿ ಅವರು ಮಾತನಾಡಿದರು. ನಾನು ಎಂ.ಎ ವ್ಯಾಸಂಗ ಮಾಡುತ್ತಿದ್ದ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ವಿಶ್ವದ ಉತ್ತಮ ಸಿನಿಮಾಗಳನ್ನು ಪ್ರದರ್ಶನ ಮಾಡಿದ್ದರು. ಅವುಗಳಲ್ಲಿ ಬಹುತೇಕ ಬೆಂಗಾಲಿ ಸಿನಿಮಾಗಳು, ಸಾಕಷ್ಟು ಪ್ರೇರಣೆ ನೀಡಿದವು. ನಂತರ ಪ್ರಾಧ್ಯಾಪಕರ ಬಳಿ ಚಿತ್ರಗಳ ವಿಶ್ಲೇಷಣೆಯಲ್ಲಿ ತೊಡಗಿದ್ದಾಗ ಅವರು ನನಗೆ ಸಿನಿಮಾ ಮಾಡುವಂತೆ ಸಲಹೆ ನೀಡಿದರು. ಆದರೆ, ನಾನು ಹೇಗೆ ಸಿನಿಮಾ ಮಾಡಲಿ ಎಂದು ಅವರ ಮುಂದೆ ಪ್ರಶ್ನೆ ಇಟ್ಟಾಗ ಅವರು ಫ್ರಾನ್ಸ್‌ನಲ್ಲಿ ನಿನ್ನ ವಯಸ್ಸಿನವರು ನೈಜ್ಯ ರೀತಿಯ ಸಿನಿಮಾಗಳನ್ನು ತೆಗೆದು ಅಮೇರಿಕಾದ ಚಿತ್ರಗಳನ್ನು ಹಿಂದಿಕ್ಕಿದರು. 'ಬ್ರೆಥ್‌ಲೆಸ್' ಚಿತ್ರ ವಿಶ್ವಮನ್ನಣೆ ಗಳಿಸಿತ್ತು. ನೀನು ನಮ್ಮ ದೇಶದ ಶ್ರೀಮಂತಿಕೆಯನ್ನು ಬಳಸಿಕೊಂಡು ಚಿತ್ರಗಳಲ್ಲಿ ತೊಡಗುವಂತೆ ಸಲಹೆ ನೀಡಿದರು ಎಂದು ತಾವು ಚಿತ್ರರಂಗಕ್ಕೆ ಬರಲು ಕಾರಣವಾದ ವಿಚಾರವನ್ನು ವಿವರಿಸಿದರು.



8ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದ 'ಕಾಡು–ನಾಡು–ಕಾಪಾಡು' ಸಾಹಿತ್ಯ–ಸಿನಿಮಾ ಮತ್ತು ಪರಿಸರ ಚಿಂತನೆ ಕುರಿತ ಗೋಷ್ಠಿಯನ್ನು (ಎಡದಿಂದ) ಪರಿಸರವಾದಿ ಲಕ್ಷ್ಮೀಕಾಂತರಾಜೇ ಅರಸ್ ನಡೆಸಿಕೊಟ್ಟರು. ಈ ವೇಳೆ ನಟ ಸುರೇಶ್ ಹೆಬ್ಳೀಕರ್, ಅಂಕಣಕಾರ ಶಶಿಧರ್ ಹಾಲಾಡಿ ಉಪಸ್ಥಿತರಿದ್ದರು.

ಮೊದಲ ನಿರ್ದೇಶನದ 'ಉಷಾ ಕಿರಣ' ಚಿತ್ರವೂ ಸಾಕಷ್ಟು ನೈಜ ಅಂಶಗಳನ್ನು ಇಟ್ಟುಕೊಂಡು ಮಾಡಿದ ಚಿತ್ರವಾಗಿದ್ದು, ನನ್ನ ಬಾಲ್ಯದ ದಿನಗಳ ಅನುಭವಗಳನ್ನು ಇದರಲ್ಲಿ ತುಂಬಿದ್ದೇನೆ. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ದೊಡ್ಡ ಬಜೆಟ್‌ನ ಸಿನಿಮಾಗಳು ಬರುತ್ತಿವೆ. ಆದರೆ ಅವುಗಳಲ್ಲಿ ನೈಜತೆ ಇಲ್ಲದಂತಾಗಿದ್ದು, ನಟ, ನಟಿಯರಿಗೆ ಖರ್ಚು ಮಾಡುವುದೇ ಸಿನಿಮಾವಾಗಿದ್ದು, ಮಾಧ್ಯಮಗಳು ಒಬ್ಬರೇ ನಟರನ್ನು ಫೋಕಸ್ ಮಾಡಬಾರದು ಎಂದರು.

ಪರಿಸರ ಕುರಿತು ಮಾತನಾಡಿದ ಅವರು, ವಿಶ್ವದಾದ್ಯಂತ ಶೇ.70ರಷ್ಟು ಕೆರೆಗಳು ನಾಶವಾಗಿದ್ದು, ಹುಲ್ಲುಗಾವಲು ಎಲ್ಲಿವೇ ಎಂದು ಹುಡುಕಾಡಬೇಕಿದೆ. ಎಲ್ಲಿ ನೋಡಿದರೂ ಸ್ವಾಭಾವಿಕ ಪರಿಸರವಿಲ್ಲ. ಅಸ್ವಾಭಾವಿಕ ಪರಿಸರ ನಿರ್ಮಾಣಗೊಳ್ಳುತ್ತಿದ್ದು, ಜಾಗತಿಕ ವಾತಾವರಣ ಬದಲಾಗುತ್ತಿದೆ. ಮುಂದೆ ನಾಗರಿಕ ಜೀವನ ಕಷ್ಟಕರವಾಗಲಿದೆ ಎಂದರು.

ಗೋಷ್ಠಿಯಲ್ಲಿದ್ದ ಅಂಕಣಕಾರ ಶಶಿಧರ್ ಹಾಲಾಡಿ ಅವರು ಓದುಗರ ಪ್ರಮಾಣ ಹೆಚ್ಚಿಸುವುದು, ಪರಿಸರ ಕಾಳಜಿ ಕುರಿತು ಮಾತನಾಡಿ, ಮುಂದಿನ ಪೀಳಿಗೆಗೆ ಪರಿಸರ ಉಳಿಸುವುದು ಮುಖ್ಯ. ಪೂರ್ಣಚಂದ್ರ ತೇಜಸ್ವಿ ಅವರ ಪ್ರೇರಣೆಯಿಂದ ಸಾವಿರಾರು ಜನ ಪ್ರಾಮಾಣಿಕ ಪರಿಸರ ಪ್ರೇಮಿಗಳು ಹುಟ್ಟಿದ್ದಾರೆ. ತೇಜಸ್ವಿ ಕಾಡಿನ ಒಂದು ಭಾಗದಲ್ಲಿ ನೆಲೆಸಿ, ಪರಿಸರ ಕಾಳಜಿಯಿಂದ ಗಂಭೀರ ಸಾಹಿತ್ಯ ಬಿಟ್ಟು, ಪರಿಸರ ಸಾಹಿತ್ಯಕ್ಕೆ ಹೆಚ್ಚು ಒತ್ತು ನೀಡಿದ ಪರಿಣಾಮ ಸಮಾಜದಲ್ಲಿ ಸಾಕಷ್ಟು ಬದಲಾವಣೆಯಾಗಿದೆ ಎಂದರು.

ಬಹುತೇಕರು ತೇಜಸ್ವಿ ಅವರ ಬಳಿ ಹೋಗಿ ನೀವು ಗಂಭೀರ ಸಾಹಿತ್ಯ ಬಿಟ್ಟು ಏಕೆ ಪರಿಸರ ಸಾಹಿತ್ಯ ಬರೆಯುತ್ತಿದ್ದೀರಾ ಎಂದು ಪ್ರಶ್ನಿಸಿದ್ದಾಗ ಇತ್ತೀಚಿನ ದಿನಗಳಲ್ಲಿ ವೇಗವಾಗಿ ಪರಿಸರ ನಾಶವಾಗುತ್ತಿದೆ. ಆದ್ದರಿಂದ ಮೊದಲು ಜನರಿಗೆ ಪರಿಸರದ ಬಗ್ಗೆ ತಿಳಿಸಲು ಮುಂದಾಗಬೇಕು ಎಂದು ಉತ್ತರಿಸಿದರು ಎಂದರು.

ಅವರ ಪ್ರೇರಣೆಯಿಂದ ನಾನು ಬಯಲುಸೀಮೆಯ ಪರಿಸರ ಉಳಿಸಲು 'ಅಬ್ಬೆ' ಎಂಬ ಕಾದಂಬರಿ ಬರೆಯುವ ಮೂಲಕ ಪೆಂಗ್ವಿನ್ ಎಂಬ ಪ್ರಾಣಿ, ಅಬ್ಬೆ ಎಂಬ ಜೇಡಾ ಮತ್ತು ಸಂಸ್ಕೃತಿ ತಿಳಿಸಿ, ಉಳಿಸಿಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿದೆ ಎಂದರು.

ಅಡುಗೆ ಮನೆಯಲ್ಲಿ ಕಳೆದುಕೊಂಡ ಆರೋಗ್ಯ ಆಸ್ಪತ್ರೆಯಲ್ಲಿ ಸಿಗುತ್ತದೆಯೇ...?

● ಸಿರಿಧಾನ್ಯ ಪ್ರಚಾರಕ, ಪದ್ಮಶ್ರೀ ಪುರಸ್ಕೃತ ಡಾ.ಖಾದರ್ ವಲ್ಲಿ ದೂದೇಕುಲ ಮಾರ್ಮಿಕ ಪ್ರಶ್ನೆ ● ಹಾಲು ಸೇವನೆ ನಿಲ್ಲಿಸಿದರೆ ಅರ್ಧ ಆಸ್ಪತ್ರೆಗಳು ಮುಚ್ಚಿ ಹೋಗ್ತವೆ ● ಸಿರಿಧಾನ್ಯ ಅಂಬಲಿ ಸೇವಿಸಿದರೆ 'ಆರೋಗ್ಯ'ದಲ್ಲಿ ಪವಾಡವೇ ನಡೆದುಹೋಗುತ್ತೆ

ಮೈಸೂರು, ಜು.6(ಎಸ್‌ಬಿಡಿ)– ಅಡುಗೆ ಮನೆಯಲ್ಲಿ ಕಳೆದುಕೊಂಡಿರುವ ಆರೋಗ್ಯ, ಆಸ್ಪತ್ರೆಯಲ್ಲಿ ಖಂಡಿತ ಸಿಗುವುದಿಲ್ಲ ಎಂದು ಪದ್ಮಶ್ರೀ ಪುರಸ್ಕೃತರಾದ ಸಿರಿಧಾನ್ಯ ಪ್ರಚಾರಕ ಡಾ.ಖಾದರ್ ವಲ್ಲಿ ದೂದೇಕುಲ ಹೇಳಿದರು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಆವರಣದಲ್ಲಿ ಆಯೋಜಿಸಿರುವ ಎಂಟನೇ ಮೈಸೂರು ಸಾಹಿತ್ಯ ಸಂಭ್ರಮದ ಗಾರ್ಡೆನಿಯಾ ವೇದಿಕೆಯಲ್ಲಿ 'ಸಿರಿಧಾನ್ಯಗಳ ಸರದಾರ– ಸುಸ್ಥಿರ ಬದುಕನ್ನು ಬಾಳುವುದು ಹೇಗೆ?' ಕುರಿತು ಮಾತನಾಡಿದ ಅವರು, ಸರಳ–ಸಾಂಪ್ರದಾಯಿಕ ಆಹಾರ ಕ್ರಮವನ್ನು ಕಾರ್ಪೊರೇಟ್ ಕಂಪನಿಗಳಿಗೆ ಅಡವಿಟ್ಟಿರುವ ಪರಿಣಾಮ ಮನುಷ್ಯನ ಜೀವನ ಒಂದು ವ್ಯಾಪಾರವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಹುತೇಕ ವೈದ್ಯರು ಮನುಷ್ಯನಿಗೆ ಪ್ರೋಟೀನ್ ಅತ್ಯವಶ್ಯಕ ಎನ್ನಲು ಆರಂಭಿಸಿದ್ದಾರೆ. ಇದರ ಹಿಂದೆ ದೇಹದಲ್ಲಿ ಪ್ರೋಟೀನ್ ಕರಗಿಸುವ ವಸ್ತುವಿನ ಉದ್ಯಮದ ಪ್ರಭಾವವಿದೆ. ನಮ್ಮ ದೇಹಕ್ಕೆ ಶೇ.3ರಷ್ಟು ಪ್ರೋಟೀನ್ ಸಾಕು. ಅದು ಜಾಸ್ತಿಯಾದರೆ ಸಮಸ್ಯೆಯಾಗುತ್ತದೆ. 25 ವರ್ಷಕ್ಕೆ ಮಧುಮೇಹ ಬರುವುದಕ್ಕೂ ಇದೇ ಕಾರಣ ಎಂದು ತಿಳಿಸಿದರು.

ತಜ್ಞರು, ಕಂಪನಿಯವರು ಒಟ್ಟುಗೂಡಿ ಕೊಠಡಿಯಲ್ಲಿ ಕುಳಿತು ನಮ್ಮ ಆಹಾರದ ಕ್ರಮವನ್ನು ಬದಲಿಸುತ್ತಿದ್ದಾರೆ. ಪ್ರೋಟೀನ್ ಕರಗಿಸುವ ಕೆಮಿಕಲ್ ತಯಾರಿಸಿ, ಲಾಭ ಮಾಡುತ್ತಿದ್ದಾರೆ. ಎಂಡಿ, ಎಂಎಸ್ ಮಾಡಿದ ವೈದ್ಯರೂ ಮೂರು ಗಂಟೆಗೊಮ್ಮೆ ತಿನ್ನಿ ಎಂದು ಸಲಹೆ ನೀಡಿದರೆ ಏನರ್ಥ. ನಮ್ಮ ಲೈಫ್ ಬ್ಯುಸಿನೆಸ್ ಆಗಿದೆ. ಹಳ್ಳಿಯವರೂ ಸೇರಿದಂತೆ ಶೇ.30ರಷ್ಟು ಜನ ಬಿಪಿ ಮಾತ್ರೆ ನುಂಗಿಕೊಂಡು ಬದುಕುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಸಮಸ್ಯೆ ಮೂಲ: ಅಕ್ಕಿ, ಗೋಧಿ, ಹಾಲು ಮತ್ತು ಸಕ್ಕರೆ ಎಲ್ಲಾ ಸಮಸ್ಯೆಗಳ ಮೂಲ. ಈಗಿನ ಹಾಲು ಕುಡಿಯುವುದರಿಂದ ಹೆಣ್ಣು ಮಕ್ಕಳ ಮುಖದಲ್ಲಿ ಮೀಸೆ ಬೆಳೆಯುವುದು, ಪುರುಷರಲ್ಲಿ ವೀರ್ಯಾಣು ಪ್ರಮಾಣ ಕುಸಿಯುವುದು ಸೇರಿದಂತೆ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ತಾಯಿ ಹಾಲು ಬಿಟ್ಟರೆ ಬೇರೆ ಯಾವುದೇ ಹಾಲು ಸೇವಿಸಬಾರದು. ಹಾಲಿನಲ್ಲಿ ತುಂಬಾ ಕಡಿಮೆ ಪ್ರಮಾಣದ ಕ್ಯಾಲ್ಸಿಯಂ ಇದೆ. ಆದರೆ ಕ್ಯಾಲ್ಸಿಯಂ ನೆಪದಲ್ಲಿ ವೈದ್ಯರು ಹೇಳುವ ಸುಳ್ಳು ನಂಬಿ ಹಾಲು ಕುಡಿಯುವುದಷ್ಟೇ ಅಲ್ಲ



'ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಪದ್ಮಶ್ರೀ ಪುರಸ್ಕೃತ ಡಾ.ಖಾದರ್ ವಲ್ಲಿ ಮಾತನಾಡಿದರು.

ಪನ್ನೀರು ತಿನ್ನಲು ಶುರು ಮಾಡಿದ್ದಾರೆ. ಹಾಲು ಸೇವನೆ ನಿಲ್ಲಿಸಿದರೆ ಅರ್ಧದಷ್ಟು ಆಸ್ಪತ್ರೆಗಳು ಮುಚ್ಚುತ್ತವೆ ಎಂದು ಅಭಿಪ್ರಾಯಿಸಿದರು. ಮನುಷ್ಯನಿಗೆ ಒಂದು ಮಿಲಿಗ್ರಾಂ ಸಕ್ಕರೆ ಕೂಡ ಬೇಕಾಗಿಲ್ಲ. ನಾವು ತಿನ್ನುವ ಪ್ರತಿಯೊಂದು ತುತ್ತೂ ವಿಷವಾಗುತ್ತಿದೆ. ನಾವು ಆರೋಗ್ಯಕರವಲ್ಲದ ಊಟ ಹಾಗೂ ಔಷಧಿಯ ವ್ಯಸನಿಗಳಾಗಿದ್ದೇವೆ. ನಾವು ಪ್ರಕೃತಿ ನಿಯಮ ಉಲ್ಲಂಘಿಸುತ್ತಿದ್ದೇವೆ. ಭಾರತದಲ್ಲಿ ಐವಿಎಫ್ ಸೆಂಟರ್ ಬೀದಿ ಬೀದಿಯಲ್ಲಿ ಕಾಣುತ್ತಿವೆ. ನೂರಕ್ಕೆ ಎಂಟು ಜನ ವಿಕಲಾಂಗರು, ಬುದ್ಧಿಮಾಂದ್ಯರು ಹುಟ್ಟುತ್ತಿದ್ದಾರೆ. ಇದೆಲ್ಲಾ ಅಕ್ಕಿ ಗೋಧಿ, ಹಾಲು, ಸಕ್ಕರೆ ಸೇವನೆಯ ಪರಿಣಾಮ ಎಂದರು.

ಸಿರಿಧಾನ್ಯದಿಂದ ಆರೋಗ್ಯ: ಸಿರಿಧಾನ್ಯದ ಬಗ್ಗೆ ವ್ಯತಿರಿಕ್ತ ಮಾಹಿತಿಯನ್ನು ಹಂಚಲಾಗುತ್ತಿದೆ. ವೈದ್ಯರಿಗೇ ಸಿರಿಧಾನ್ಯ ತಿನ್ನುವ ಪದ್ಧತಿ ಗೊತ್ತಿಲ್ಲ. ಸರಿಯಾದ ಆಹಾರ ಪದ್ಧತಿ ಬಗ್ಗೆ ಸಲಹೆ, ಮಾರ್ಗದರ್ಶನ ನೀಡುವವರು ಯಾರೂ ಇಲ್ಲ. ರಕ್ತ ಮಂದವಾದರೆ ಕಾರ್ಬನ್ ಡಯಾಕ್ಸೈಡ್ ಹೆಚ್ಚಾಗಿ ಹಲವು ಸಮಸ್ಯೆ ಉಂಟಾಗುತ್ತವೆ. ಆದರೆ ನವಣೆಯಲ್ಲಿರುವ ನಾರಿನ ಅಂಶ ರಕ್ತದಲ್ಲಿ ಹರಿದರೆ ಯಾವಾಗಲೂ ರಕ್ತ ತಿಳಿಯಾಗಿರುತ್ತದೆ. ಆರೋಗ್ಯ ಹದಗೆಡುವುದಿಲ್ಲ. ಸಿರಿಧಾನ್ಯದಲ್ಲಿರುವ ಆರೋಗ್ಯದ ಗುಟ್ಟನ್ನು ಬಚ್ಚಿಟ್ಟು, ಏನಾದರೂ ತಿನ್ನು ಆದರೆ ಈ ಔಷಧಿ ತೆಗೆದುಕೋ ಎನ್ನುವವರೇ ಹೆಚ್ಚಾಗಿದ್ದಾರೆ. ಆಸ್ಪತ್ರೆಗೆ ಹೋದರೆ ಚಿಕಿತ್ಸೆ ಸಿಗುವುದೇ ಹೊರತು ಆರೋಗ್ಯ ಸಿಗುವುದಿಲ್ಲ.

ಅಂಬಲಿ ಕುಡಿಯಿರಿ: ಹಿರಿಯರು ನಿತ್ಯ ಅಂಬಲಿ ಕುಡಿಯುತ್ತಿದ್ದರು. ಆದರೆ ಈಗ ಆ ಕಲ್ಪನೆಯೇ ಇಲ್ಲ. ಪ್ರಕೃತಿಗೆ ಹತ್ತಿರವಾಗಿದ್ದ ವಿಧಾನಗಳನ್ನು ನಾವು ಹಂತ ಹಂತವಾಗಿ ಕಳೆದುಕೊಳ್ಳುತ್ತಿದ್ದೇವೆ. ಅಮೃತವಾದ ಸಿರಿಧಾನ್ಯದ ಅಂಬಲಿಯನ್ನು ವಿಷ ಎನ್ನುವಂತೆ ಬಿಂಬಿಸುವುದು ಒಂದೆಡೆಯಾದರೆ, ಮತ್ತೊಂದೆಡೆ ಅದನ್ನು ತಯಾರಿಸಿಕೊಳ್ಳುವ ತಾಳ್ಮೆ ಜನರಿಗಿಲ್ಲವಾಗಿದೆ. ಸಿರಿಧಾನ್ಯದ ಅಂಬಲಿ ಸೇವಿಸಿದರೆ ಸಾಕು ಪವಾಡ ನಡೆಯುತ್ತದೆ. ಅಂಬಲಿ ಸೇವನೆಯಿಂದ ವೈವಿಧ್ಯಮಯ ಜೀವನ ನಿಮ್ಮದಾಗುತ್ತದೆ. ನಿಮ್ಮ ಆರೋಗ್ಯ ನಿಮ್ಮ ಕೈಯ್ಯಲ್ಲೇ ಇದೆ. ಅಡುಗೆ ಮನೆಯಲ್ಲಿ ಕಳೆದುಕೊಂಡಿರುವ ಆರೋಗ್ಯವನ್ನು ಅಲ್ಲಿಂದಲೇ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಲಾಸನ ಮಾಹಿತಿ: ಹಾಸ್ಯಮಯವಾಗಿ ಆರೋಗ್ಯಕರ ಆಹಾರ ಸೇವನೆಯ ಬಗ್ಗೆ ತಿಳಿಹೇಳಿದ ಡಾ.ಖಾದರ್ ಅವರು, ಮಲಾಸನದ ಭಂಗಿಯನ್ನು ಪ್ರದರ್ಶಿಸುವ ಮೂಲಕ ಇಂಡಿಯನ್ ಸ್ಟೈಲ್ ಶೌಚಾಲಯ ಬಳಕೆಯ ಉಪಯೋಗವನ್ನು ಮನದಟ್ಟು ಮಾಡಿದರು.

'ದ ಸ್ವರಾಜ್ ಸ್ಪೈ'ಗೆ ದೊಡ್ಡಪ್ಪನೇ ಸ್ಫೂರ್ತಿ

ಕಥೆಗಾರ, ರಾಕೆಟ್ ವಿಜ್ಞಾನಿ ವಿಜಯ್ ಬಾಲನ್



ಕಥೆಗಾರ, ರಾಕೆಟ್ ವಿಜ್ಞಾನಿ ವಿಜಯ್ ಬಾಲನ್ ತಮ್ಮ 'ದ ಸ್ವರಾಜ್ ಸ್ಪೈ' ಕಾದಂಬರಿ ಕುರಿತು ಮಾತನಾಡಿದರು. ಶಶಿಕಲಾ ರಾಮನಾಥ್ ಉಪಸ್ಥಿತರಿದ್ದರು.

ಮೈಸೂರು, ಜು.6(ಎಂಕೆ)– ಒಳಸಂಚು, ಪ್ರೀತಿ ಹಾಗೂ ಹೋರಾಟದ ಬದುಕಿನ ನೈಜ ಕಥೆಯನ್ನೊಳಗೊಂಡ 'ದ ಸ್ವರಾಜ್ ಸ್ಪೈ' ಕಾದಂಬರಿಯಲ್ಲಿ ತನ್ನ ದೊಡ್ಡಪ್ಪ(grand uncle)ನ ಸಾಹಸಗಾಥೆಯನ್ನು ರಾಕೆಟ್ ವಿಜ್ಞಾನಿಯೂ ಆದ ಕಥೆಗಾರ ವಿಜಯ್ ಬಾಲನ್ ಹಂಚಿಕೊಂಡರು. 'ಶತ್ರು ರೇಖೆಗಳ ಹಿಂದೆ ಪತ್ತೇದಾರಿ ಬಣದ ಪ್ರಪಂಚ'(behind enemy lines world of spy faction) ಶೀರ್ಷಿಕೆಯಡಿ ತಮ್ಮ ಕಾದಂಬರಿ ಕುರಿತು ಮಾತನಾಡಿದ ಅವರು, ಈ ಪುಸ್ತಕದ ಕಲ್ಪನೆಯನ್ನು ನನ್ನ ತಂದೆ ನನಗೆ ನೀಡಿದರು, ಅವರು ನನ್ನ ದೊಡ್ಡಪ್ಪನ ಬಗ್ಗೆ ಕಥೆಗಳನ್ನು ಹೇಳಿದರು. ಈ ಕಥೆಗಳು ಅಸಾಧಾರಣವಾಗಿದ್ದವು. ನಾನು ಬೆಳೆದಂತೆ, ಅವರು ನನ್ನೊಂದಿಗೆ ಉಳಿದರು ಎಂದು ಬರವಣಿಗೆಗಾದ ಪ್ರೇರಣೆಯನ್ನು ತಿಳಿಸಿದರು. ಸ್ವರಾಜ್ ಎಂಬ ಪದವು ಲೋಕಮಾನ್ಯ ತಿಲಕರ 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂಬುದರ ಧ್ಯೇಯವಾಕ್ಯವಾಗಿದೆ. ಅದರಂತೆ ನನ್ನ ದೊಡ್ಡಪ್ಪ ಅವರು 2ನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತದಲ್ಲಿದ್ದ ಬ್ರಿಟಿಷರನ್ನು ದೇಶದಿಂದ ತೊಲಗಿಸಲು ನಡೆಸಿದ ಹೋರಾಟವನ್ನು ಸ್ವರಾಜ್ ಎಂದಿದ್ದೇನೆ. ನನ್ನ ಪುಸ್ತಕದ ಕಥಾವಸ್ತುವು ಭಾರತೀಯ ಸ್ವಾತಂತ್ರ್ಯ ಹೋರಾಟ ಹಾಗೂ ಅದರ ಹಿನ್ನೆಲೆಯನ್ನು ಹೊಂದಿದೆ. ಜಪಾನೀಸ್ ಗುಪ್ತಚರ ಹಾಗೂ ಭಾರತೀಯ ರಾಷ್ಟ್ರೀಯ ಸೈನ್ಯದ ಸಹಕಾರದಿಂದ ನನ್ನ ದೊಡ್ಡಪ್ಪ ಹೋರಾಟ ನಡೆಸಿ, ಕಡೆಗೆ ಬ್ರಿಟಿಷರ ಕ್ರೌರ್ಯಕ್ಕೆ ಬಲಿಯಾದ ಕಥಾಹಂದರ ಇದಾಗಿದೆ ಎಂದು ವಿವರಿಸಿದರು. ಮೈಸೂರು ಬುಕ್ ಕ್ಲಬ್‌ನ ಶಶಿಕಲಾ ರಾಮನಾಥ್ ನಿರೂಪಿಸಿದರು.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನವಿದ್ದರೂ ಸ್ವಂತ ಆಲೋಚನೆ ಅತ್ಯಂತ ಸೂಕ್ತ

● ಇನ್ಫೋಸಿಸ್ ಉಪಾಧ್ಯಕ್ಷ ಡಾ.ನವೀನ್ ಪಟೇಲ್ ಅಭಿಮತ
● ಬರಹಗಾರರ ಸಾಮರ್ಥ್ಯ ಹೆಚ್ಚಳಕ್ಕೆ ಎಐ ಸಹಕಾರಿ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಕಾನ್ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ(ಸಿಐಐ) ಮೈಸೂರು ಸಂಚಾಲಕ (ಮಾಹಿತಿ ತಂತ್ರಜ್ಞಾನ) ಹಾಗೂ ಮೈಸೂರು ಇನ್ಫೋಸಿಸ್ ಉಪಾಧ್ಯಕ್ಷ ಡಾ.ನವೀನ್ ಪಟೇಲ್ ಹಾಗೂ ಕಾಪರ್‌ಪಾಡ್ ಡಿಜಿಟಲ್ ಸಂಸ್ಥೆಯ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ರಾಜೇಶ್ ರಾಮಚಂದರ್ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕುರಿತ ಚರ್ಚಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು, ಜು.6 (ಎಂಟಿವೈ)– ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನದ ಮೂಲಕ ಬರಗಾರರು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದು ಎಂದು ಕಾನ್ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿಐಐ) ಮೈಸೂರು ಸಂಚಾಲಕ (ಮಾಹಿತಿ ತಂತ್ರಜ್ಞಾನ) ಹಾಗೂ ಮೈಸೂರು ಇನ್ಫೋಸಿಸ್ ಉಪಾಧ್ಯಕ್ಷ ಡಾ.ನವೀನ್ ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ವತಿಯಿಂದ ಆಯೋಜಿಸಿದ್ದ ಎಂಟನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ' ಕಾರ್ಯಕ್ರಮದಲ್ಲಿ 'ಎಐ ಇಕೋಸಿಸ್ಟಮ್– ಟು ಪ್ರೊವೈಡ್ ಎ ಕಂಪ್ರೆಸ್ಸಿವ್ ಅಂಡರ್‌ಸ್ಟಾಂಡಿಂಗ್ ಆಫ್ ಎಐ ಅಂಡ್ ಎಲ್‌ಓಟಿ ಅಂಡ್ ದೇರ್ ರಿಲವೆನ್ಸ್ ಟು ಬೋತ್ ಜನರಲ್ ಅಂಡ್ ಬ್ಯುಸಿನೆಸ್ ಕಮ್ಯುನಿಟಿ' ಕುರಿತ ಚರ್ಚಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ವಾಕ್ಯ ರಚನೆಯನ್ನು ಉತ್ತಮವಾಗಿಸುವುದರೊಂದಿಗೆ ಕಾಗುಣಿತ ತಪ್ಪಾಗುವುದನ್ನು ತಡೆಗಟ್ಟುತ್ತದೆ. ವಾಕ್ಯ ರಚನೆಯಲ್ಲಿ ಸ್ಪಷ್ಟತೆ ಮತ್ತು ಕರಾರುವಾಕ್ ಆಗಿರುವಂತೆ ನೋಡಿಕೊಳ್ಳುತ್ತದೆ. ಇದರಿಂದ ಬರಹಗಾರರ ಬರವಣಿಗೆ ಉತ್ತಮವಾಗಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಎಐ ತಂತ್ರಜ್ಞಾನದ ಬಳಕೆಯಿಂದ ನಿಮ್ಮ ಬರವಣಿಗೆ, ಲೇಖನದಲ್ಲಿ ಸ್ಪಷ್ಟತೆ ಕಾಣಬಹುದು. ವಾಕ್ಯ ರಚನೆಯಲ್ಲಿ ಬಳಸಬಹುದಾದ ಪದ ಆಯ್ಕೆಯನ್ನು ಉತ್ತಮವಾಗಿಸುತ್ತದೆ. ಕೆಲಸದ ಗುಣಮಟ್ಟವನ್ನು ಸುಧಾರಿಸುತ್ತದೆ. ಈ ವಿಧಾನ ಬರವಣಿಗೆ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತವೆ. ಬರಹಗಾರರಾಗಿ ದಕ್ಷತೆಯನ್ನು ಹೆಚ್ಚಿಸುತ್ತದೆ ಎಂದರು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸುವುದರೊಂದಿಗೆ ತಮ್ಮ ಸ್ವಂತ ಬುದ್ಧಿಶಕ್ತಿಯನ್ನು ಸಹ ಪ್ರಯೋಗಿಸಬೇಕು. ಎಐ ತಂತ್ರಜ್ಞಾನ ನಾವು ಕೇಳಿದ್ದನ್ನು ಒದಗಿಸುತ್ತದೆ. ಆದರೆ, ನಮ್ಮ ಮನಸ್ಸಲ್ಲಿರುವುದನ್ನು ಪ್ರತಿಬಿಂಬಿಸುವುದಿಲ್ಲ. ಎಐ ತಂತ್ರಜ್ಞಾನ ಹೇಳಿದ್ದನ್ನೇ ಒಪ್ಪಬೇಕು ಎನ್ನುವುದಕ್ಕಿಂತ ನಮ್ಮ ಸ್ವಂತ ಆಲೋಚನೆ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಕಾಪರ್‌ಪಾಡ್ ಡಿಜಿಟಲ್ ಸಂಸ್ಥೆಯ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ರಾಜೇಶ್ ರಾಮಚಂದರ್ ಗೋಷ್ಠಿಯಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನಕ್ಕೆ ತನ್ನದೇ ಆದ ಯೋಚನಾ ಶಕ್ತಿ ಇಲ್ಲ. ನಾವು ಹೇಳಿದ್ದನ್ನು ಅದರಲ್ಲಿರುವ ಇಂಟಲಿಜೆನ್ಸ್ ಮೂಲಕ ಕೊಡುತ್ತದೆ. ಈ ಹಿನ್ನೆಲೆಯಲ್ಲಿ ಎಐ ತಂತ್ರಜ್ಞಾನ ಬಳಸಿಕೊಳ್ಳುವ ಸಂದರ್ಭದಲ್ಲಿ ಆಯಾ ನೆಲದ ಕಾನೂನಿಗೆ ಗೌರವ ನೀಡಬೇಕು. ಈ ಸಂಬಂಧ ಈಗಾಗಲೇ ಯೂರೋಪ್‌ನಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸುವ ಸಂಬಂಧ ನಿಯಮ ರೂಪಿಸಲಾಗಿದೆ. ಅದೇ ಮಾದರಿಯಲ್ಲಿ ಎಲ್ಲೆಡೆ ನಿಯಮಿತವಾಗಿ ಎಐ ತಂತ್ರಜ್ಞಾನ ಬಳಸಿ, ನಿಯಮ ಪಾಲಿಸಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಎಐ ತಂತ್ರಜ್ಞಾನವು ಮುಂದಿನ ದಿನಗಳಲ್ಲಿ ವೇಗ ಪಡೆದುಕೊಳ್ಳುವ ಸಾಧ್ಯತೆ ಇದೆ. ಇದು ಮಾನವನ ಶಕ್ತಿ ಮೀರಿಸುತ್ತದೆ ಎಂಬ ಆತಂಕ ಉಂಟಾಗಿದೆ. ಇದರಿಂದ ಮಾನವ ಸಂಪನ್ಮೂಲ ಬಳಕೆಗೆ ಹಿನ್ನಡೆಯಾಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ ಎಂದರು.

ದೃಶ್ಯ ಮಾಧ್ಯಮಗಳು ಸುದ್ದಿ ನೀಡುವ ಭರದಲ್ಲಿ ಸತ್ಯಾಂಶವನ್ನೇ ಮರೆಮಾಚುತ್ತಿವೆ

ಹಿರಿಯ ಪತ್ರಕರ್ತರಾದ ರವೀಂದ್ರ ಭಟ್ಟ, ಅಂಶಿ ಪ್ರಸನ್ನಕುಮಾರ್ ಅಭಿಮತ



'ಸುದ್ದಿ ಸರ್ಕಸ್‌ಗಳ ನಡುವೆ ಮಾಧ್ಯಮಗಳ ಜವಾಬ್ದಾರಿಗಳು' ಕುರಿತು ವಿಷಯ ಮಂಡನೆ ಸಂದರ್ಭದಲ್ಲಿ ಪತ್ರಕರ್ತರಾದ ರವೀಂದ್ರಭಟ್ಟ, ಅಂಶಿ ಪ್ರಸನ್ನಕುಮಾರ್, ಯೂಟ್ಯೂಬರ್ ಧರ್ಮೇಂದ್ರಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಜು.6(ಎಸ್‌ಪಿಎನ್)– ದೃಶ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಕುರಿತು ಜನರಲ್ಲಿ ಎಲ್ಲಿಯವರೆಗೆ ವಿಶ್ವಾಸಾರ್ಹತೆ ಇರುವುದಿಲ್ಲವೋ ಅಲ್ಲಿಯವರೆಗೆ ಮುದ್ರಣ ಮಾಧ್ಯಮಗಳ ಉಳಿವಿನ ಕುರಿತು ಆತಂಕ ಬೇಡ ಎಂದು ಹಿರಿಯ ಪತ್ರಕರ್ತರಾದ ರವೀಂದ್ರಭಟ್ಟ, ಅಂಶಿ ಪ್ರಸನ್ನ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿರುವ ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿಯ ನಾಲ್ಕನೇ ಗೋಷ್ಠಿಯಲ್ಲಿ 'ಸುದ್ದಿ ಸರ್ಕಸ್‌ಗಳ ನಡುವೆ ಮಾಧ್ಯಮಗಳ ಜವಾಬ್ದಾರಿಗಳು' ಕುರಿತು ವಿಷಯ ಮಂಡನೆ ಸಂದರ್ಭದಲ್ಲಿ 'ಮೈಸೂರು ಕಥೆಗಳು' ಖ್ಯಾತಿಯ ಯೂಟ್ಯೂಬರ್ ಧರ್ಮೇಂದ್ರ ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಇತ್ತೀಚಿನ ಡಿಜಿಟಲ್ ಮತ್ತು ದೃಶ್ಯ ಮಾಧ್ಯಮಗಳು ಸುದ್ದಿಗಳನ್ನು ನೀಡುವ ಭರದಲ್ಲಿ ಘಟನೆಯ ಸತ್ಯಾಂಶವನ್ನೇ ಮರೆಮಾಚಿ ಸುದ್ದಿಗಳನ್ನು ಜನರಿಗೆ ತಲುಪಿಸುತ್ತಿವೆ. ಹಾಗಾಗಿ ಸಾಮಾಜಿಕ ಜಾಲತಾಣ, ದೃಶ್ಯ ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನು ನೋಡಿಯೂ ಜನರು ಮರುದಿನ ಪತ್ರಿಕೆಗಳನ್ನು ನೋಡಿದರೇನೆ ಅವರಿಗೆ ಆತ್ಮ ತೃಪ್ತಿ ನೀಡುತ್ತವೆ. ಅದಕ್ಕಾಗಿ ಜನರಲ್ಲಿ ಡಿಜಿಟಲ್ ಹಾಗೂ ದೃಶ್ಯ ಮಾಧ್ಯಮಗಳ ಅಬ್ಬರದ ನಡುವೆಯೂ ಮುದ್ರಣ ಮಾಧ್ಯಮಕ್ಕೆ ಜನರ ಬೆಂಬಲ ಇನ್ನು ಉಳಿದುಕೊಂಡಿವೆ ಎಂದರು.

ಕುಂಬಳಗೋಡು ಕಾಲೇಜಿನ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ ಮುಚ್ಚಿ ಹೋಗಿದೆ. ಇದರ ಕುರಿತು ನಿಮ್ಮ ನಿಲುವೇನು ಎಂದು ಧರ್ಮೇಂದ್ರ ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯಾವುದೋ ಒಂದು ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಭಾಗ ಮುಚ್ಚಿ ಹೋಗಿದ್ದರೆ, ಅದಕ್ಕೆ ಇಡೀ ಪತ್ರಿಕೋದ್ಯಮ ವಿಭಾಗ ಮುಚ್ಚಿದಂತಲ್ಲ. ಇಂದಿಗೂ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಿದೆ. ದೃಶ್ಯ ಮತ್ತು ಮುದ್ರಣ ಮಾಧ್ಯಮ, ರೇಡಿಯೋ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ತೇರ್ಗಡೆ ಹೊಂದಿದವರಿಗೆ ಉದ್ಯೋಗ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ಭರವಸೆ ನೀಡಿದರು.

ಸಮಾಜದಲ್ಲಿ ನಡೆದ ಘಟನೆಯೇ ಮರುದಿನ ಪತ್ರಿಕೆಗಳನ್ನು ಪ್ರಕಟಗೊಂಡಿರುತ್ತವೆ. ಇದನ್ನು ಸಮಾಜದ ಪ್ರತಿಬಿಂಬ ಎಂದೇ ಕರೆಯಬಹುದು. ಐವತ್ತು ವರ್ಷಗಳ ಹಿಂದೆ ಪತ್ರಿಕೋದ್ಯಮಕ್ಕೆ ನೈತಿಕತೆ, ವಿಶ್ವಾಸಾರ್ಹತೆ ಇತ್ತು ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ. ನಾನು ಅದೇ ಪ್ರಶ್ನೆಯನ್ನು ಜನರಿಗೆ ಕೇಳಲು ಬಯಸುತ್ತೇನೆ. ಐವತ್ತು ವರ್ಷಗಳ ಹಿಂದೆ ಸಮಾಜದಲ್ಲಿ ನೈತಿಕತೆ, ಸಾಮಾಜಿಕ ಮೌಲ್ಯಗಳನ್ನು ಜನರು ಅಳವಡಿಸಿಕೊಂಡಿದ್ದರು. ಈಗ ಅಂತಹ ವಾತಾವರಣ ಏಕಿಲ್ಲ? ಎಂದು ಮರು ಪ್ರಶ್ನೆ ಹಾಕಿದರು.

ಪತ್ರಿಕೆಗಳಲ್ಲಿ ತಲೆಬರಹ ಬಹಳ ರಸಭರಿತವಾಗಿರಲು ಕಾರಣವೇನು ಎಂದು ಧರ್ಮೇಂದ್ರ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ರವೀಂದ್ರಭಟ್ಟರು, ಪತ್ರಿಕೆಗಳಲ್ಲಿ ತಲೆಬರಹ ರಸಭರಿತವಾಗಿರಲು ಸಮಾಜದ ಅಭಿರುಚಿಯೇ ಕಾರಣ. ಜನರಿಗೆ ಯಾವುದರಲ್ಲಿ ಆಸಕ್ತಿ ಇರುತ್ತದೆಯೋ ಅಂತಹ ತಲೆಬರಹಗಳನ್ನು ಎಲ್ಲಾ ಪತ್ರಿಕೆಗಳಲ್ಲೂ ನೀಡುವುದು ವಾಡಿಕೆ. ನಿಮಗೆ ಇಷ್ಟವಿಲ್ಲದಿದ್ದರೆ, ಅದನ್ನು ಗಂಭೀರವಾಗಿ ತೆಗೆದುಕೊಳ್ಳದಂತೆ ಓದುಗರಿಗೆ ಸಲಹೆ ನೀಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪತ್ರಿಕೋದ್ಯಮ ಒಂದು ಉದ್ಯಮವಾಗಿ ಪರಿಗಣಿಸಲ್ಪಟ್ಟಿದೆ. ಒಂದು ಪತ್ರಿಕೆಯನ್ನು ಓದುಗರು 4ರಿಂದ 5 ರೂಪಾಯಿಗೆ ಖರೀದಿಸುತ್ತಿದ್ದಾರೆ. ಅದೇ ಪತ್ರಿಕೆ ಜಾಹೀರಾತು ಇಲ್ಲದಿದ್ದರೆ 20ರಿಂದ 25 ರೂ.ಗಳನ್ನು ನೀಡಿ, ಓದುಗರು ಪತ್ರಿಕೆಗಳನ್ನು ಪಡೆದುಕೊಳ್ಳಬೇಕಿತ್ತು. ಇದು ಅಸಾಧ್ಯದ ಮಾತು. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಮುದ್ರಣ ಮಾಧ್ಯಮ ಸಾಮಾಜಿಕ ಜವಾಬ್ದಾರಿ ಜೊತೆಗೆ ಉದ್ಯಮವನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ಇದೆ ಎಂದು ತಿಳಿಸಿದರು. ನಂತರ ತನಿಖಾ ಪತ್ರಿಕೋದ್ಯಮದ ಭಾಗವಾಗಿ, ನೀಟ್ ಅಕ್ರಮ, ನಟ ದರ್ಶನ್ ಪ್ರಕರಣ, ವೀರಪ್ಪನ್ ಪ್ರಕರಣ, ಕೊಲೆ ಪ್ರಕರಣ ಸೇರಿದಂತೆ ಇತರೆ ಪ್ರಕರಣಗಳ ಕುರಿತು ಪ್ರಶ್ನೆಗಳು ಬಂದವು. ಪತ್ರಿಕೆ ಮತ್ತು ಸಾಮಾಜಿಕ ಜವಾಬ್ದಾರಿ, ದೃಶ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಬಗ್ಗೆ ಜನರಲ್ಲಿ ಮನದಲ್ಲಿ ನಂಬಿಕೆ ಕಡಿಮೆಯಾಗಿರುವ ಬಗ್ಗೆ ಸೇರಿದಂತೆ ಇತರೆ ಪ್ರಶ್ನೆಗಳು ಸಭಿಕರಿಂದ ಬಂದವು.



ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿಯ ಐದನೇ ಗೋಷ್ಠಿಯಲ್ಲಿ 'ಸರೋದ್ ಮಾಂತ್ರಿಕರ ಸುಮಧುರ ನೆನಪುಗಳು' ಕುರಿತು ಹಿರಿಯ ನಟ ಹಾಗೂ ಪರಿಸರವಾದಿ ಸುರೇಶ್ ಹೆಬ್ಳೀಕರ್ ಸೇರಿದಂತೆ ಇತರರಿದ್ದರು.

ಖ್ಯಾತನಾಮರಲ್ಲಿ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್‌ರದ್ದು ಮೇರು ವ್ಯಕ್ತಿತ್ವ

ಹಿರಿಯ ನಟ ಸುರೇಶ್ ಹೆಬ್ಳೀಕರ್ ಸ್ಮರಣೆ

ಮೈಸೂರು, ಜು.6(ಎಸ್‌ಪಿಎನ್)– ಖ್ಯಾತ ಕಲಾ ಸಾಧಕರ ಸಾಲಿನಲ್ಲಿ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ವ್ಯಕ್ತಿತ್ವ ಬಹಳ ಎತ್ತರ ಸ್ಥಾನದಲ್ಲಿದೆ ಎಂದು ಹಿರಿಯ ನಟ ಹಾಗೂ ಪರಿಸರವಾದಿ ಸುರೇಶ್ ಹೆಬ್ಳೀಕರ್ ಅಭಿಪ್ರಾಯಪಟ್ಟರು.

ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿಯ ಐದನೇ ಗೋಷ್ಠಿಯಲ್ಲಿ 'ಸರೋದ್ ಮಾಂತ್ರಿಕರ ಸುಮಧುರ ನೆನಪುಗಳು' ಕುರಿತು ಮಾತನಾಡಿದರು.

ಹುಬ್ಬಳ್ಳಿ–ಧಾರವಾಡ ಮಹಾನ್ ಕಲಾವಿದರ ನೆಲೆವೀಡಾಗಿದೆ. ಇಲ್ಲಿ ಡಾ. ಗಂಗೂಬಾಯಿ ಹಾನಗಲ್, ಪಂಡಿತ ಭೀಮಸೇನ್ ಜೋಶಿ, ಮಲ್ಲಿಕಾರ್ಜುನ ಮನ್ಸೂರ್ ಸೇರಿದಂತೆ ಇತರೆ ಖ್ಯಾತನಾಮರು ನೆಲೆಸಿದ್ದರು. ಇಂತಹ ಘಟಾನುಘಟಿಗಳ ಸಾಲಿನಲ್ಲಿ ಪಂಡಿತ್ ರಾಜೀವ್ ತಾರಾನಾಥ್ ಅವರ ಸರೋದ್ ವಾದನ ಪ್ರೇಕ್ಷಕರನ್ನು ಹಿಡಿದು ನಿಲ್ಲಿಸುತ್ತಿತ್ತು ಎಂದರು.

ರಾಜೀವ್ ತಾರಾನಾಥ್ ಸಾಹಿತ್ಯದಲ್ಲಿ ಪಿಎಚ್.ಡಿ ಹೊಂದಿದ್ದರು. ಇಂಗ್ಲಿಷ್ ಪ್ರಾಧ್ಯಾಪಕ ವೃತ್ತಿ ತ್ಯಜಿಸಿ, ನಂತರ ಸಂಗೀತಾಭ್ಯಾಸದತ್ತ ತೆರಳಿದರು. ಕೊಲ್ಕತ್ತಾದ ಅಲಿ ಅಕ್ಬರ್ ಖಾನ್ ಅವರ ಮಾರ್ಗದರ್ಶನದಲ್ಲಿ ಸಂಗೀತ ತರಬೇತಿ ಆರಂಭಿಸಿದರು. ನಂತರ ರವಿಶಂಕರ್, ಅನ್ನಪೂರ್ಣ ದೇವಿ, ನಿಖಿಲ್ ಬ್ಯಾನರ್ಜಿ ಮತ್ತು ಆಶಿಶ್ ಖಾನ್ ಅವರ ಮಾರ್ಗದರ್ಶನವನ್ನೂ ಪಡೆದರು. ಅವರ ಈ ಕ್ಷೇತ್ರದ ಸಾಧನೆಗೆ ಪದ್ಮಶ್ರೀ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಇತರೆ ಪ್ರಶಸ್ತಿಗಳು ಸಂದಿವೆ ಎಂದರು.

ಪಂ.ರಾಜೀವ್ ತಾರನಾಥ್ ಅವರ ಶಿಷ್ಯೆ ರೂಮಿ ಹರೀಶ್ ಮಾತನಾಡಿ, ರಾಜೀವ್ ತಾರಾನಾಥ್ ಅವರು ನನ್ನ ಸಂಗೀತಾಭ್ಯಾಸ ಗುರುಗಳು. ಅವರ ಮಟ್ಟಕ್ಕೆ ನಾನು ಬೆಳೆಯದಿದ್ದರೂ, ಅವರ ಶಿಷ್ಯೆ ಎಂಬ ನಾಮಬಲದಲ್ಲಿ ಈ ಕ್ಷೇತ್ರದಲ್ಲಿ ಮುಂದುವರೆಯುತ್ತೇನೆ. ಸಂಗೀತ ಎಲ್ಲರೂ ಕಲಿಯಬಹುದು. ಆದರೆ, ಎಲ್ಲರಿಗೂ ತಾವು ಕಲಿತು ಬೇರೆಯವರೆಗೆ ಕಲಿಸುವಷ್ಟು ಬೆಳೆಯಲು ಸಾಧ್ಯವಿಲ್ಲ. ಆದರೆ, ರಾಜೀವ್ ತಾರಾನಾಥ್, ಸಂಗೀತವನ್ನು ಹೀಗೆ ಅಭ್ಯಾಸ ಮಾಡಬೇಕು ಎಂದು ಹೇಳಿಕೊಡುತ್ತಿರಲಿಲ್ಲ. ಬದಲಾಗಿ, ಅವರು ಸಂಗೀತದಲ್ಲಿ ತಲೀನರಾಗಿದ್ದಾಗ, ನಾನೂ ಸಾಥ್ ನೀಡಿ, ವಿವಿಧ ರಾಗಗಳನ್ನು ಕಲಿತ ಕ್ಷಣವನ್ನು ಸ್ಮರಿಸಿದರು. ಈ ವೇಳೆ ಕೃಷ್ಣಮನವಳ್ಳಿ ನಿರೂಪಿಸಿದರು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಆಯ್ಕೆಗೂ ಅವಕಾಶವಿರಬೇಕು

ಮೈಸೂರು, ಜು.6(ಎಂಕೆ)– ಗಂಡು ಮತ್ತು ಹೆಣ್ಣಿನ ಹೊಂದಾಣಿಕೆಯೇ ಶಿವ–ಶಕ್ತಿ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಆಯ್ಕೆಯನ್ನು ಪ್ರೋತ್ಸಾಹಿಸಬೇಕು ಎಂದು ಲೇಖಕಿಯರಾದ ಶಿನಿ ಆಂಟೋನಿ ಹಾಗೂ ಅನುಜಾ ಚಂದ್ರಮೌಳಿ ಪ್ರತಿಪಾದಿಸಿದರು.

ದುಷ್ಟ ಮಹಿಳೆಯರ ಜ್ಞಾನ ಮತ್ತು ಆಮಿಷ: ಲಿಲಿತ್ ಮತ್ತು ಮೋಹಿನಿ (lore and lure of wicked women: lilith and mohini) ಶೀರ್ಷಿಕೆ ಕುರಿತ ಸಂವಾದದಲ್ಲಿ ಲೇಖಕಿ ಶಿನಿ ಆಂಟೋನಿ ತಮ್ಮ 'ಈಡನ್ ಅಬಾಂಡನ್: ದಿ ಸ್ಟೋರಿ ಆಫ್ ಲಿಲಿತ್' ಹಾಗೂ ಲೇಖಕಿ ಅನುಜಾ ಚಂದ್ರಮೌಳಿ ತಮ್ಮ 'ಮೋಹಿನಿ ದ ಎನ್ಚಾಟ್ರಸ್' (mohini:the enchantress) ಕಾದಂಬರಿಯಲ್ಲಿ ಮಹಿಳೆಯ ಪಾತ್ರ ಕುರಿತು ವಿವರಿಸಿದರಲ್ಲದೆ ಇತಿಹಾಸದುದ್ದಕ್ಕೂ ಸಮಾಜದಲ್ಲಿ ಹೆಣ್ಣಿಗೆ ನೀಡಿರುವ ಸ್ಥಾನಮಾನ ಕುರಿತು ಬೆಳಕು ಚೆಲ್ಲಿದರು.

ವಿಷ್ಣು ಮೋಹಿನಿ ಅವತಾರ ತಾಳಿ ತನ್ನ ಸೌಂದರ್ಯ, ಮಾಂತ್ರಿಕತೆಯಿಂದ ಮೋಡಿ ಮಾಡುವ ಪುರಾಣದ ಸಂಗತಿಯೊಂದಿಗೆ ವಾಸ್ತವ ಅಂಶಗಳ ಮೂಲಕ ಲಿಂಗ, ಪ್ರೀತಿ ಮತ್ತು ಬಯಕೆಗಳ ಕುರಿತು ಭೂತ ಮತ್ತು ವರ್ತಮಾನದ ಸತ್ಯ ಹಾಗೂ ಕಾಲ್ಪನಿಕತೆಯ ನಡುವೆ ಹೆಣ್ಣಿನ ಪರಿಸ್ಥಿತಿಯನ್ನು ಲೇಖಕಿ ಅನುಜಾ ಚಂದ್ರಮೌಳಿ ವಿವರಿಸಿದರು. ಹಾಗೆಯೇ ದೇವರ ಮಗಳಾಗಿ ಜನಿಸುವ ಲಿಲಿತ್, ಸ್ವತಂತ್ರ ಜೀವನ ಕುರಿತು ಲೇಖಕಿ ಶಿನಿ ಆಂಟೋನಿ ತಿಳಿಸಿಕೊಟ್ಟರು.



'ದುಷ್ಟ ಮಹಿಳೆಯರ ಜ್ಞಾನ ಮತ್ತು ಆಮಿಷ: ಲಿಲಿತ್ ಮತ್ತು ಮೋಹಿನಿ' ಕುರಿತ ಸಂವಾದದಲ್ಲಿ ಲೇಖಕಿಯರಾದ ಶಿನಿ ಆಂಟೋನಿ ಮತ್ತು ಅನುಜಾ ಚಂದ್ರಮೌಳಿ ಅವರನ್ನು ಕಾಣಬಹುದು.

ದೇವಸ್ಥಾನಗಳಲ್ಲಿ ದೊರೆಯುವ 'ಪ್ರಸಾದ'ದಲ್ಲಿ ಧರ್ಮ, ಆಹಾರ ಸಮ್ಮಿಳಿತ

ಲೇಖಕಿ ಶೋಭಾ ನಾರಾಯಣ್ ವಿವರಣೆ

ಮೈಸೂರು, ಜು.6(ಬಿಎಲ್‌ಯು)– ಭಾರತದ ದೇವಸ್ಥಾನಗಳಲ್ಲಿ ದೊರೆಯುವ ರುಚಿಯಾದ ಪ್ರಸಾದ ಇಲ್ಲಿನ ಧರ್ಮ ಮತ್ತು ಆಹಾರ ಒಂದಕ್ಕೊಂದು ಬೆಸೆದುಕೊಂಡಿರುವುದನ್ನು ಬಿಂಬಿಸುತ್ತದೆ ಎಂದು ಲೇಖಕಿ ಶೋಭಾ ನಾರಾಯಣ್ ಅಭಿಪ್ರಾಯಪಟ್ಟರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸಾಂಸ್ಕೃತಿಕ ಅನುಭವಗಳ ವಿವಿಧ ಸ್ತರಗಳು–ಪರಿಷ್ಕರಿಸಿದ ಬದುಕುವ ವಿಧಾನಗಳು' ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದು, ಸಿಖ್ ಸೇರಿದಂತೆ ಹಲವು ಧರ್ಮಗಳ ದೇವಸ್ಥಾನಗಳಲ್ಲಿ ದೊರೆಯುವ ಪ್ರಸಾದಗಳ ರುಚಿಯ ವೈಶಿಷ್ಟ್ಯತೆ ಬಗ್ಗೆ ವಿವರಿಸಲು ಪದಗಳೇ ಸಿಗುವುದಿಲ್ಲ ಎಂದು ಹೇಳಿದರು.

ಧರ್ಮಸ್ಥಳ, ಉಡುಪಿ ಸೇರಿದಂತೆ ಹಲವು ದೇವಸ್ಥಾನಗಳಲ್ಲಿ ದೊರೆಯುವ ಪ್ರಸಾದ ರೂಪದ ಭೋಜನ ಸ್ಥಳೀಯ ಸಸ್ಯಹಾರದ ವೈಶಿಷ್ಟ್ಯತೆಯನ್ನು ಸಾರಿ ಹೇಳುತ್ತದೆ. ಭಾರತದಲ್ಲಿ ಹಲವು ಧರ್ಮಗಳಿದ್ದು, ಒಂದೊಂದು ಸ್ಥಳದಲ್ಲೂ ಸಂಸ್ಕೃತಿ, ಆಹಾರ ಮತ್ತು ಧರ್ಮದಲ್ಲಿ ವಿಭಿನ್ನತೆ ಇರುತ್ತದೆ ಎಂದರು.

ಭಾರತದ ದೇವಸ್ಥಾನಗಳಲ್ಲಿ ದೊರೆಯುವ ಪ್ರಸಾದವನ್ನು ದೇವರು ಕೊಟ್ಟಿದ್ದಾನೆ ಎಂಬ ಭಾವದಲ್ಲಿ ಭಕ್ತರು ಸೇವಿಸುತ್ತಾರೆ. ಇದು ಧರ್ಮ ಮತ್ತು ಆಹಾರ ಒಂದಕ್ಕೊಂದು ಬೆರೆತಿರುವುದನ್ನು ಬಿಂಬಿಸುತ್ತದೆ ಎಂದು ಶೋಭಾ ನಾರಾಯಣ್ ಹೇಳಿದರು.



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಸಾಂಸ್ಕೃತಿಕ ಅನುಭವಗಳ ವಿವಿಧ ಸ್ತರಗಳು–ಪರಿಷ್ಕರಿಸಿದ ಬದುಕುವ ವಿಧಾನಗಳು ಕುರಿತ ವಿಚಾರ ಗೋಷ್ಠಿಯಲ್ಲಿ ಲೇಖಕ ಝಾಕ್ ಓ ಏ ಮಾತನಾಡಿದರು. ಲೇಖಕರಾದ ಶೋಭಾ ನಾರಾಯಣ್ ಹಾಗೂ ಮೋನಿಕಾ ಮೊನಾಲಿಸಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ದಕ್ಷಿಣ ಕನ್ನಡ ಮತ್ತು ಉಡುಪಿಯ ಮಸಾಲೆ ದೋಸೆ, ಬೊಂಡಾ ಸೇರಿದಂತೆ ಹಲವು ರೀತಿಯ ಆಹಾರಗಳು ಯೂರೋಪಿಯನ್ ರಾಷ್ಟ್ರಗಳು ಸೇರಿದಂತೆ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲಿ ದೊರೆಯುತ್ತದೆ. ಇಲ್ಲಿನ ಆಹಾರ ಪದಾರ್ಥಗಳು ಎಷ್ಟರ ಮಟ್ಟಿಗೆ ವಿಶ್ವ ವಿಖ್ಯಾತಿ ಗಳಿಸಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ತಿಳಿಸಿದರು. ಈ ವೇಳೆ ಮಾತನಾಡಿದ ಲೇಖಕ ಝಾಕ್ ಓ ಏ, ಭಾರತದ ಗ್ರಾಮೀಣ ಪ್ರದೇಶದ ವಾತಾವರಣವನ್ನು ಬಿಂಬಿಸುವ ಆರ್.ಕೆ. ನಾರಾಯಣ್ ಅವರ ಮಾಲ್ಗುಡಿ ಡೇಸ್ ಓದಿದ್ದೇನೆ. ಈ ಮೂಲಕ ಇಲ್ಲಿನ ವೈಶಿಷ್ಟ್ಯತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ ಎಂದರು.

ಭಾರತದ ಆಹಾರಗಳಲ್ಲಿ ಮಸಾಲೆ ದೋಸೆ ಪ್ರತಿಯೊಬ್ಬರಿಗೂ ಅಚ್ಚುಮೆಚ್ಚು. ಅದನ್ನು ಸೇವಿಸಿದಾಗ ಮಾತ್ರ ಅದನ್ನು ವರ್ಣನೆ ಮಾಡಲು ಸಾಧ್ಯವೇ ಹೊರತು, ಹಾಗೆ ಹೇಳಿದರೆ ಅದರ ಸ್ವಾದದ ವರ್ಣನೆಗೆ ಪದಗಳು ಸಿಗುವುದಿಲ್ಲ ಎಂದರು.

ಒಂದು ಬಾರಿ ಭಾರತದ ತಿಂಡಿ–ತಿನಿಸುಗಳ ರುಚಿ ನೋಡಿದರೆ ಮತ್ತೆ ಮತ್ತೆ ಅದನ್ನು ತಿನ್ನಬೇಕು ಎಂಬ ಚಡಪಡಿಕೆಯಾಗುತ್ತದೆ. ಅಷ್ಟರ ಮಟ್ಟಿಗೆ ನಾಲಿಗೆಗೆ ರುಚಿಸುತ್ತದೆ. ಯೂರೋಪಿಯನ್ ರಾಷ್ಟ್ರಗಳಲ್ಲೂ ಮಸಾಲೆ ದೋಸೆ, ವಡಾ ಸಾಂಬಾರ್ ಸೇರಿದಂತೆ ಇತರೆ ಆಹಾರಗಳು ಸಿಗುತ್ತವೆ. ಆದರೆ ಬೆಲೆ ಹೆಚ್ಚಿರುತ್ತದೆ ಎಂದರು. ಭಾರತದ ದೇವಸ್ಥಾನಗಳಲ್ಲಿ ದೊರೆಯುವ ಪ್ರಸಾದವನ್ನು ನಾನು ಸೇವಿಸಿದ್ದೇನೆ. ಈ ಪ್ರಸಾದ ಸ್ಥಳಿಯ ಸಂಪ್ರದಾಯ, ಸಂಸ್ಕೃತಿಯನ್ನು ಬಿಂಬಿಸುತ್ತದೆ. ಜೊತೆಗೆ ಶುಚಿಯಾಗಿರುತ್ತದೆ. ಭಾರತದಲ್ಲಿ ಆಹಾರ ಪದ್ಧತಿ, ಸಂಸ್ಕೃತಿ ಹಾಗೂ ಪ್ರಾದೇಶಿಕತೆ ಬಹಳ ವಿಭಿನ್ನವಾಗಿರುತ್ತದೆ. ಈ ಮೂಲಕ ಪ್ರತಿಯೊಬ್ಬರನ್ನು ಆಕರ್ಷಿಸುತ್ತದೆ ಎಂದು ಝಾಕ್ ಓ ಏ ಅಭಿಪ್ರಾಯಪಟ್ಟರು. ಈ ವೇಳೆ ಮೋನಿಕಾ ಮೊನಾಲಿಸಾ ಕೂಡ ಭಾರತದ ಆಹಾರ ಪದ್ಧತಿ ಹಾಗೂ ಸಂಸ್ಕೃತಿ ಬಗ್ಗೆ ವಿವರಿಸಿದರು.

ಮೈಸೂರು ಮಿತ್ರ ಭಾನುವಾರ 7 ಜುಲೈ 2024

ಕಾಮಗಾರಿಗಳ ಖುದ್ದು ಪರಿಶೀಲಿಸಿ ವರದಿ ನೀಡಿ

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಸೂಚನೆ



ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಕೆಡಿಪಿ ಸಭೆ ನಡೆಸಿದರು.

ಮಡಿಕೇರಿ, ಜು.6– ಕೊಡಗು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೊಡವ ಹೆರಿಟೇಜ್, ಮಿನಿ ವಿಧಾನಸೌಧ, ಸುವರ್ಣ ಕರ್ನಾಟಕ ಸಮುಚ್ಚಯ ಭವನ, ಮಂಗಳೂರು ರಸ್ತೆಯ ತಡೆಗೋಡೆ ಸೇರಿದಂತೆ ಹಲವು ಕಾಮಗಾರಿಗಳು ನಡೆಯುತ್ತಿದ್ದು, ಇನ್ನೂ ಪೂರ್ಣಗೊಳ್ಳದಿರುವುದಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ತೀವ್ರ ಬೇಸರ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಳೆದ ಕೆಡಿಪಿ ಸಭೆಯಲ್ಲಿಯೇ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸ್ಪಷ್ಟ ನಿರ್ದೇಶನ ನೀಡಲಾಗಿತ್ತು, ಆದರೂ ಇದುವರೆಗೆ ಕಾಮಗಾರಿ ಪೂರ್ಣಗೊಳ್ಳದಿರುವುದಕ್ಕೆ ಸಚಿವರು ತೀವ್ರ ಅತೃಪ್ತಿ ವ್ಯಕ್ತಪಡಿಸಿದರು. ಹಣವಿದ್ದರೂ ಸಹ ಕಾಮಗಾರಿಗಳನ್ನು ಏಕೆ ಪೂರ್ಣಗೊಳಿಸಿಲ್ಲ ಎಂದು ತರಾಟೆ ತೆಗೆದುಕೊಂಡ ಸಚಿವರು, ಲೋಕೋಪಯೋಗಿ ಇಲಾಖೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಖರ ವರದಿ ನೀಡುವಂತೆ ಜಿಲ್ಲಾಧಿಕಾರಿ ಅವರಿಗೆ ಸೂಚಿಸಿದರು.

ಇದಕ್ಕೆ ಧ್ವನಿಗೂಡಿಸಿದ ಶಾಸಕ ಡಾ. ಮಂತರ್ ಗೌಡ ಅವರು ಶಾಸಕರಾಗಿ ಒಂದು ವರ್ಷ ಕಳೆದಿದ್ದು, ತಡೆಗೋಡೆ ಪೂರ್ಣಗೊಳ್ಳದೆ ಟಾರ್ಪಲ್ ಹೊದಿಸಿರುವುದು ಬೇಸರ ತಂದಿದೆ. ಮೈಸೂರು ರಸ್ತೆಯಲ್ಲಿ ಕನ್ನಡ ಸುವರ್ಣ ಸಮುಚ್ಚಯ ಭವನಕ್ಕೆ ಹೋಗುವಾಗ ಬರುವಾಗ ಪ್ರತಿ ನಿತ್ಯ ನೋಡುತ್ತಿದ್ದು, ಇನ್ನೂ ಸಹ ಪೂರ್ಣಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು. ಇದೇ ರೀತಿ ಕಾಮಗಾರಿಗಳನ್ನು ಮುಂದುವರಿಸಿದರೆ ಅಮಾನತ್ತುಗೊಳ್ಳುತ್ತೀರ ಎಂದು ಎಚ್ಚರಿಸಿದರು.

ಈ ಕುರಿತು ಮಾತನಾಡಿದ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಅವರು, ಕಾಟಿಕೇರಿ ರಸ್ತೆ ಹದಗೆಟ್ಟಿದ್ದು, ಕಾಡು ಕಡಿದಿಲ್ಲ. ಲೋಕೋಪಯೋಗಿ ಇಲಾಖೆ ಕೆಲಸಗಳು ಇನ್ನಷ್ಟು ಸುಧಾರಣೆಯಾಗಬೇಕು ಎಂದು ಸೂಚಿಸಿದರು. ಈ ವೇಳೆ ಮಾತನಾಡಿದ ಶಾಸಕ ಡಾ.ಮಂತರ್‌ಗೌಡ, ಚೆನ್ನಾಗಿರುವ ರಸ್ತೆಗೆ ಮರು ಡಾಂಬರೀಕರಣ ಮಾಡುತ್ತಾರೆ. ಶಾಸಕರು ಅಥವಾ ಸ್ಥಳೀಯರ ಗಮನಕ್ಕೂ ತರುವುದಿಲ್ಲ ಎಂದು ದೂರಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳ ಸಂಬಂಧ ಜಿಲ್ಲಾಧಿಕಾರಿ ಅವರು ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದರು.

ಬಡವರು ಮನೆ ಉಪಯೋಗಕ್ಕೆ ಒಂದು–ಎರಡು ಮರ ಕಡಿದರೆ ಪ್ರಕರಣ ದಾಖಲಿಸುತ್ತೀರಾ. ಶ್ರೀಮಂತರು ಎಕರೆಗಟ್ಟಲೆ ಮರವನ್ನು ಕಡಿಯುತ್ತಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಗಮನಹರಿಸುವುದಿಲ್ಲವೇ ಎಂದು ಪೊನ್ನಣ್ಣ ಅವರು ಅಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಡಿಪಿ ಸಭೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸಭೆಗೆ ಹಾಜರಾಗುವುದಿಲ್ಲ. ಇವರು ಆಡಳಿತ ವ್ಯವಸ್ಥೆಗೆ ಉತ್ತರದಾಯಿತ್ವ ಹೊಂದಿಲ್ಲವೇ ಎಂದು ಪೊನ್ನಣ್ಣ ಅವರು ಪ್ರಶ್ನಿಸಿದರು.

ಡೆಂಗ್ಯೂ ಜ್ವರದ ಕುರಿತು ಮಾಹಿತಿ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸತೀಶ್ ಕುಮಾರ್ ಅವರು, ಡೆಂಗ್ಯೂ ನಿಯಂತ್ರಣಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪೊನ್ನಂಪೇಟೆ ಮತ್ತು ಕುಶಾಲನಗರ ಭಾಗದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗಿದ್ದು, ಇದರ ನಿಯಂತ್ರಣ ಸಂಬಂಧ 15 ದಿನಗಳಿಗೊಮ್ಮೆ ಮನೆ ಮನೆಗೆ ಭೇಟಿ ನೀಡಿ ಲಾರ್ವಾ ಸರ್ವೆ ಮಾಡಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಡೆಂಗ್ಯೂ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ ಎಂದರು.

ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಪಂ ಸಿಇಒ ವರ್ಣಿತ್ ನೇಗಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಧರ್ಮಜ ಉತ್ತಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇತರರು ಇದ್ದರು.

ಮಹಿಳೆಯ ಕೊಂದು ಚಿನ್ನಾಭರಣ ದೋಚಿದ್ದ ಇಬ್ಬರಿಗೆ ಜೀವಾವಧಿ ಶಿಕ್ಷೆ

ಮಡಿಕೇರಿ,ಜು.6– ಒಂಟಿ ಮಹಿಳೆಯನ್ನು ಹತ್ಯೆಗೈದು ಚಿನ್ನಾಭರಣ ದೋಚಿದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಹಾಗೂ ಪ್ರಕರಣದ ಮತ್ತೋರ್ವ ಮಹಿಳಾ ಅಪರಾಧಿಗೆ 3 ವರ್ಷಗಳ ಶಿಕ್ಷೆ ವಿಧಿಸಿ ಮಡಿಕೇರಿಯ 1ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಪು ನೀಡಿದೆ.

ಕುಶಾಲನಗರ ಗೊಂದಿಬಸವನಹಳ್ಳಿ ನಿವಾಸಿ ಸುಬ್ರಮಣ್ಯ ಹಾಗೂ ಮುಳ್ಳುಸೋಗೆ ಜನತಾ ಕಾಲೋನಿಯ ಮದನ್ ಜೀವಾವಧಿ ಶಿಕ್ಷೆಗೆ ಗುರಿಯಾದವರು. ಕಾವ್ಯ ಎಂಬಾಕೆ 3 ವರ್ಷ ಶಿಕ್ಷೆಗೆ ಒಳಗಾದ ಅಪರಾಧಿ.

ಪ್ರಕರಣ ಹಿನ್ನೆಲೆ: ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಕುಂಬಳದಾಳು ಗ್ರಾಮದ ನಿವಾಸಿ ರಾಧ ಕೃಷಿ ಮಾಡಿಕೊಂಡಿದ್ದು, ಓರ್ವ ಮಗಳನ್ನು ವಿವಾಹ ಮಾಡಿಕೊಟ್ಟಿದ್ದರೆ, ಇಬ್ಬರು ಪುತ್ರರು ಉದ್ಯೋಗ ನಿಮಿತ್ತ ಬೇರೆ ಊರುಗಳಲ್ಲಿ ನೆಲಸಿದ್ದರು. ಈ ನಡುವೆ ತೋಟದಲ್ಲಿ ಕರಿಮೆಣಸು ಕುಯ್ಯುವ ಕೆಲಸಕ್ಕೆ ಗೊಂದಿಬಸವನಹಳ್ಳಿ ನಿವಾಸಿ ಸುಬ್ರಮಣ್ಯ ಹಾಗೂ ಮುಳ್ಳುಸೋಗೆ ಜನತಾ ಕಾಲೋನಿಯ ಮದನ್ ಅವರುಗಳು ಬರುತ್ತಿದ್ದರು.

2019ರ ಫೆಬ್ರವರಿ 21ರಂದು ಈ ಇಬ್ಬರು ಆರೋಪಿಗಳು ಸಂಜೆ 6.30ರ ಸಮಯದಲ್ಲಿ ರಾಧ ಅವರ ಮನೆಯ ಹಿಂಬಾಗಿಲಿನಿಂದ ಪ್ರವೇಶಿಸಿ ಅವರ ಕುತ್ತಿಗೆ ಹಿಸುಕಿ ಕೊಲೆ ಮಾಡಿ ಚಿನ್ನಾಭರಣಗಳನ್ನು ದೋಚಿದ್ದರು. ಚಿನ್ನಾಭರಣಗಳನ್ನು 1ನೇ ಆರೋಪಿಯ ಸಹೋದರಿ ಕಾವ್ಯ ಎಂಬಾಕೆಯ ಮೂಲಕ ಮೈಸೂರಿನ ಚಿನ್ನದ ಅಂಗಡಿಯಲ್ಲಿ ಮಾರಾಟ ಮಾಡಿ ಕೆಲವು ಆಭರಣಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮಡಿಕೇರಿಯ 1ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಪ್ರಾಸಿಕ್ಯೂಷನ್ ಪರ ಹಾಜರುಪಡಿಸಿದ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಆರೋಪಿಗಳು ಕೃತ್ಯ ಎಸಗಿರುವುದು ಸಾಬೀತಾಗಿದೆ ಎಂದು ನ್ಯಾಯಾಧೀಶರು ಘೋಷಿಸಿ, 1ನೇ ಮತ್ತು 2ನೇ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ಅಭಿಯೋಜಕ ಎಸ್.ಪಿ.ದೇವೇಂದ್ರ ವಾದ ಮಂಡಿಸಿದ್ದಾರೆ.

ಭೂ ಪರಿವರ್ತನೆಯಿಂದ ಕೊಡವರ ಅಸ್ತಿತ್ವಕ್ಕೆ ಧಕ್ಕೆ

ಭೂ ಮಾಫಿಯಾದವರ ವಿರುದ್ಧ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಆಕ್ರೋಶ



ಭೂಪರಿವರ್ತನೆಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಚೆಟ್ಟಳ್ಳಿ ಪಟ್ಟಣದಲ್ಲಿ ನಡೆದ ಜನ ಜಾಗೃತಿ ಮಾನವ ಸರಪಳಿ.

ಮಡಿಕೇರಿ,ಜು.6– ಆರ್ಥಿಕ ಅಪರಾಧಿಗಳು, ಕಾಳಸಂತೆಕೋರರು ಹಾಗೂ ರಾಜಕೀಯ ನಂಟು ಹೊಂದಿರುವ ಭೂಮಾಫಿಯಾಗಳು ಕಪ್ಪು ಹಣವನ್ನು ಬಿಳಿ ಮಾಡುವ ಉದ್ದೇಶದಿಂದ ಪವಿತ್ರ ಕೊಡವ ಲ್ಯಾಂಡ್ ಅನ್ನು ಬೃಹತ್ ಪ್ರಮಾಣದಲ್ಲಿ ಭೂಪರಿವರ್ತನೆ ಮಾಡುತ್ತಿದ್ದು, ಇದು ಮುಂದೊಂದು ದಿನ ಮೂಲನಿವಾಸಿ ಕೊಡವರ ಅಸ್ತಿತ್ವಕ್ಕೆ ಧಕ್ಕೆ ಉಂಟು ಮಾಡಲಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ಸಿದ್ದಾಪುರದ 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂಪರಿವರ್ತನೆ ಮತ್ತು ಭೂವಿಲೇವಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಚೆಟ್ಟಳ್ಳಿ ಪಟ್ಟಣದಲ್ಲಿ ನಡೆದ ಜನ ಜಾಗೃತಿ ಮಾನವ ಸರಪಳಿ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

> ಆಡಳಿತ ವ್ಯವಸ್ಥೆ ಮಳೆಯ ನೆಪವೊಡ್ಡಿ ರೆಡ್ ಅಲರ್ಟ್, ಆರೆಂಜ್ ಅಲರ್ಟ್, ಯೆಲ್ಲೋ ಅಲರ್ಟ್ ಎಂದು ಘೋಷಿಸಿ ಬೆಟ್ಟಗುಡ್ಡಗಳಲ್ಲಿ ಅನಾದಿ ಕಾಲದಿಂದಲೂ ವಾಸಿಸುತ್ತಿರುವ ಮೂಲ ನಿವಾಸಿಗಳಲ್ಲಿ ಆತಂಕ ಸೃಷ್ಟಿಸುತ್ತಿದೆ. ಸ್ಥಳೀಯರಲ್ಲಿ ಭಯ ಮೂಡಿಸಿದರೆ ಭೂ ಮಾಫಿಯಾಗಳಿಗೆ ಕೊಡವ ಲ್ಯಾಂಡ್ ಅನ್ನು ಕಬಳಿಸಲು ಸುಲಭವಾಗುತ್ತದೆ ಎನ್ನುವ ಷಡ್ಯಂತ್ರ ಆಡಳಿತ ಶಾಹಿಗಳಿಂದ ಪರೋಕ್ಷವಾಗಿ ನಡೆಯುತ್ತಿದೆ.
> – ಎನ್.ಯು. ನಾಚಪ್ಪ, ಸಿಎನ್‌ಸಿ ಸಂಚಾಲಕ

ಕೊಡವರು ಅತ್ಯಂತ ಸೂಕ್ಷ್ಮ ಸಮುದಾಯಕ್ಕೆ ಸೇರಿದವರಾಗಿದ್ದು, ಚಿಕ್ಕ ಪ್ರದೇಶದಲ್ಲಿ ಪ್ರಕೃತಿಯ ಆರಾಧನೆಯೊಂದಿಗೆ ವಾಸಿಸುತ್ತಿದ್ದಾರೆ. ಆದರೆ ಇಂದು ಈ ಪವಿತ್ರ ಕೊಡವ ಪ್ರದೇಶದ ಮೇಲೆ ಆರ್ಥಿಕ ಅಪರಾಧಿಗಳು, ಕಾಳಸಂತೆಕೋರರು, ಕಪ್ಪು ಹಣ ಹೊಂದಿರುವವರು, ರಾಜಕೀಯ ನಂಟು ಹೊಂದಿರುವ ಭೂಮಾಫಿಯಾಗಳು, ರೆಸಾರ್ಟ್ ಧಣಿಗಳು ಹಾಗೂ ಆಂಧ್ರ ಪ್ರದೇಶದ ಸಾಫ್ಟ್ ಮನಿ ಫಲಾನುಭವಿಗಳು ದೃಷ್ಟಿ ಬೀರಿದ್ದಾರೆ. ಬೃಹತ್ ಮಟ್ಟದಲ್ಲಿ ಭೂಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ಮಾಡುತ್ತಿದ್ದು, ಕೊಡವ ಲ್ಯಾಂಡ್ ಮತ್ತು ಕೊಡವರ ಆರಾಧನೆಯ ಪ್ರಕೃತಿ ಆತಂಕದೆಡೆಗೆ ಸಾಗುತ್ತಿದೆ. ಇವುಗಳು ನಾಶವಾದರೆ ಕೊಡವರು ಕೂಡ ನಾಶವಾದಂತೆ ಎನ್ನುವುದನ್ನು ಕೊಡವರು ಅರ್ಥ ಮಾಡಿಕೊಳ್ಳಬೇಕೆಂದು ನಾಚಪ್ಪ ಹೇಳಿದರು.

ಕೊಡಗಿನಲ್ಲಿ ರೆಸಾರ್ಟ್ ವ್ಯವಹಾರ ದೊಡ್ಡ ಮಟ್ಟದಲ್ಲಿ ನಡೆಯದಿದ್ದರೂ ಕಾಫಿ ತೋಟಗಳ ಬೃಹತ್ ಭೂಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ಮಾಡಲಾಗುತ್ತಿದೆ. ನಷ್ಟ ತೋರಿಸುವುದಕ್ಕಾಗಿ ರೆಸಾರ್ಟ್‌ಗಳನ್ನು ನಿರ್ಮಿಸುತ್ತಿದ್ದು, ಕಪ್ಪು ಹಣವನ್ನು ಚಲಾವಣೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಅಕ್ರಮ ದಂಧೆಕೋರ ಬಂಡವಾಳಶಾಹಿ ಕಂಪೆನಿಗಳು ಕಾನೂನು ದುರುಪಯೋಗಪಡಿಸಿಕೊಂಡು ರಾತ್ರೋರಾತ್ರಿ ಪ್ರಭಾವ ಬೀರಿ ಬೃಹತ್ ಭೂಪರಿವರ್ತನೆ ಮತ್ತು ಭೂ ವಿಲೇವಾರಿಗಾಗಿ ನೋಂದಣಿ ಮಾಡಿಸಿಕೊಳ್ಳುತ್ತಿದ್ದಾರೆ ಎಂದರು. ಪವಿತ್ರ ಕೊಡವ ಲ್ಯಾಂಡ್‌ನಲ್ಲಿ ನಿತ್ಯ ಪ್ರವಾಸಿಗರ ಮೋಜು ಮಸ್ತಿ, ದೌರ್ಜನ್ಯ ನಡೆಯುತ್ತಿದೆ. ಆದಾಯ ಕ್ರೋಢಿಕರಣಕ್ಕಾಗಿ ಸರ್ಕಾರ ಪ್ರವಾಸೋದ್ಯಮದ ಹೆಸರಿನಲ್ಲಿ ಬೃಹತ್ ಭೂಪರಿವರ್ತನೆ ಮತ್ತು ಭೂವಿಲೇವಾರಿಯಂತಹ ಪ್ರಕೃತಿಗೆ ವಿರುದ್ಧವಾದ ಪ್ರಕ್ರಿಯೆಗಳಿಗೆ ಅವಕಾಶ ಹಾಗೂ ಅನುಕೂಲ ಕಲ್ಪಿಸುತ್ತಿದೆ. ಇದರ ಪರಿಣಾಮ ಪ್ರವಾಸಿಗರಿಂದಾಗಿ ಮೂಲನಿವಾಸಿಗಳಿಗೆ ರಕ್ಷಣೆ ಮತ್ತು ನೆಮ್ಮದಿ ಇಲ್ಲದಾಗಿದೆ ಎಂದರು.

ಟ್ರಯಲ್ ಬ್ಲಾಸ್ಟ್ ಬೇಡವೆಂದು ಕೋರ್ಟ್ ಮುಂದೆ ಸಮರ್ಥ ವಾದ ಮಂಡನೆ

ರೈತ ಮುಖಂಡರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಯ





ಕೆಆರ್‌ಎಸ್ ಅಣೆಕಟ್ಟು ಬಳಿ ಟ್ರಯಲ್ ಬ್ಲಾಸ್ಟ್ ನಡೆಸುವ ಸಂಬಂಧ ಶನಿವಾರ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ರೈತರೊಂದಿಗೆ ಚರ್ಚಿಸಿದರು.

ಮಂಡ್ಯ,ಜು.6– ಜಿಲ್ಲೆಯ ಜೀವನಾಡಿ ಕೃಷ್ಣರಾಜ ಸಾಗರ ಅಣೆಕಟ್ಟೆ ಬಳಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಆದೇಶಿಸಿರುವ ಟ್ರಯಲ್ ಬ್ಲಾಸ್ಟ್‌ಗೆ ಸ್ಥಳೀಯ ರೈತರು ಮತ್ತು ರೈತ ಮುಖಂಡರು ವಿರೋಧ ಮಾಡಿರುವ ಹಿನ್ನೆಲೆಯಲ್ಲಿ ಅಡ್ವೋಕೇಟ್ ಜನರಲ್ ಮತ್ತು ವಕೀಲರ ಮೂಲಕ ಟ್ರಯಲ್ ಬ್ಲಾಸ್ಟ್ ಬೇಡವೆಂದು ಸಮರ್ಥ ವಾದ ಮಂಡನೆಗೆ ಸರ್ಕಾರದೊಂದಿಗೆ ಚರ್ಚಿಸುವೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಕೆಆರ್‌ಎಸ್ ಅಣೆಕಟ್ಟಿನ ಹತ್ತಿರ ಟ್ರಯಲ್ ಬ್ಲಾಸ್ಟ್ ನಡೆಸುವ ಸಂಬಂಧ ರೈತ ನಾಯಕರೊಂದಿಗೆ ಚರ್ಚೆ ನಡೆಸಿ ಮಾತನಾಡಿದ ಅವರು, ಅಣೆಕಟ್ಟೆ ನಿರ್ಮಾಣ ಕಷ್ಟಕರ ಎಂಬುದು ತಿಳಿದಿರುವ ವಿಷಯ, ಅಣೆಕಟ್ಟು ಸಂರಕ್ಷಣೆ ಸರ್ಕಾರದ ಮುಖ್ಯ ಜವಾಬ್ದಾರಿಯಾಗಿದೆ. ಟ್ರಯಲ್ ಬ್ಲಾಸ್ಟ್ ಕುರಿತಂತೆ ಜಿಲ್ಲೆಯ ಆಸಕ್ತಿ ರೈತರ ಅಭಿಪ್ರಾಯ ಹಾಗೂ ಕೆಆರ್‌ಎಸ್ ಡ್ಯಾಂನ ಅವಶ್ಯಕತೆಯ ದೃಷ್ಟಿಕೋನವನ್ನು ಇಟ್ಟುಕೊಂಡು, ಡ್ಯಾಮ್‌ಗೆ ಸಣ್ಣ ತೊಂದರೆಯು ಆಗದಂತೆ ಎಚ್ಚರ ವಹಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಮಂಡ್ಯ ಜಿಲ್ಲೆಯಲ್ಲಿರುವ ಕೆಆರ್‌ಎಸ್ ಅಣೆಕಟ್ಟಿನ ಹತ್ತಿರ ಟ್ರಯಲ್ ಬ್ಲಾಸ್ಟ್ ನಡೆಸಬೇಕಿದ್ದು, ಟ್ರಯಲ್ ಬ್ಲಾಸ್ಟ್ ಮಾಡುವುದೋ ಅಥವಾ ಬೇಡವೋ ಎಂಬ ಚರ್ಚೆಗಳು ಸಾಕಷ್ಟು ನಡೆಯುತ್ತಿವೆ. ಕಳೆದ ವಾರದಿಂದ ರೈತರು ಪ್ರತಿಭಟನೆ ಮಾಡುವ ಮೂಲಕ ಟ್ರಯಲ್ ಬ್ಲಾಸ್ಟ್‌ನಿಂದ ಅಣೆಕಟ್ಟೆಗೆ ತೊಂದರೆಯಾಗುವುದು ಎಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರವು ಟ್ರಯಲ್ ಬ್ಲಾಸ್ಟ್‌ಗೆ ಯಾವುದೇ ದಿನಾಂಕವನ್ನು ನಿಗದಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಟ್ರಯಲ್ ಬ್ಲಾಸ್ಟ್‌ಗೆ ಸಂಬಂಧಿಸಿದಂತೆ ಜಿಲ್ಲಾಡಳಿತ, ಕಾನೂನು ಇಲಾಖೆ ಜೊತೆ ಗಂಭೀರ ನಿರಂತರವಾಗಿ ಚರ್ಚೆ ನಡೆಸುತ್ತಿದ್ದೇನೆ ನ್ಯಾಯಾಲಯದ ವಿಚಾರಣೆಯು ಜುಲೈ 15ರಂದು ನಡೆಯಲಿದೆ. ಅಲ್ಲಿಯವರೆಗೂ ಬರುವ ರೈತರ ಅಭಿಪ್ರಾಯಗಳನ್ನು ಪಡೆದು, ತಾಂತ್ರಿಕವಾಗಿ, ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅಡ್ವೋಕೇಟ್ ಜನರಲ್ ಜೊತೆ ಮಾತನಾಡಿ, ಈ ಬಗ್ಗೆ ಸ್ಪಷ್ಟ ನಿಲುವನ್ನು ಕೋರ್ಟ್ ಮುಂದೆ ತಿಳಿಸಲಾಗುವುದು ಎಂದು ಅವರು ಹೇಳಿದರು.

ಟ್ರಯಲ್ ಬ್ಲಾಸ್ಟ್ ನಡೆಸಲು ರೈತರ ವಿರೋಧವಿದೆ. ಇಂದು ಸಭೆಯಲ್ಲಿ ರೈತ ಮುಖಂಡರು ಅಭಿಪ್ರಾಯ ನೀಡಿದ್ದಾರೆ. ಇದರೊಂದಿಗೆ ಅಡ್ವೋಕೇಟ್ ಜನರಲ್ ಅಭಿಪ್ರಾಯ, ಡ್ಯಾಮ್ ಸೇಫ್ಟಿ ಕಮಿಟಿ, ಉನ್ನತ ಅಧಿಕಾರಿಗಳ ಅಭಿಪ್ರಾಯವನ್ನು ಪಡೆದು ಜುಲೈ 15ರಂದು ನ್ಯಾಯಾಲಯದ ಮುಂದೆ ಮಂಡಿಸಲಾಗುವುದು. ಮುಖ್ಯಮಂತ್ರಿಗಳೊಂದಿಗೆ ಸಭೆ ರೈತರ ಅಭಿಪ್ರಾಯ ಕುರಿತಂತೆ ಚರ್ಚಿಸಲು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಭೆ ಆಯೋಜಿಸಲಾಗುವುದು. ಸಭೆ ನಡೆಯುವ ದಿನದಂದು ಆಯ್ದ ಐದು ರೈತ ಮುಖಂಡರು ಬೆಂಗಳೂರಿಗೆ ಆಗಮಿಸಿ ಸಭೆಯಲ್ಲಿ ಭಾಗವಹಿಸಿ ಎಂದ ಅವರು, ಟ್ರಯಲ್ ಬ್ಲಾಸ್ಟ್‌ಗೆ ಸಂಬಂಧಿಸಿದಂತೆ ಜು.15 ರಂದು ಕೋರ್ಟ್‌ಗೆ ಸಮಗ್ರ ಮಾಹಿತಿ ಕೊಡಲಿದ್ದೇವೆ. ಗೊಂದಲ ಬಗೆಹರಿಯದಿದ್ದರೆ ಸಮಯಾವಕಾಶ ಕೇಳಲಾಗುವುದು. ತಾಂತ್ರಿಕ ಸಮಿತಿ ಅಭಿಪ್ರಾಯ, ಅಧಿಕಾರಿಗಳ ಅಭಿಪ್ರಾಯ, ಬೇರೆ ಇರುತ್ತದೆ. ಎಲ್ಲಾ ಸಿದ್ಧತೆ ಮಾಡಿಕೊಂಡು ಕೋರ್ಟ್ ಮುಂದೆ ಹೋಗುತ್ತೇವೆ ಜು.15ರವರೆಗೆ ಟ್ರಯಲ್ ಬ್ಲಾಸ್ಟ್ ನಡೆಸುವುದಿಲ್ಲ ಎಂದು ತಿಳಿಸಿದರು.

ರೈತ ಮುಖಂಡರಾದ ಕೆಂಪೂಗೌಡ ಮಾತನಾಡಿ, ಅಣೆಕಟ್ಟು ಕಟ್ಟುವುದು ಕಷ್ಟಕರ, ಇರುವ ಅಣೆಕಟ್ಟನ್ನು ಸಂರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಿದೆ. ಕೆಆರ್‌ಎಸ್ ಸುತ್ತ ಗಣಿಗಾರಿಕೆ ನಡೆಸುವುದಿಲ್ಲ ಎಂದು ಸರ್ಕಾರದಿಂದ ಸುಗ್ರೀವಾಜ್ಞೆ ಹೊರಡಿಸಿ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ರೈತ ಮುಖಂಡ ಪ್ರಸನ್ನಗೌಡ, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್ ಗಣಿಗ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ತಾಂತ್ರಿಕ ಅಧಿಕಾರಿ ಶಿವಪ್ರಸಾದ್, ಎಎಸ್ಪಿ ತಿಮ್ಮಯ್ಯ ಹಾಗೂ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಜುಲೈ 10 ರಂದು ತೋಟಗಾರಿಕೆ ಮೇಳ

ಮಂಡ್ಯ,ಜು.6– ಮೈಸೂರಿನ ತೋಟಗಾರಿಕೆ ಮಹಾವಿದ್ಯಾಲಯದ ವತಿಯಿಂದ ಜುಲೈ 10ರಂದು ಬೆಳಿಗ್ಗೆ 10.30 ಗಂಟೆಯಿಂದ ತೋಟಗಾರಿಕೆ ಮೇಳವನ್ನು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಅರಳಕುಪ್ಪೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿದೆ. ಮೇಳದ ವಿಶೇಷತೆಗಳೆಂದರೆ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಕ್ಕೆ ಸಂಬಂಧಿಸಿದ ವಸ್ತುಪ್ರದರ್ಶನ, ಪ್ರಾತ್ಯಕ್ಷಿಕೆಗಳು, ಕೀಟಗಳ ಪ್ರದರ್ಶನ ಇತ್ಯಾದಿ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಭಾರತೀನಗರ,ಜು.6–ಲಾರಿಯೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ಸಮೀಪದ ಮಣಿಗೆರೆ ಗ್ರಾಮದಲ್ಲಿ ನಡೆದಿದೆ.



ಮಣಿಗೆರೆ ಗ್ರಾಮದ ಹೊಂಬಯ್ಯನವರ ಪುತ್ರ ಮನುಕುಮಾರ್ (29) ಮೃತ ದುರ್ದೈವಿ. ಲಾರಿ ಮಳವಳ್ಳಿ ಕಡೆಯಿಂದ ಬೆಂಗಳೂರಿಗೆ ತೆರಳುತ್ತಿದ್ದಾಗ ಕೆ.ಎಂ.ದೊಡ್ಡಿಯಿಂದ ಮಣಿಗೆರೆಗೆ ತೆರಳುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ತಲೆಗೆ ಗಂಭೀರವಾಗಿ ಪೆಟ್ಟು ಬಿದ್ದು ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ. ತಕ್ಷಣ ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.

ಕೆ.ಎಂ.ದೊಡ್ಡಿ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೃತನ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಮೃತನ ಅಂತ್ಯಸಂಸ್ಕಾರ ಶನಿವಾರ ಜರುಗಿತು. ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ಯಾರಂಟಿ ಮೂಲಕ ಪ್ರತಿ ಮನೆಗೆ ಐದು ಸಾವಿರ ತಲುಪುತ್ತಿದೆ

ಮಂಡ್ಯ,ಜು.6–ಐದು ಗ್ಯಾರಂಟಿಗಳಾದ ಶಕ್ತಿ ಯೋಜನೆ, ಯುವನಿಧಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ ಯೋಜನೆಗಳಿಂದ ಪ್ರತಿ ಕುಟುಂಬಕ್ಕೆ ಐದು ಸಾವಿರ ಹಣ ತಲುಪುತ್ತಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ತಾಲೂಕಿನ ಕೆರಗೋಡಿನಲ್ಲಿ ಆಯೋಜಿಸಲಾಗಿದ್ದ ಜನಸ್ಪಂದನ ಉದ್ಘಾಟಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿಗಳ ಅನುಷ್ಠಾನ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸ ನಿರ್ವಹಿಸುತ್ತಿತ್ತು, ರಾಜ್ಯದಲ್ಲಿ ಬಹುತೇಕ ಫಲಾನುಭವಿಗಳಿಗೆ ಪಂಚ ಗ್ಯಾರಂಟಿ ಯೋಜನೆಗಳು ತಲುಪಿವೆ ಎಂದರು.


ಪಂಚ ಗ್ಯಾರಂಟಿಗಳ ಜೊತೆ ಅಭಿವೃದ್ಧಿ ಕಾಮಗಾರಿಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಕೃಷಿ ಇಲಾಖೆಯಿಂದ ನೀಡುವ ಸಬ್ಸಿಡಿಗಳು, ಬಿತ್ತನೆ ಬೀಜ, ರಸಗೊಬ್ಬರ, ಸೇರಿದಂತೆ ವಿವಿಧ ಇಲಾಖೆಯಿಂದ ನೀಡಲಾಗುತ್ತಿರುವ ಸವಲತ್ತು ನಿಲ್ಲಿಸಿಲ್ಲ. ಬೆಳೆ ವಿಮೆ ಯೋಜನೆಯಡಿ ರೈತರಿಗೆ 1,700 ಕೋಟಿ ರೂ. ಪಾವತಿಸಲಾಗಿದೆ ಈ ವರ್ಷ ಮುಂಗಾರು ಬೆಳೆಗೆ ಯಾವುದೇ ತೊಂದರೆ ಇಲ್ಲದಂತೆ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಪ್ರತಿ ತಾಲೂಕಿನಲ್ಲಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಕೊರತೆ ಇಲ್ಲದಂತೆ ಸೌಲಭ್ಯ ಹಾಗೂ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗಿದೆ ಸರ್ಕಾರ ಹಾಗೂ ಇಲಾಖೆಯು ಎಲ್ಲಾ ಸೌಲಭ್ಯಗಳನ್ನು ರೈತರಿಗೆ ತಲುಪಿಸುತಿದ್ದೇವೆ. ನಮ್ಮ ಸರ್ಕಾರ ಯಾವಾಗಲು ರೈತರ ಪರ ಇರುತ್ತದೆ ಎಂದು ಹೇಳಿದರು.

ಮಂಡ್ಯದ ಕೆರಗೋಡಿನಿಂದ ಕುಣಿಗಲ್ ಕಡೆ ಹೋಗುವ ರಸ್ತೆ ಹಾಗೂ ಚಿಕ್ಕಮಂಡ್ಯದ ಕಾರೆಮನೆ ಗೇಟ್ ಬಳಿ ರಸ್ತೆಯನ್ನು ಅಭಿವೃದ್ದಿ ಮಾಡಲಾಗಿದೆ. ಮಂಡ್ಯ ಜಿಲ್ಲೆಯು ಕೃಷಿ ಪ್ರಧಾನವಾದ ರೈತರ ಜಿಲ್ಲೆಯಾಗಿದ್ದು, ಮಂಡ್ಯದಲ್ಲಿ ಕೃಷಿ ವಿಶ್ವ ವಿದ್ಯಾನಿಲಯವನ್ನು ಆದಷ್ಟು ಬೇಗ ಸ್ಥಾಪಿಸಲಾಗುವುದು. ಹೊಸ ಶುಗರ್ ಫ್ಯಾಕ್ಟರಿಯನ್ನು ಜಿಲ್ಲೆಯಲ್ಲಿ ನಿರ್ಮಿಸಲಾಗುವುದು. ಜಿಲ್ಲೆಯ ಕೊನೆಯ ಭಾಗದ ಬೆಳೆಗಳಿಗೂ ನೀರು ತಲುಪಿಸುವ ಉದ್ದೇಶದಿಂದ ವಿ.ಸಿ.ನಾಲೆ ಆಧುನೀಕರಣ ಕಾಮಗಾರಿ ಕೈಗೊಳ್ಳಲಾಗಿದೆ. ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಜು.8 ರಿಂದ ಮೊದಲು ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ನಾಲೆಗಳಿಗೆ ನೀರು ಒದಗಿಸಲಾಗುವುದು ಎಂದು ತಿಳಿಸಿದರು.

ಶಾಸಕ ಪಿ.ರವಿಕುಮಾರ್ ಗಣಿಗ ಮಾತನಾಡಿ, ಕೆರಗೋಡಿನಲ್ಲಿರುವ ಪಂಚಲಿಂಗೇಶ್ವರ ಸಮುದಾಯ ಭವನದ ನಿರ್ಮಾಣವು ಬಹಳ ವರ್ಷಗಳಿಂದ ಅರ್ಧಕ್ಕೆ ನಿಂತಿದ್ದು, ಶೀಘ್ರದಲ್ಲೇ ಅದನ್ನು ಪೂರ್ಣಗೊಳಿಸಲಾಗುವುದು. ಜೊತೆಗೆ ಅಂಬೇಡ್ಕರ್ ಭವನದ ನಿರ್ಮಾಣಕ್ಕೆ ಸರ್ಕಾರವು ಅನುದಾನ ನೀಡಲಿದ್ದು ಶೀಘ್ರದಲ್ಲೇ ನಿರ್ಮಿಸಲಾಗುವುದು. 5 ಕೋಟಿ ರೂ ವೆಚ್ಚದಲ್ಲಿ ಕೆರೆಗಳ ಅಭಿವೃದ್ಧಿಯ ಟೆಂಡರ್ ಪ್ರಕ್ರಿಯೆ ಮುಗಿದ ತಕ್ಷಣ ಕೆರೆಯ ಅಭಿವೃದ್ಧಿ ಕಾಮಗಾರಿ ಮಾಡಲಾಗುವುದು. ಕೆರಗೋಡಿನಲ್ಲಿ ಬಸ್ ನಿಲ್ದಾಣವನ್ನು ಕಟ್ಟಲು ಸದ್ಯಕ್ಕೆ ಸ್ಥಳದ ಕೊರತೆ ಇದೆ. ಸ್ಥಳದ ಹುಡುಕಾಟ ನಡೆಯುತ್ತಿದ್ದು, ಸ್ಥಳವು ನಿಗದಿಯಾದ ತಕ್ಷಣ ಬಸ್ ನಿಲ್ದಾಣವನ್ನು ಕಟ್ಟಲಾಗುವುದು ಎಂದರು.

ಡಿಸಿ ಡಾ.ಕುಮಾರ, ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ಎಎಸ್ಪಿ ತಿಮ್ಮಯ್ಯ, ಡಿಎಚ್‌ಒ ಡಾ.ಮೋಹನ್, ಎಸಿ ಶಿವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಬಿರಾದರ್ ಉಪಸ್ಥಿತರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಇಬ್ಬರು ಸಾವು



ಬೇಗೂರು ಅಪರಿಚಿತ ಕಾರೂಂದು ಬೈಕ್‌ಗೆ ಡಿಕ್ಕಿಯಾದ ಪರಿಣಾಮ ಇಬ್ಬರು ಮೃತಪಟ್ಟ ಘಟನೆ ಬೇಗೂರು ಗ್ರಾಮದಲ್ಲಿ ನಡೆದಿದೆ.

ಬೇಗೂರು ಬಳಿ ದುರಂತ

ಬೇಗೂರು(ಗುಂಡ್ಲುಪೇಟೆ), ಜು.6– ಅಪರಿಚಿತ ಕಾರೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಸಂಭವಿಸಿದೆ.

ಗುಂಡ್ಲುಪೇಟೆ ತಾಲೂಕು ಬೇಗೂರು ಸಮೀಪದ ಸೋಮಹಳ್ಳಿ ಗ್ರಾಮದ ನಾಗೇಂದ್ರ ಹಾಗೂ ಮಹದೇವಸ್ವಾಮಿ ಮೃತ ದುರ್ದೈವಿಗಳು.

ಕಾರ್ಯ ನಿಮಿತ್ತ ಗುಂಡ್ಲುಪೇಟೆಗೆ ತೆರಳಿ ವಾಪಸಾಗುವ ವೇಳೆ ಕರ್ನಾಟಕ ನೋಂದಣಿ ಸಂಖ್ಯೆಯ ಕಾರೊಂದು ಹಿಂದಿನಿಂದ ಡಿಕ್ಕಿ ಹೊಡೆದು ಪರಾರಿಯಾಗಿದ್ದು, ಪೆಟ್ರೋಲ್ ಬಂಕ್‌ವೊಂದರ ಸಿಸಿಟಿವಿಯಲ್ಲಿ ದೃಶ್ಯ ಸೆರೆಯಾಗಿದ್ದು, ಕಾರಿನ ನಂಬರ್ ಪತ್ತೆಯಾಗಿದೆ. ಅಪಘಾತದಲ್ಲಿ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಮತ್ತೋರ್ವ ಆಸ್ಪತ್ರೆಯಲ್ಲಿ ಅಸುನೀಗಿದ ಎಂದು ಪೊಲೀಸರು ತಿಳಿಸಿದ್ದಾರೆ.

ಬೇಗೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿ ಉರುಳಿದ ಕಾರು

ಬೇಗೂರು(ಗುಂಡ್ಲುಪೇಟೆ), ಜು.6– ಸಮೀಪದ ತ್ರಿಪುರ ಸುಂದರಿ ಕಲ್ಯಾಣ ಮಂಟಪದ ಬಳಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕಕ್ಕೆ ಜಾರಿ ಜಖಂಗೊಂಡಿರುವ ಘಟನೆ ನಡೆದಿದೆ.

ತಮಿಳುನಾಡಿನಿಂದ ಮೈಸೂರಿನ ಕಡೆ ತೆರಳುತ್ತಿದ್ದ ಕಾರು ಬೇಗೂರು ಸಮೀಪದ ಕಲ್ಯಾಣ ಮಂಟಪದ ಬಳಿ ವೇಗವಾಗಿ ಬಂದ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕಕ್ಕೆ ಜಾರಿದೆ.

ಕಾರಿನಲ್ಲಿದ್ದ ಐವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡು ದಟ್ಟಣೆ ಉಂಟಾಗಿತ್ತು. ಕೂಡಲೇ ಸ್ಥಳಕ್ಕೆ ಧಾವಿಸಿದ ಬೇಗೂರು ಪೊಲೀಸರು ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಕಾರನ್ನು ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಬೇಗೂರು ಸಮೀಪದ ತ್ರಿಪುರ ಸುಂದರಿ ಕಲ್ಯಾಣ ಮಂಟಪದ ಬಳಿ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕಕ್ಕೆ ಉರುಳಿ ಬಿದಿರುವುದು.

ಡಾ.ಬಾಬೂಜಿ ಜೀವನ ಸಾಧನೆ ಸ್ಮರಣೆ ಅಗತ್ಯ

ಚಾಮರಾಜನಗರ, ಜು.6– ಶೋಷಿತ ಸಮುದಾಯದಲ್ಲಿ ಹುಟ್ಟಿ ಸಮಾಜದ ಎಲ್ಲಾ ವರ್ಗಗಳ ಉದ್ಧಾರಕ್ಕಾಗಿ ದುಡಿದ ಡಾ. ಬಾಬು ಜಗಜೀವನ್ ರಾಮ್ ಅವರ ಜೀವನ ಸಾಧನೆಗಳನ್ನು ಸ್ಮರಿಸುವುದು ಅಗತ್ಯವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಭಾರತದ ಉಪಪ್ರಧಾನಿ, ಹಸಿರುಕ್ರಾಂತಿಯ ಹರಿಕಾರ 'ಡಾ. ಬಾಬು ಜಗಜೀವನ್ ರಾಮ್ ಅವರ 38ನೇ ಪುಣ್ಯಸ್ಮರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ. ಬಾಬು ಜಗಜೀವನ್ ರಾಮ್ ಅವರು ಒಂದೇ ವರ್ಗಕ್ಕೆ ಸೀಮಿತರಾದವರಲ್ಲ. ಬಡವರು, ಶೋಷಿತರು, ದೀನದಲಿತರು ಸೇರಿದಂತೆ ಎಲ್ಲರ ಶ್ರೇಯೋಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದ ಮಹಾನ್ ಸಮಾಜ ಸುಧಾರಕರು ಆಗಿದ್ದಾರೆ. ಸ್ವಾತಂತ್ರ ಹೋರಾಟಗಾರರಾಗಿದ್ದ ಬಾಬೂಜಿಯವರು 78 ವರ್ಷಗಳ ಜೀವಿತಾವಧಿಯಲ್ಲಿ 50 ವರ್ಷಗಳನ್ನು ರಾಜಕಾರಣದಲ್ಲೇ ಕಳೆದು ಅನೇಕ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದರು ಎಂದರು.



ಬಾಬೂಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುತ್ತಿರುವ ಗಣ್ಯರು.

ತುರ್ತು ಪರಿಸ್ಥಿತಿ ಘೋಷಣೆಯಾದ ಸಂದರ್ಭದಲ್ಲಿ ಆಡಳಿತದ ಚುಕ್ಕಾಣಿ ಹಿಡಿದು ದೇಶವನ್ನು ಮುನ್ನಡೆಸಿದ ಕೀರ್ತಿ ಬಾಬೂಜಿಯವರಿಗೆ ಸಲ್ಲುತ್ತದೆ. ಆಹಾರ ಅಭಾವ ಉಂಟಾದಾಗ ಇತರೆ ದೇಶಗಳ ಆಹಾರ ಪರಿಸ್ಥಿತಿಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ಭಾರತ ಆಹಾರ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ನೆರವಾದರು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ತಿಳಿಸಿದರು. ಮುಖಂಡರಾದ ಅರಕಲವಾಡಿ ನಾಗೇಂದ್ರ, ಜವರಯ್ಯ ಮಾತನಾಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಉಪ ಕಾರ್ಯದರ್ಶಿ ಪಿ. ಲಕ್ಷ್ಮೀ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜು, ತಾಲೂಕು ಸಮಾಜ ಕಲ್ಯಾಣಾಧಿಕಾರಿ ನಂಜುಂಡೇಗೌಡ, ವಿವಿಧ ಇಲಾಖೆ ಅಧಿಕಾರಿಗಳು, ಸಮಾಜದ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆರಂಭದಲ್ಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ಡಾ. ಬಾಬು ಜಗಜೀವನ್ ರಾಮ್ ಅವರ ಪುಣ್ಯಸ್ಮರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಾಬೂಜೀಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜು.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಕಾಗಲವಾಡಿ ಶಾಖಾ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜು.7ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಚಂದಕವಾಡಿ, ಹೆಬ್ಬಸೂರು, ಅರಳೀಪುರ. ಬಸಪ್ಪನಪಾಳ್ಯ, ಸರಗೂರು, ಹುರಳಿನಂಜನಪುರ, ಕಾಗಲವಾಡಿ, ಲಿಂಗರಾಜಪುರ, ಕರಿಯನಕಟ್ಟೆ, ಸರಗೂರು ಮೋಳೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಸಣಾಪುರದ ಸ್ಮಶಾನ ಜಾಗ ಒತ್ತುವರಿ: ಗ್ರಾಮಸ್ಥರಿಂದ ಪ್ರತಿಭಟನೆ

ಯಳಂದೂರು, ಜು.6– ಸಮೀಪದ ಮಸಣಾಪುರ ಗ್ರಾಮದಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಉಪ್ಪಾರ, ನಾಯಕ ಜನಾಂಗಕ್ಕೆ ಸೇರಿದ ಸ್ಮಶಾನದ ಜಾಗವನ್ನು ಒತ್ತುವರಿ ಮಾಡಿಕೊಂಡು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಗ್ರಾಮದ ಉಪ್ಪಾರ, ನಾಯಕ ಜನಾಂಗದವರು ಜಾಗದ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

ಕಾವೇರಿ ನೀರಾವರಿ ನಿಗಮಕ್ಕೆ ಸೇರಿದ ಈ ಸ್ಥಳವನ್ನು ಉಪ್ಪಾರ ಹಾಗೂ ನಾಯಕ ಜನಾಂಗದ ಸ್ಮಶಾನಕ್ಕೆ ನೀಡಬೇಕು. ಈ ಸಮುದಾಯದ ಜನರು ಒಂದೂವರೆ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಹಿಂದೆ ಗಂಗವಾಡಿ ರಸ್ತೆಯಲ್ಲಿದ್ದ ಸ್ಮಶಾನ ಹಳ್ಳದಲ್ಲಿದ್ದು, ಇದರಲ್ಲಿ ನೀರು ತುಂಬುವುದರಿಂದ ತೊಂದರೆಯಾಗುತ್ತದೆ. ಹಾಗಾಗಿ ಇಲ್ಲಿ ಅಂತ್ಯಸಂಸ್ಕಾರ ಮಾಡಲು ಅವಕಾಶ ನೀಡಬೇಕು ಎಂದು ಇಲಾಖೆಯ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಮನವಿ ಮಾಡಿಕೊಂಡು, ಇಲ್ಲಿ ಅನೇಕ ವರ್ಷಗಳಿಂದಲೂ ಅಂತ್ಯಸಂಸ್ಕಾರ ಮಾಡಿಕೊಂಡು ಬರಲಾಗುತ್ತಿತ್ತು.

ಈ ಹಿಂದೆ ಈ ಜಮೀನು ಇರುವ ಸ್ಥಳವನ್ನು ಸರ್ವೆ ಇಲಾಖೆಯ ಅಧಿಕಾರಿಗಳು ಸರ್ವೆ ಮಾಡಿ ಕಲ್ಲನ್ನು ನೆಟ್ಟಿದ್ದರು. ಆದರೆ ಈಗ ಈ ಜಮೀನಿನ ಪಕ್ಕದಲ್ಲಿರುವ ಖಾಸಗಿ ವ್ಯಕ್ತಿಯೊಬ್ಬರು ಆ ಕಲ್ಲನ್ನು ಕಿತ್ತು ಹಾಕಿ ಇಲ್ಲಿ ವ್ಯವಸಾಯ ಮಾಡಲು ಜಮೀನು ಉಳುಮೆ ಮಾಡಿಕೊಂಡಿದ್ದಾರೆ. ಇದು ನನಗೆ ಸೇರಿದ ಜಮೀನಾಗಿದೆ, ಇಲ್ಲಿ ಯಾವುದೇ ಅಂತ್ಯಸಂಸ್ಕಾರ ಮಾಡಬಾರದು ಎಂದು ವಿನಾಕಾರಣ ತೊಂದರೆ ನೀಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಪಾದಿಸಿದರು.

ಇದು ಸರ್ಕಾರಿ ಜಮೀನಾಗಿದ್ದು ನಮ್ಮ ಜನಾಂಗದ ಸ್ಮಶಾನವಾಗಿದೆ. ಇಲ್ಲಿ ಅನೇಕರ ಅಂತ್ಯಕ್ರಿಯೆಯನ್ನು ಮಾಡಲಾಗಿದೆ. ಆದರೆ ಈ ವ್ಯಕ್ತಿ ರಸ್ತೆ ಬದಿಯಲ್ಲಿರುವ ಫಲವತ್ತಾದ ಜಮೀನನ್ನು ಕಬಳಿಸಿಕೊಳ್ಳಲು ಹುನ್ನಾರ ನಡೆಸುತ್ತಿದ್ದಾರೆ. ಹಾಗಾಗಿ ನಮಗೆ ಸೇರಿರುವ ಜಮೀನನ್ನು ಮತ್ತೆ ನಮಗೆ ವಾಪಸ್ಸು ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿ, ಪ್ರತಿಭಟಿಸಿ ಗ್ರಾಮ ಲೆಕ್ಕಾಧಿಕಾರಿ ರಾಜೇಂದ್ರರವರಿಗೆ ಮನವಿ ಪತ್ರ ಸಲ್ಲಿಸಿದರು.

■ ಮಿರ್ಲೆ ಚಂದ್ರಶೇಖರ
ಮೊ:9916129654

ಕಬ್ಬನ್ ಪಾರ್ಕ್, ಲಾಲ್‌ಬಾಗ್‌ಗೆ ಸರಿಸಾಟಿ ಈ ನಮ್ಮ

ಲಿಂಗಾಂಬುಧಿ ಕೆರೆ ಉದ್ಯಾನವನ



ಹಿತ್ತಲ ಗಿಡ ಮದ್ದಲ್ಲ ಎನ್ನುವ ಗಾದೆ ಮಾತಿದೆ, ಅಂದರೆ ಮನೆಯ ಹಿತ್ತಲಲ್ಲಿ ಬೆಳೆದ ಗಿಡಕ್ಕೆ ಔಷಧೀಯ ಗುಣ ಇದ್ದರೂ ಅದರ ಬಗ್ಗೆ ಪರಿವೆ ಇಲ್ಲ. ಹಾಗೆಯೇ ಅಕ್ಕಪಕ್ಕದಲ್ಲಿಯೇ ಇರುವ ಪ್ರವಾಸಿತಾಣಗಳನ್ನು ನೋಡದೆ ದೂರದಲ್ಲೆಲ್ಲೋ ಇರುವ ಸ್ಥಳಗಳಿಗೆ ಹಣ ಮತ್ತು ಸಮಯ ಎರಡನ್ನೂ ವ್ಯಯಿಸಿ ಹೋಗುವುದು ವಾಡಿಕೆ. ನಿಮಗೊಂದು ಪ್ರಶ್ನೆ; ನೀವು ಮೈಸೂರಿನವರೇ ಆಗಿದ್ದು ಎಷ್ಟು ಬಾರಿ ಚಾಮುಂಡಿಬೆಟ್ಟಕ್ಕೆ, ಮೃಗಾಲಯಕ್ಕೆ ಹೋಗಿದ್ದೀರಿ?, ಅದೂ ಬೇಡ ಜಂಬೂಸವಾರಿಗೆ ಹೋಗಿರುವಿರಾ?, ಮನೆಯಲ್ಲೇ ಕುಳಿತು ಟಿವಿಗಳಲ್ಲಿ ನೋಡುತ್ತೇವೆ. ಇವುಗಳನ್ನು ನೋಡಿ ಆನಂದಿಸಲು ದೇಶದ ನಾನಾ ಮೂಲೆಗಳಿಂದ ಪ್ರವಾಸಿಗರು ಬರುತ್ತಾರೆ. ಆದರೆ ಇವುಗಳೆಲ್ಲಾ ಮೈಸೂರಿಗರಿಗೆ ಹಿತ್ತಲ ಗಿಡವಲ್ಲವೆ.

ಇಂತಹದ್ದೇ ಮತ್ತೊಂದು ಹಿತ್ತಲ ಗಿಡವನ್ನು ಮೈಸೂರಿಗನಾದ ನಾನು ನನ್ನ ಹಿರಿಯ ನಾಗರಿಕ ಸ್ನೇಹಿತರೊಟ್ಟಿಗೆ ಭೇಟಿ ಕೊಟ್ಟು ಅಲ್ಲಿನ ಸೌಂದರ್ಯವನ್ನು ಕಣ್ತುಂಬಿಕೊಂಡು ಬಂದಿದ್ದೇನೆ. ನಿಜಕ್ಕೂ ಮೈಸೂರಿನ ನಾಗರಿಕರು ಒಮ್ಮೆ ಅಲ್ಲ ಆಗಾಗ ಭೇಟಿ ನೀಡಲೇಬೇಕಿರುವ, ವಾಯುವಿಹಾರಿಗಳಿಗೆ ಪ್ರಶಸ್ತವಾದ ಸ್ಥಳವಿದು. ಅದುವೇ ಲಿಂಗಾಂಬುಧಿ ಕೆರೆ ಹಾಗೂ ಕೆರೆಗೆ ಹೊಂದಿಕೊಂಡಂತೆ ಅಭಿವೃದ್ಧಿಪಡಿಸಿರುವ ತೋಟಗಾರಿಕೆ ಇಲಾಖೆಯ ಸಸ್ಯಶಾಸ್ತ್ರೀಯ ತೋಟ ಮತ್ತು ಅರಣ್ಯ ಇಲಾಖೆಯು ಕೃತಕವಾಗಿ ಬೆಳೆಸಿರುವ ಮರಗಳ ಕಾಡು.

ನಾವು ಒಟ್ಟು ಏಳು ಜನ ಸ್ನೇಹಿತರು (ಎಲ್ಲರೂ ಹಿರಿಯ ನಾಗರಿಕರೆ) ಅನಿರೀಕ್ಷಿತವಾಗಿ ಈ ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿನ ಅಭಿವೃದ್ಧಿಯನ್ನು ಕಂಡು ಆಶ್ಚರ್ಯಗೊಂಡೆವು. ಬೆಂಗಳೂರಿನಲ್ಲಿ ಇರುವ 197 ಎಕರೆ ವಿಸ್ತೀರ್ಣವುಳ್ಳ **ಕಬ್ಬನ್ ಪಾರ್ಕ್** ಹಾಗೂ 240 ಎಕರೆ ವಿಸ್ತೀರ್ಣವುಳ್ಳ **ಲಾಲ್‌ಬಾಗ್ ಸಸ್ಯೋದ್ಯಾನವನ**ಗಳಿಗೆ ಸರಿಸಾಟಿಯಾಗಿ ಲಿಂಗಾಂಬುಧಿ ಕೆರೆಯ ಪಕ್ಕದ ಜಾಗವನ್ನು ಸರ್ಕಾರಿ ಇಲಾಖೆಗಳು ಅಭಿವೃದ್ಧಿಪಡಿಸಿರುವುದು ಶ್ಲಾಘನೀಯ. ನೋಡಲು ಪ್ರವೇಶ ದರ ಇಲ್ಲದಿರುವುದರಿಂದ ಉಚಿತವಾಗಿ ವಾಯು ವಿಹಾರದೊಂದಿಗೆ ಕಾಲಕಳೆಯಬಹುದು.

ಜಾಗಿಂಗ್ ಟ್ರ್ಯಾಕ್ ಇರುವ 85 ಎಕರೆ ಕಾಡು ಪ್ರದೇಶಕ್ಕೆ ಬೆಳಿಗ್ಗೆ ಮತ್ತು ಸಂಜೆ ಮಾತ್ರ ಪ್ರವೇಶವಿದ್ದು, ವಾಯುವಿಹಾರಿಗಳಿಗೆ ಸದ್ಯಕ್ಕೆ ಮೈಸೂರಿಗೇ ಇದೊಂದು ಉತ್ತಮ ಜಾಗ, ಅದರೊಳಗಿನ ಮಣ್ಣಿನ ರಸ್ತೆಯಲ್ಲಿ ಹೆಜ್ಜೆ ಹಾಕುತ್ತಿದ್ದರೆ ಯಾವುದೋ ದಟ್ಟಾರಣ್ಯದಲ್ಲಿ ನಡೆಯುವ ಅನುಭವ ಆಗುವುದು. ನೂರಾರು ಜಾತಿಯ ಲೆಕ್ಕವಿಲ್ಲದಷ್ಟು ಮರಗಳನ್ನು ಬೆಳೆಸಿದ್ದಾರೆ. ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಿರುವುದು ವಿಶೇಷ. ಕಾಡಿದ್ದರೂ ಕಸಕಡ್ಡಿಗಳು ಮಣ್ಣಿನ ರಸ್ತೆಯ ಮೇಲೆ ಕಾಣಸಿಗದು.

ಒಬ್ಬ ಅಧಿಕಾರಿ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಲಿಕ್ಕೆ ಸಾಧ್ಯ ಎಂಬುದನ್ನು ಕಳೆದ ಕೆಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ತೋಟಗಾರಿಕೆ ಅಧಿಕಾರಿಯವರಾದ ವಿನಯ್ ಜ್ವಲಂತ ನಿದರ್ಶನ. ನಾಲ್ಕು ವರ್ಷಗಳ ಹಿಂದೆ ಭೇಟಿ ನೀಡಿದ್ದಾಗ ಪೊದೆಗಳಿಂದ ಆವೃತವಾಗಿದ್ದ ಬಯಲು ಪ್ರದೇಶ ಇಂದು ಅತ್ಯದ್ಭುತವಾಗಿ ಅಭಿವೃದ್ಧಿಗೊಂಡಿದೆಯೆಂದರೆ ಅದರ ಹಿಂದಿನ ಶ್ರಮ ವಿನಯ್ ಹಾಗೂ ಪ್ರೋತ್ಸಾಹಿಸುತ್ತಿರುವ ಅವರ ಮೇಲಾಧಿಕಾರಿಗಳದ್ದು. ಮೈಸೂರು ನಗರದ ರಾಮಕೃಷ್ಣನಗರ ಬಡಾವಣೆಗೆ ಹೊಂದಿಕೊಂಡಿರುವ ಲಿಂಗಾಂಬುಧಿ ಪಾಳ್ಯದ "ಲಿಂಗಾಂಬುಧಿ ಸಸ್ಯಶಾಸ್ತ್ರೀಯ ತೋಟ"ವು 15 ಎಕರೆ ವಿಸ್ತೀರ್ಣ ಹೊಂದಿರುವ ಒಂದು ಸುಂದರ ತಾಣ. ಇದರ ಸೌಂದರ್ಯವು ಕಾವ್ಯಗಳ ವರ್ಣನೆಯಲ್ಲಿ ಇರುವ ಹಾಗೆ ಸ್ವರ್ಗದಂತಿದೆ. ಮೈಸೂರು ಸ್ವಚ್ಛ ನಗರಿ ಎನಿಸಿಕೊಳ್ಳಲು ಇದರ ಕೊಡುಗೆ ಅಪಾರ. ಮೈಸೂರೆಂದರೆ ಮೈಸೂರು ದಸರಾ, ಚಿತ್ರಕಲೆ, ಮೈಸೂರು ಪಾಕ್, ಮೈಸೂರು ಮಸಾಲೆ ದೋಸೆ, ಶ್ರೀಗಂಧ, ಮೈಸೂರು ರೇಷ್ಮೆ ಸೀರೆ, ಮಲ್ಲಿಗೆ ಹೂವು, ವಿಳ್ಯೇದೆಲೆ ಮತ್ತು ನಂಜನಗೂಡಿನ ರಸಬಾಳೆ ಮುಂತಾದವುಗಳಿಗೆ ಹೆಸರುವಾಸಿಯಾಗಿದೆ, ಇದರ ಜೊತೆಗೆ ನಿವೃತ್ತರ ಸ್ವರ್ಗವಾಗಿರುವುದು ಇಲ್ಲಿರುವ ಸುಂದರ ಉದ್ಯಾನವನಗಳಿಂದ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಮೈಸೂರಿನ ಕೆಲವು ಭಾಗಗಳನ್ನು ಉದ್ಯಾನವನಗಳಿಗಾಗಿ ಮೀಸಲಿಡಲಾಯಿತು ಹಾಗೂ ನಂತರದ ದಿನಗಳಲ್ಲಿ ಹೆಚ್ಚು ಹೆಚ್ಚು ಅಭಿವೃದ್ಧಿಪಡಿಸಲಾಯಿತು. ಲಿಂಗಾಂಬುಧಿ ಸಸ್ಯ ಶಾಸ್ತ್ರೀಯ ತೋಟವು ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿರುವ ವಾಕಿಂಗ್ ಟ್ರ್ಯಾಕ್ ಪಕ್ಕದಲ್ಲಿದೆ.



ಹಿಂದಿನ ಮೈಸೂರು ಸಂಸ್ಥಾನದ ಆಡಳಿತಗಾರರ ದೂರದೃಷ್ಟಿ ಹಾಗೂ ಔದಾರ್ಯದ ಫಲವಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಉದ್ಯಾನವನಕ್ಕಾಗಿ ವಿಸ್ತಾರವಾದ ಜಮೀನುಗಳನ್ನು ಮೀಸಲಿಟ್ಟರು, ಅದರ ಪರಿಣಾಮ ನಾವಿಂದು ನೋಡುತ್ತಿರುವ ಕಬ್ಬನ್ ಪಾರ್ಕ್, ಲಾಲ್‌ಬಾಗ್, ಲಿಂಗಾಂಬುಧಿ ಪಾರ್ಕ್ ಹಾಗೂ ನಗರಗಳ ಹೃದಯ ಬಾಗಗಲ್ಲಿ ಇರುವ ಸಣ್ಣಪುಟ್ಟ ಪಾರ್ಕ್‌ಗಳು.

1828ರಲ್ಲಿ ಮಹಾರಾಣಿ ಕೃಷ್ಣ ವಿಲಾಸ ಲಿಂಗಾಜಮ್ಮಣ್ಣಿ ಅವರ ನೆನಪಿಗಾಗಿ ಲಿಂಗಾಂಬುಧಿ ಕೆರೆಯನ್ನು ರಾಜರ್ಷಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಕಟ್ಟಿಸಿದರೆಂದು, ಇದು 250 ಎಕರೆ ವಿಸ್ತೀರ್ಣವನ್ನು ಹೊಂದಿರುವುದಾಗಿ ದಾಖಲೆ ಹೇಳುತ್ತದೆ. ಇದರಲ್ಲಿ 150 ಎಕರೆ ಪ್ರದೇಶವು ಕೆರೆಯ ನೀರಿನಿಂದ ಆವೃತವಾದರೆ ಉಳಿದ 100 ಎಕರೆ ಭೂಪ್ರದೇಶವನ್ನು ಮೀಸಲು ಅರಣ್ಯವೆಂದು ಘೋಷಿಸಲಾಗಿದೆ. ಈ ನೈಸರ್ಗಿಕ ಜಲಮೂಲಕ್ಕೆ ಹೊಂದಿಕೊಂಡಂತೆ ತೋಟಗಾರಿಕೆ ಇಲಾಖೆಯು 15 ಎಕರೆ ಪ್ರದೇಶದಲ್ಲಿ ಸುಂದರವಾದ ಸಸ್ಯಶಾಸ್ತ್ರೀಯ ತೋಟವನ್ನು ಅಭಿವೃದ್ಧಿಪಡಿಸಿ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿಕೊಂಡು ಬರುತ್ತಿದೆ.

ಇಲ್ಲಿ 290 ಕ್ಕೂ ಹೆಚ್ಚು ವಿವಿಧ ಸಸ್ಯ ಪ್ರಭೇದಗಳ ಗಿಡಗಳನ್ನು ಬೆಳೆಸಿದ್ದು, ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳ ಸಂಗ್ರಹ, ಸಂರಕ್ಷಣೆ, ಅಭಿವೃದ್ಧಿ ಹಾಗೂ ಅವುಗಳ ಪ್ರದರ್ಶನವನ್ನು ಮಾಡಿಕೊಂಡು ಬರುತ್ತಿದೆ. ಸಂಶೋಧಕರು ಹಾಗೂ ಸಸ್ಯ ಶಾಸ್ತ್ರೀಯ ವಿದ್ಯಾರ್ಥಿಗಳ ಕಲಿಕೆಗೆ ಶೈಕ್ಷಣಿಕ ತಾಣವಾಗಿದೆ, ಇದೇ ವಿಷಯದ ಡಿಪ್ಲೊಮಾ ಮತ್ತು ಪದವಿ ಕೋರ್ಸ್‌ಗಳ ಕಾಲೇಜನ್ನು ತೆರೆಯಲು ಉತ್ತಮ ಸ್ಥಳವಾಗಿದೆ.

ಈ ಪುಟ್ಟ ಪ್ರಪಂಚದಲ್ಲಿ ಔಷಧೀಯ ಮತ್ತು ಸುಗಂಧ ಸಸ್ಯಗಳ ಉದ್ಯಾನವನ, ಗುಲಾಬಿ ಉದ್ಯಾನವನ, ಟೋಪಿಯರಿ ಉದ್ಯಾನವನ, ಚಿಟ್ಟೆ ಉದ್ಯಾನವನ, ಬಿದಿರಿನ ಬ್ಲಾಕ್, ಫೈಕಸ್ ಬ್ಲಾಕ್, ಬಂಡೆಕಲ್ಲಿನ ರಾಕರಿ, ಅರ್ಬೊರೇಟಮ್, ಪಾಮಾಟಮ್, ಹಣ್ಣಿನ ಮರಗಳ ಉದ್ಯಾನವನ, ಪಕ್ಷಿಗಳನ್ನು ಆಕರ್ಷಿಸಲು ಉತ್ತಮವಾಗಿ ನಿರ್ವಹಿಸಲಾಗಿರುವ ತಾವರೆ ಕೊಳಗಳು ಸಹ ಇವೆ.

ಚಾಮುಂಡಿಬೆಟ್ಟದಂತೆ ಲಿಂಗಾಂಬುಧಿ ಅರಣ್ಯ ಪ್ರದೇಶವೂ ಕೂಡ ನಗರದ ಶ್ವಾಸಕೋಶದಂತೆ ಹಸಿರು ಹೊದಿಕೆಯೂ ಕೆರೆಯನ್ನು ಒಳಗೊಂಡಂತೆ 250 ಎಕರೆ ವಿಸ್ತೀರ್ಣವನ್ನು ಆವರಿಸಿಕೊಂಡಿದೆ, ಪ್ರಕೃತಿಯ ಸುಂದರ ನೋಟವನ್ನು ಎತ್ತರದ ಸ್ಕೈ ವಾಚರ್ ಮೇಲೆ ನೋಡುತ್ತಿದ್ದರೇ ಕಳೆದುಹೋಗುವುದು ಗ್ಯಾರಂಟಿ.

ಕೆರೆಯಲ್ಲಿ ಈಜುವ ವಿವಿಧ ಜಾತಿಯ ಕೊಕ್ಕರೆ ಹಾಗೂ ಪಕ್ಷಿಗಳು ಮುಳುಮುಳುಗಿ ಮೀನುಗಳನ್ನು ಬೇಟೆಯಾಡಿ ತಿನ್ನುವುದು, ಸಾಲುಸಾಲು ಹಾರುವ ಪಕ್ಷಿಗಳ ಹಿಂಡು, ಮರದ ಮೇಲೆ ಕುಳಿತು ಚಿಲಿಪಿಲಿಗುಟ್ಟುವ ಹಕ್ಕಿಗಳು, ಅಲ್ಲಲ್ಲಿ ನೇತಾಡುವ ಅವುಗಳ ಗೂಡುಗಳು, ವನದ ಪೂರ ನವಿಲುಗಳು ಗರಿಬಿಚ್ಚಿ ನೃತ್ಯ ಮಾಡುವ ದೃಶ್ಯಗಳು ನೋಡುಗರಿಗೆ ಅದ್ಭುತ ದೃಶ್ಯಕಾವ್ಯವನ್ನು ಕಟ್ಟಿಕೊಡುತ್ತದೆ.

ಚಿಟ್ಟೆಗಳ ಸಂರಕ್ಷಣೆಗಾಗಿ ವಿಶೇಷ ಒತ್ತು ಕೊಡಲಾಗಿದೆ ದೇಶದಲ್ಲಿ ಇರುವ 1300 ಚಿಟ್ಟೆ ಪ್ರಭೇದಗಳಲ್ಲಿ 100 ಕ್ಕೂ ಹೆಚ್ಚು ಪ್ರಭೇದಗಳು ಅಳಿವಿನಂಚಿನಲ್ಲಿವೆ, ಕೀಟನಾಶಕಗಳ ಅತಿಯಾದ ಬಳಕೆಯಿಂದಾಗಿ ಅವನತಿ ಹೊಂದುತ್ತಿವೆ, ಸಂರಕ್ಷಣೆಯ ದೃಷ್ಟಿಯಿಂದ ಚಿಟ್ಟೆ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗಿದೆ, ಚಿಟ್ಟೆಗಳು ಇಷ್ಟಪಡುವ 34 ರೀತಿಯ ಸಸ್ಯಗಳನ್ನು ಮತ್ತು ಹೂವುಗಳನ್ನು ಬೆಳೆಸಿದ್ದಾರೆ, ಈ ಪ್ರದೇಶದಲ್ಲಿ ನಾವು ತಿಳಿಯದ, ನೋಡದಿರದ ಹಲವಾರು ಜಾತಿಯ ಬಣ್ಣಬಣ್ಣದ ಚಿಟ್ಟೆಗಳು ಮಕರಂದ ಹೀರುತ್ತಾ ಹೂವುಗಳ ಮೇಲೆ ಕುಳಿತಿರುತ್ತವೆ ಇಲ್ಲವೆ ಆಕರ್ಷಕವಾಗಿ ಹಾರಾಡುತ್ತಿರುತ್ತವೆ, ಇವುಗಳನ್ನು ನೋಡುವುದಕ್ಕೆ ಕಣ್ಣುಗಳಿಗೆ ಮಹಾದಾನಂದ. ಇದೇ ರೀತಿಯಾಗಿ 80 ವಿವಿಧ ಬಗೆಯ ಗುಲಾಬಿ ತಳಿಗಳ ಗಿಡಗಳನ್ನು ಗುಲಾಬಿ ಪಾರ್ಕ್‌ನಲ್ಲಿ ಬೆಳೆಸಿದ್ದಾರೆ. ಅಲ್ಲಿನ ಸಿಬ್ಬಂದಿ ಉದ್ಯಾನವನದ ಬಗ್ಗೆ ಸಮಗ್ರವಾದ ಮಾಹಿತಿಯನ್ನು ವಿವರಿಸಿ ಹೇಳುತ್ತಾರೆ.

ಮೊದಲು ಭೇಟಿ ನೀಡಿದ ಕ್ಷಣವೇ ನಾವು ನಿರ್ಧರಿಸಿದೆವು. ವಾರಕ್ಕೊಮ್ಮೆಯಾದರೂ ಇಲ್ಲಿಗೆ ಭೇಟಿ ನೀಡುವುದಾಗಿ. ಸಮೀಪದ ಬಡಾವಣೆಗಳ ವಾಸಿಗಳು ನಿತ್ಯವೂ ವಾಯುವಿಹಾರಕ್ಕೆ ಬರುವುದಕ್ಕೆ ಸೂಕ್ತವಾದ ಸ್ಥಳ. ಆದರೂ ಯಾಕೋ ಸಾಕಷ್ಟು ಜನರು ಇಲ್ಲದಿರುವುದು ಬೇಸರವೆನಿಸಿತು. ಸಸ್ಯೋದ್ಯಾನವನದಲ್ಲಂತೂ ನಾವುಗಳು ಏಳು ಜನರಷ್ಟೇ ಇದ್ದದ್ದು, ಪ್ರಾರಂಭದಲ್ಲಿ ಅದಕ್ಕೇ ಹೇಳಿದ್ದು 'ಹಿತ್ತಲ ಗಿಡ ಮದ್ದಲ' ಎಂಬುದಾಗಿ. ಲಿಂಗಾಂಬುಧಿ ಕೆರೆಯು ಕೆ.ಆರ್.ವೃತ್ತದಿಂದ ಕೇವಲ ಎಂಟು ಕಿಮೀ ದೂರದಲ್ಲಿ ಇದೆ.

ಮಕ್ಕಳ ಚಿತ್ರಕಥೆ

'ಎಡಗೈಯಲ್ಲಿ ಏಕೆ ಕೊಟ್ಟಿರಿ..?'

■ ಹೆಚ್.ಜಿ.ಎನ್.ಪ್ರಸಾದ್




ದಾನಶೂರ ಕರ್ಣ ಒಂದು ದಿನ ಸ್ನಾನಕ್ಕೆ ಹೋಗಲು ತಯಾರಿ ನಡೆಸಿದ್ದ. ಎಡಗೈಯಲ್ಲಿ ಎಣ್ಣೆಯಿದ್ದ ಬಂಗಾರದ ಬಟ್ಟಲು ಥಳ ಥಳ ಮಿಂಚುತಿತ್ತು. ಇದೇ ಸಂದರ್ಭದಲ್ಲಿ ಬಡ ಬ್ರಾಹ್ಮಣನೊಬ್ಬ ಬಂದ.




ಬ್ರಾಹ್ಮಣ ಬಂದ ವಿಷಯ ತಿಳಿದ ಕೂಡಲೆ ಕರ್ಣ ಇದ್ದ ಸ್ಥಿತಿಯಲ್ಲಿಯೇ ಹೊರಬಂದುಬಿಟ್ಟ. ಹೀಗೆ ಬಂದವನ ಬಳಿ ವಿನೀತನಾಗಿ ಮಾತನಾಡಿದ ಬ್ರಾಹ್ಮಣ,"ನಾನು ತುಂಬಾ ಸಂಕಷ್ಟದಲ್ಲಿದ್ದೇನೆ, ನನಗೆ ಏನಾದರೂ ನೆರವು ನೀಡಲು ಸಾಧ್ಯವೇ...?"ಎಂದು ಕೇಳಿದ.




ಬ್ರಾಹ್ಮಣನ ಮಾತು ಕೇಳಿದ ತಕ್ಷಣ ಕರ್ಣ, ತನ್ನ ಎಡಗೈಯಲ್ಲಿದ್ದ ಬಂಗಾರದ ಬಟ್ಟಲನ್ನು ಕೊಟ್ಟುಬಿಟ್ಟ. ಇದರಿಂದ ಸಂತೋಷಗೊಂಡ ಬ್ರಾಹ್ಮಣ,"ನೀವು ನಿಜಕ್ಕೂ ದೊಡ್ಡ ಮನುಷ್ಯರು...!" ಎಂದು ಹೊಗಳಿದ.




ಹಾಗೆ ಹೊಗಳುತ್ತಲೇ,"ನಾನೊಂದು ಪ್ರಶ್ನೆ ಕೇಳುತ್ತೇನೆ...ನೀವು ದಾನವಾಗಿ ನನಗೆ ಇಷ್ಟೊಂದು ಬೆಲೆಬಾಳುವ ಬಂಗಾರದ ಬಟ್ಟಲನ್ನು ಕೊಟ್ಟಿರಿ, ಆದರೆ ಅದನ್ನು ಬಲಗೈಯಲ್ಲಿ ಕೊಡದೆ ಎಡಗೈಯಲ್ಲಿ ಏಕೆ ಕೊಟ್ಟಿರಿ..? ಎಂದು ನನಗೆ ಅರ್ಥವಾಗಲಿಲ್ಲ...!" ಎಂದು ಕೇಳಿದ.



ಬ್ರಾಹ್ಮಣನ ಮಾತಿಗೆ ಕರ್ಣ,"ಅದಕ್ಕೂ ಕಾರಣವಿದೆ, ನನ್ನ ಎಡಗೈಯಲ್ಲಿದ್ದ ಬಂಗಾರದ ಬಟ್ಟಲನ್ನು ನಾನು ಮೊದಲು ನನ್ನ ಬಲಗೈಗೆ ತೆಗೆದುಕೊಂಡಿದ್ದರೆ, ಅಷ್ಟರಲ್ಲೇ ನನ್ನ ಮನಸ್ಸು ಇನ್ನೇನನ್ನೋ ಯೋಚಿಸುತ್ತಿತ್ತು... ಈ ಬಡ ಬ್ರಾಹ್ಮಣನಿಗೇಕೆ ಬಂಗಾರದ ಬಟ್ಟಲನ್ನೇಕೆ ಕೊಡಬೇಕು...? ಬೆಳ್ಳಿಯ ಬಟ್ಟಲನ್ನು ಕೊಟ್ಟರೆ ಸಾಕಲ್ಲವೇ...? ಎಂದುಕೊಳ್ಳಬಹುದಿತ್ತು. ಹಾಗೆ ಎರಡನೇ ಯೋಚನೆ ಮಾಡಲು ಮನಸ್ಸಿಗೆ ಅವಕಾಶ ಸಿಗುವುದಕ್ಕಿಂತ ಮುನ್ನ ದಾನದ ಕೆಲಸವನ್ನು ಮುಗಿಸಿಬಿಡಬೇಕು... ಇಲ್ಲದಿದ್ದರೆ ದಾನದ ಉದ್ದೇಶಕ್ಕೇ ಅವಮಾನವಾಗುತ್ತದೆ"



"ಹಾಗಂತಲೇ ನೀವು ಕೇಳಿದ ತಕ್ಷಣ ನನ್ನ ಎಡಗೈಯಲ್ಲಿದ್ದ ಬಂಗಾರದ ಬಟ್ಟಲನ್ನು ನಿಮಗೆ ಕೊಟ್ಟೆ....!"ಎಂದ. ಕರ್ಣನ ಮಾತು ಕೇಳಿದ ಬ್ರಾಹ್ಮಣ, "ನೀವು ನಿಜಕ್ಕೂ ಅಪೂರ್ವ ದಾನ ಶೂರ...!" ಎಂದು ಪ್ರಶಂಸಿಸಿ ಅಲ್ಲಿಂದ ಹೊರಟ.



ವಾರಭವಿಷ್ಯ

7.7.2024 ರಿಂದ 13.7.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ಕಟಕ, ಸಿಂಹ, ಕನ್ಯಾ ಕುಜ–ಮೇಷ, ವೃಷಭ, ಬುಧ–ಕಟಕ, ಗುರು–ವೃಷಭ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಅವಿಶ್ವಾಸ, ಭಯ, ಮನಃ ಚಂಚಲತೆಗಳು, ಬಂಧು ಜನರಲ್ಲಿ ವಿರೋಧಗಳು ಉಂಟಾಗುತ್ತವೆ. ವಾರ ಮಧ್ಯೆ ಗುರು ಕೃಪೆಯಿಂದ ವ್ಯಾಪಾರಗಳಲ್ಲಿ ಹೆಚ್ಚಿನ ಧನಲಾಭ ಮೃಷ್ಟಾನ್ನ ಭೋಜನ, ಪ್ರಿಯ ಕಾಮಿನಿಯ ಸಾಂಗತ್ಯ, ಆರೋಗ್ಯವನ್ನು ಪಡೆಯುವಿರಿ. ಶತ್ರುಗಳು ಹಿಂದೆಸರಿಯುವರು. ಪುಣ್ಯ ಕೆಲಸಗಳನ್ನು ಆಚರಿಸಿ ಜನಾನುರಾಗಕ್ಕೆ ಪಾತ್ರರಾಗುವಿರಿ.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ–5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೂ)

ವಾರದಾರಂಭಕ್ಕೆ ಧನ ಚಿಂತೆ. ಅಧಿಕಾರಿಗಳಲ್ಲಿ ಮನಸ್ತಾಪ. ರಾಜನಿಂದ, ಶತ್ರುಗಳಿಂದ ತೊಂದರೆ. ಅಪ್ರಾಮಾಣಿಕ ಕೆಲಸಗಳಿಂದ ತೊಂದರೆಗೆ ಗುರಿಯಾಗುವಿರಿ. ವಾರದ ಉತ್ತರಾರ್ಧಕ್ಕೆ ಸಂಪತ್ತು, ಗೌರವ, ವಸ್ತ್ರಗಳನ್ನು ಪಡೆಯುವಿರಿ. ಆಕಸ್ಮಿಕ ಘಟನಾವಳಿಗಳು ನಿಮಗೆ ಸಂತೋಷವನ್ನು ಉಂಟುಮಾಡುವುದು. ಬೆಳೆದು ನಿಂತ ಮಕ್ಕಳ ಚಲನ–ವಲನದ ಮೇಲೆ ನಿಗಾ ವಹಿಸಿ. ಉದರ ವ್ಯಾಧಿ ಕಾಡಬಹುದು.

ಶ್ರೀ ದುರ್ಗಾಪರಮೇಶ್ವರಿ ದರ್ಶನ. ಶುಭ ಸಂಖ್ಯೆ–8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಪೂರ್ವಾರ್ಧದಲ್ಲಿ ಕಾರ್ಯ ಕುಶಲತೆ, ಪ್ರಯತ್ನ ಕಾರ್ಯಗಳು ಯಶಸ್ವಿಯಾಗುವುದು. ಪುಸ್ತಕ ಪ್ರಕಾಶಕರಿಗೆ ಉತ್ತಮ ಆದಾಯವಿದೆ. ಸರ್ಕಾರಿ ನೌಕರರು ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಿದರೂ ಮೇಲಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾಗುವರು. ಅನಿರೀಕ್ಷಿತವಾಗಿ ಸ್ವಾಸ್ಥ್ಯ ಕೆಡಬಹುದು. ಖರ್ಚುಗಳೂ ಹೆಚ್ಚಾಗುವುದು. ರೇಸು, ಜೂಜುಗಳು ಕೈ ಹಿಡಿಯುವುದಿಲ್ಲ.

ಶ್ರೀರಾಮನಾಮ ಜಪ. ಶುಭ ಸಂಖ್ಯೆ–2

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ಶುಭ–ವಾರ್ತೆ ಬರುವುದರ ಜೊತೆಗೆ ಧನಾದಾಯವೂ ಚೆನ್ನಾಗಿ ಆಗಲಿದೆ. ಮನಸ್ಸು ಹರ್ಷಚಿತ್ತವಾಗಿರುವುದು. ದೈನಂದಿನ ಕೆಲಸಗಳನ್ನು ಆಸಕ್ತಿಯಿಂದ ನಿರ್ವಹಿಸುವಿರಿ. ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳದೆ ತಮ್ಮ ಗುರುಗಳ ಮೆಚ್ಚುಗೆಗೆ ಪಾತ್ರರಾಗುವರು. ಅಷ್ಟಮ ಶನಿ ಇರುವುದರಿಂದ ಮನೆಯಲ್ಲಿ ಕಲಹಗಳಾಗದಂತೆ ತಾಳ್ಮೆಯಿಂದ ವರ್ತಿಸುವುದು ಒಳ್ಳೆಯದು.

ಶ್ರೀ ಶನಿಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಕೈ ಕೆಸರಾದರೆ ಬಾಯಿ ಮೊಸರು' ಶ್ರಮ ಪಡದೆ ಯಾವುದೂ ದಕ್ಕದು. ನಿಮ್ಮ ಪ್ರಯತ್ನಗಳಿಗೆ ಸರಿಯಾದ ಗುರುವಿನ ಮಾರ್ಗದರ್ಶನದ ಅಗತ್ಯವಿದೆ. ವಾರ ಮಧ್ಯೆ ಅರಳೆ ವಸ್ತು ಹಾಗೂ ಕ್ಷೀರಜನ್ಯ ವಸ್ತು ವ್ಯವಹಾರಿಗಳಿಗೆ ಹೇರಳ ಧನಲಾಭವಾಗುವುದು. ಕಂಡಾಬಟ್ಟೆ ಖರ್ಚು ಮಾಡಿ ಜೇಬು ಖಾಲಿ ಮಾಡಿಕೊಳ್ಳುವಿರಿ. ಹಣದ ವಿಷಯಕ್ಕೆ ಸ್ನೇಹಿತರ ನಿಷ್ಠೂರ ಎದುರಿಸಬೇಕಾಗುವುದು. ಸಜ್ಜನರ ಸಹವಾಸ ಮಾಡಿ.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಾಳೆ ಮಾಡಬೇಕಾದ್ದನ್ನು ಇಂದೇ ಮಾಡಿ, ಗ್ರಹಗತಿಗಳು ಅನುಕೂಲವಾಗಿದೆ. ಬಹುಕಾಲದ ಇಷ್ಟ ಸಿದ್ಧಿಸಲು ಸುಸಮಯವಾಗಿದೆ. ಗೃಹ ಬಳಕೆಯ ದುಬಾರಿ ವಸ್ತುಗಳನ್ನು ಖರೀದಿಸುವಿರಿ. ಒಡವೆ, ನೂತನ ವಸ್ತ್ರ ಖರೀದಿಸುವುದರಿಂದ ಗೃಹಿಣಿಗೆ ಸಂತಸವಾಗುವುದು. ಪ್ರತಿಷ್ಠಿತ ವ್ಯಕ್ತಿಗಳ ಭೇಟಿಯಿಂದ ಹಲವು ಸಮಸ್ಯೆಗಳಿಗೆ ಪರಿಹಾರ ದೊರಕುವುದು. ರಾಹು–ಕೇತುಗಳು ಅಶುಭರಿದ್ದು ಆನ್‌ಲೈನ್ ಮೋಸದಿಂದ ಹಣ ಕಳೆದುಕೊಳ್ಳುವಿರಿ.

ಶ್ರೀ ವೆಂಕಟೇಶ್ವರಸ್ವಾಮಿ ದರ್ಶನ. ಶುಭ ಸಂಖ್ಯೆ–7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ಪ್ರೋಗ್ರಾಂಗಳೆಲ್ಲಾ ಉಲ್ಟಾ–ಪಲ್ಟ ಆಗಲು ಎರಡು ಪ್ರಮುಖ ಗ್ರಹಗಳಾದ ಗುರು–ಶನಿಯರು ದುಃಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಇದನ್ನು ಹೊರತುಪಡಿಸಿ ಕೆಲವೊಂದು ಸಂತಸವಿರುವ ಪ್ರಸಂಗಗಳು ನಡೆಯಲಿವೆ. ಮನೆಗೆ ಅತಿಥಿ, ಅಭ್ಯಾಗತರ ಆಗಮನ. ಸನ್ಮಾರ್ಗ ಬೋಧಿಸುವ ಗುರುಗಳ ಭೇಟಿಯಾಗುವುದು. ಶ್ರೀಮತಿಯ ಬಗ್ಗೆ ಮಧುರ ಭಾವನೆಯಿಂದ ವರ್ತಿಸಿ, ಅನ್ಯಥಾ ಗೃಹಶಾಂತಿಗೆ ಭಂಗವಾಗುವುದು.

ಶ್ರೀ ತ್ರಿಪುರ ಸುಂದರಿ ಉಪಾಸನೆ. ಶುಭ ಸಂಖ್ಯೆ–3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನೆರೆಹೊರೆಯಲ್ಲಿ ಸಮಯೋಚಿತ ಮಾತು ಹಾಗೂ ವರ್ತನೆಯಿಂದ ಹೃದಯವನ್ನು ಗೆಲ್ಲುವಿರಿ. ವಿದ್ಯಾರ್ಥಿಗಳ ಪ್ರತಿಭೆಗೆ ತಕ್ಕ ಪ್ರತಿಫಲ ದೊರೆಯುವುದು. ಬೃಹಸ್ಪತಿಯ ಕೃಪೆಯಿಂದ ಉದ್ಯೋಗ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ವಧು–ವರಾನ್ವೇಷಣೆ ಮುಂದುವರೆಯಲಿ. ವಾಹನ ರಿಪೇರಿಗೆ ಹಣ ವ್ಯಯವಾಗುವುದು. ರಾತ್ರಿ ಪ್ರಯಾಣಗಳನ್ನು ಅವಾಯ್ಡ್ ಮಾಡಿ.

ಶ್ರೀ ದೇವಿ ಪೂಜೆ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಪೂರ್ವಾರ್ಧದಲ್ಲಿ ವೃತ್ತಿ ಸ್ಥಳದಲ್ಲಿ ಸಹೋದ್ಯೋಗಿಗಳ ಸಹಕಾರ. ಬೃಹತ್ ಕೈಗಾರಿಕೆಗಳ ಉತ್ಪಾದನೆಯಲ್ಲಿ ಹೆಚ್ಚಳ. ಟ್ರಾವೆಲ್ ಏಜೆನ್ಸಿಯವರಿಗೆ ಬಂಪರ್ ಆದಾಯವಾಗಲಿದೆ. ಮೂಲ ನಕ್ಷತ್ರದವರು ಸಾಲ ಕೊಟ್ಟರೆ ವಾಪಸು ಬರುವುದು ಅನುಮಾನ. ನಿಮ್ಮ ಮಿತ್ರರು ನಿಮ್ಮ ಬಗ್ಗೆ ಅಪನಂಬಿಕೆ ತೋರುವರು. ರಾಜಕಾರಿಣಿಗಳು ಲೋಕಾಪವಾದಕ್ಕೆ ಗುರಿಯಾಗುವರು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರಪಠಿಸಿ. ಶುಭ ಸಂಖ್ಯೆ–4

ಮಕರ (ಬೊ.ಜ.ಜಿ.ಶಿ.ಖು.ಶೆ.ಶೊ.ಗ.ಗಿ.)

ಉದ್ಯೋಗ ಅರಸುತ್ತಿದ್ದರೆ ಸಫಲರಾಗುವಿರಿ. ಯಾವುದೇ ನೂತನ ವ್ಯಾಪಾರ ಆರಂಭಿಸಲು ಗುರುಬಲವಿದೆ. ಬ್ಯಾಂಕ್ ಸಾಲವೂ ದೊರೆಯಬಹುದು. ನಂಬಿಕಸ್ಥ ಹಿರಿಯರೊಬ್ಬರ ಸಹಾಯದಿಂದ ಮಹತ್ವದ ಯೋಜನೆ ಸಫಲವಾಗುವ ಸಾಧ್ಯತೆ. ಬಂಧು–ಬಾಂಧವರ ಮಿಲನ ನಿಮ್ಮನ್ನು ಪುಳಕಿತಗೊಳಿಸುತ್ತದೆ. ಪ್ರತಿಷ್ಠಿತ ವ್ಯಕ್ತಿಗಳ ಸಂಪರ್ಕದಿಂದ ಪ್ರಮುಖ ಕಾರ್ಯವೊಂದು ಸಿದ್ಧಿಸುವುದು. ಜಲಾಶಯಗಳ ಹತ್ತಿರ ಸಾಹಸ ಸಲ್ಲದು. ಓಂ ನಾರಾಯಣ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಾಡೇಸಾತಿಯ ದ್ವಿತೀಯ ಚರಣದಲ್ಲಿ ಸಾಗುತ್ತಿರುವಿರಿ. 'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ ಬಿಡು' ಎಂಬ ನಂಬಿಕೆಯೇ ನಿಮಗೆ ಶ್ರೀರಕ್ಷೆ. ಹಣಕಾಸಿನ ಪರಿಸ್ಥಿತಿ ತೃಪ್ತಿಕರವಾಗಿಯೇ ಇರುವುದು. ಹಳೆಯ ವಾಹನ ಮಾರಾಟ ಮಾಡುವ ಯೋಚನೆ ಇದ್ದರೆ ಮುಂದುವರೆಯಿರಿ. ನ್ಯಾಯಾಲಯದ ವಿಚಾರಗಳು ಕುಂಟುತ್ತಾ ಸಾಗುತ್ತವೆ. ವಾರಾಂತ್ಯಕ್ಕೆ ಮನೆ ಮಂದಿಯ ಜೊತೆ ಲಘು ಪ್ರವಾಸದ ಜೊತೆ ಪುಣ್ಯಕ್ಷೇತ್ರ ಭೇಟಿ.

ಶ್ರೀ ವಿಷ್ಣು ನಾಮಸ್ಮರಣೆ. ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಶುಭ ಸುದ್ದಿಯೊಂದು ಬರುವುದು. ಆರ್ಥಿಕ ಪರಿಸ್ಥಿತಿಯೂ ಸುಧಾರಿಸುವುದು. ನಿತ್ಯದ ಕೆಲಸ ಕಾರ್ಯಗಳಲ್ಲಿ ಮನೆಯವರ ಸಹಾಯಹಸ್ತ ದೊರಕುವುದು. ಶನಿ–ಗುರುಗಳು ಶುಭರಿಲ್ಲ. ನಿಮ್ಮ ಶಕ್ತಿ ಮೀರಿದ ಕೆಲಸಕ್ಕೆ ಕೈ ಹಾಕಿ ಕೈಸುಟ್ಟುಕೊಳ್ಳದಿರಿ. ಪುತ್ರರ ಜೊತೆ ಕಲಹಗಳು ಉಂಟಾಗುವುದು. ಅನವಶ್ಯಕ ಪ್ರಯಾಣಗಳು ಮುಳುವಾಗಬಹುದು. ಆರೋಗ್ಯ ಕೆಡುವ ಸಂಭವ. ವೈದ್ಯರ ಭೇಟಿ ಮಾಡಿ.

ಶ್ರೀ ದತ್ತಗುರು ನಾಮಸ್ಮರಣೆ. ಶುಭ ಸಂಖ್ಯೆ–1

ಬಾಬೂಜಿ ಪುಣ್ಯಸ್ಮರಣೆ ಕಾರ್ಯಕ್ರಮಕ್ಕೆ ಅಧಿಕಾರಿಗಳ ಗೈರು

ಮಾದಿಗ ಸಮುದಾಯದಿಂದ ಕಾರ್ಯಕ್ರಮ ಬಹಿಷ್ಕಾರ

ತಿ.ನರಸೀಪುರ, ಜು.6– ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಗೈರು ಹಾಜರಿಯಿಂದ ಕೆರಳಿದ ಮಾದಿಗ ಸಮುದಾಯದ ಮುಖಂಡರು ಬಾಬು ಜಗಜೀವನ್ ರಾಂ 38ನೇ ಪುಣ್ಯಸ್ಮರಣೆ ಕಾರ್ಯಕ್ರಮ ಬಹಿಷ್ಕರಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಬಾಬು ಜಗಜೀವನರಾಂ ಪುಣ್ಯಸ್ಮರಣೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಬಹುತೇಕ ಗೈರಾಗಿದ್ದರಿಂದ ಸಮುದಾಯದ ಮುಖಂಡರು ಅಧಿಕಾರಿಗಳ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಕಾರ್ಯಕ್ರಮಕ್ಕೆ ಯಾವೊಬ್ಬ ಅಧಿಕಾರಿಯೂ ಬಾರದೆ ಜಯಂತಿಗೆ ಅಗೌರವ ತೋರಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಕಾರ್ಯಕ್ರಮಕ್ಕೂ ಮೊದಲೇ ತಹಸೀಲ್ದಾರ್ ಹಾಜರಿರಬೇಕು. ಆದರೆ ಇಲ್ಲಿ ಯಾರೂ ಬಂದಿಲ್ಲ. 36 ಇಲಾಖೆ ಪೈಕಿ ಬೆರಳೆಣಿಕೆ ಅಧಿಕಾರಿಗಳು ಮಾತ್ರ ಹಾಜರಾಗಿದ್ದಾರೆ. ಅಂಬೇಡ್ಕರ್, ಬಸವ, ವಾಲ್ಮೀಕಿ, ಕನಕ ಜಯಂತಿ ಕಾರ್ಯಕ್ರಮಗಳಿಗೆ ಅಧಿಕಾರಿಗಳು ನಿರಂತರವಾಗಿ ಗೈರಾಗುತ್ತಿದ್ದಾರೆ. ಯಾರೊಬ್ಬರಿಗೂ ಕಾರಣ ಕೇಳಿ ನೋಟಿಸ್ ನೀಡುತ್ತಿಲ್ಲ. ಆಯಾಯ ಸಮುದಾಯಕ್ಕೆ ಸೇರಿದವರು ಆಯಾಯ ಜಯಂತಿಗೆ ಹಾಜರಾಗಿ ಆಚರಣೆ ಮಾಡಬೇಕೆ ಎಂದು ಕಿಡಿಕಾರಿದರು.

ಈ ವೇಳೆ ತಾಪಂ ಇಓ ಕೃಷ್ಣ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮೇಗೌಡ, ನೂತನ ಜಿಲ್ಲಾಧಿಕಾರಿ ಭೇಟಿ ಮಾಡಲು ತಹಸೀಲ್ದಾರ್ ಮೈಸೂರಿಗೆ ತೆರಳಿದ್ದಾರೆ ಎಂದು ಸಮರ್ಥನೆಗೆ ಮುಂದಾದಾಗ ಕೆರಳಿದ ಮುಖಂಡರು ಜಿಲ್ಲಾಧಿಕಾರಿ ಅವರನ್ನು ನಾಳೆ ಭೇಟಿ ಮಾಡಬಹುದಾಗಿತ್ತು. ಡಾ.ಬಾಬು ಜಗಜೀವನರಾಂ ಪುಣ್ಯಸ್ಮರಣೆ ನಾಳೆ ಮಾಡಲು ಸಾಧ್ಯವೇ? ಇಂದಿನ ಕಾರ್ಯಕ್ರಮದಲ್ಲಿ ಮೊದಲು ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಬೇಕಾದದ್ದು ತಹಸೀಲ್ದಾರ್ ಕರ್ತವ್ಯ. ಆದರೆ ಅವರು ಡಿಸಿ ನೋಡಲು ಹೋಗಿದ್ದಾರೆ. ಅವರಿಗೆ ಡಿಸಿ ಭೇಟಿ ಮುಖ್ಯವಾದರೆ ಅವರು ಅಲ್ಲೇ ಹೋಗಲಿ ಎಂದು ಕಾರ್ಯಕ್ರಮ ಬಹಿಷ್ಕರಿಸಿ ತಾಲೂಕು ಆಡಳಿತದ ವಿರುದ್ಧ ಧಿಕ್ಕಾರ ಕೂಗಿ ಸ್ಥಳದಿಂದ ನಿರ್ಗಮಿಸಿದರು. ಈ ವೇಳೆ ಇಓ ಕೃಷ್ಣ ಹಾಗೂ ಎಸ್ಐ ಜಗದೀಶ್ ಧೂಳ್‌ಶೆಟ್ಟಿ ಮಾದಿಗ ಮುಖಂಡರ ಮನವೊಲಿಕೆಗೆ ಮುಂದಾದರೂ ಅವರ ಪ್ರಯತ್ನ ವಿಫಲವಾಯಿತು. ಕಾರ್ಯಕ್ರಮ ಬಹಿಷ್ಕಾರದ ನಂತರ ಪಕ್ಕದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ತಾಲೂಕು ಬಾಬು ಜಗಜೀವನ ರಾಂ ಸಂಘದ ಮಾಜಿ ಅಧ್ಯಕ್ಷ ಮೂಗೂರು ಸಿದ್ದರಾಜು, ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಮಾತನಾಡಿದರು. ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಶಿವಕುಮಾರ್, ಸಮಾಜದ ಮುಖಂಡರಾದ ರಾಚಪ್ಪ, ಕೇತಹಳ್ಳಿ ಲಿಂಗರಾಜು, ಸಿ.ಡಿ.ವೆಂಕಟೇಶ್, ಹೆಚ್.ನಾಗರಾಜು, ಹುಣಸೂರು ರಾಚಪ್ಪ, ಸಿ.ಲಿಂಗರಾಜು, ಶಂಭಯ್ಯ, ಚಿನ್ನಸ್ವಾಮಿ, ನಾರಾಯಣ, ಒಡ್ಡಲಯ್ಯ, ದೇವರಾಜು, ನಾಗಣ್ಣ, ಕರಿಯಪ್ಪ ಮತ್ತಿತರಿದ್ದರು.



ಬಾಬೂಜಿ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಮಾದಿಗ ಸಮುದಾಯದ ಮುಖಂಡರು ಬಹಿಷ್ಕರಿಸಿದರು

> ಅಂಬೇಡ್ಕರ್ ಮತ್ತು ಬಾಬೂಜಿ ದಲಿತ ಸಮುದಾಯದ 2 ಕಣ್ಣುಗಳು. ಇಂತಹ ಮಹಾನ್ ನಾಯಕರ ಹುಟ್ಟುಹಬ್ಬ ಮತ್ತು ಸ್ಮರಣೆ ಕಾರ್ಯಕ್ರಮಕ್ಕೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದು, ಇಂದಿನ ಕಾರ್ಯಕ್ರಮಕ್ಕೂ ಬಹುತೇಕ ಅಧಿಕಾರಿಗಳು ಗೈರಾಗಿದ್ದಾರೆ. ಹಾಗಾಗಿ ಕಾರ್ಯಕ್ರಮವನ್ನು ನಮ್ಮ ಸಮುದಾಯ ಬಹಿಷ್ಕರಿಸಲು ನಿರ್ಧರಿಸಿದೆ. ಇನ್ನು ಮುಂದೆ ಯಾವುದೇ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಮ್ಮ ಸಮುದಾಯ ಮತ್ತು ಸಮುದಾಯದ ಜನರಾಗಲೀ ಭಾಗವಹಿಸುವುದಿಲ್ಲ. ಅಲ್ಲದೇ ಕಾರ್ಯಕ್ರಮದ ನಿರ್ಲಕ್ಷ್ಯಕ್ಕೆ ಉಸ್ತುವಾರಿ ಸಚಿವ ಮಹದೇವಪ್ಪ ತಾಲೂಕಿನ ಎಲ್ಲಾ ಅಧಿಕಾರಿಗಳನ್ನು ಎತ್ತಂಗಡಿ ಮಾಡಬೇಕು.
>
> - ಬಿ.ಮರಯ್ಯ, ಕಾಂಗ್ರೆಸ್ ಮುಖಂಡ

ಆಹಾರ ಸ್ವಾವಲಂಬನೆಗೆ ಮುನ್ನುಡಿ ಬರೆದ ಬಾಬೂಜಿ

ಮಾದಿಗ ಸಮುದಾಯದ ಮುಖಂಡ ಮೂಗೂರು ಸಿದ್ದರಾಜು



ಭೈರಾಪುರ ವೃತ್ತದಲ್ಲಿ ಡಾ.ಬಾಬುಜಗಜೀವನ್ ರಾಂ ಪುಣ್ಯಸ್ಮರಣೆ ನಡೆಯಿತು.

ತಿ.ನರಸೀಪುರ, ಜು.6– ರಾಜಕೀಯ ಜೀವನದ ಉದ್ದಕ್ಕೂ ಜನಮನ್ನಣೆ ಗಳಿಸಿ, ಆಡಳಿತದಲ್ಲಿ ಸುಧಾರಣೆ ತಂದ ಮಾಜಿ ಉಪ ಪ್ರಧಾನಿ ಡಾ.ಬಾಬುಜಗಜೀವನ್ ರಾಂ ಅವರು ಹಸಿರುಕ್ರಾಂತಿ ಮೂಲಕ ದೇಶದಲ್ಲಿ ಆಹಾರ ಸ್ವಾವಲಂಬನೆಗೆ ಮುನ್ನುಡಿ ಬರೆದರು ಎಂದು ಮಾದಿಗ ಸಮುದಾಯದ ಮುಖಂಡ ಮೂಗೂರು ಸಿದ್ದರಾಜು ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಶನಿವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಪುಣ್ಯಸ್ಮರಣೆ ಬಹಿಷ್ಕರಿಸಿ, ಅಧಿಕಾರಿಗಳ ಬೇಜವಾಬ್ದಾರಿ ಖಂಡಿಸಿ ಅಂಬೇಡ್ಕರ್ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದ ಬಳಿಕ ಭೈರಾಪುರ ವೃತ್ತದಲ್ಲಿರುವ ಡಾ.ಬಾಬು ಜಗಜೀವನ್ ರಾಂ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ 38ನೇ ಪುಣ್ಯಸ್ಮರಣೆಯಲ್ಲಿ ಮಾತನಾಡಿದ ಅವರು, ಶೋಷಿತ ಸಮುದಾಯದ ಹಿನ್ನೆಲೆಯಿಂದ ರಾಜಕೀಯಕ್ಕೆ ಬಂದ ಬಾಬೂಜಿ ಅವರು ದೊರೆತ ಅಧಿಕಾರವನ್ನು ಶೋಷಿತರು ಮತ್ತು ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಬಳಸಿ ನಾಯಕತ್ವದ ದ್ಯೋತಕವಾಗಿದ್ದಾರೆ ಎಂದು ಬಣ್ಣಿಸಿದರು.

ಸಾಮಾಜಿಕ ಮತ್ತು ರಾಜಕೀಯ ಅಸಮಾನತೆ ಇದ್ದ ಕಾಲಘಟ್ಟದಲ್ಲಿ ದಲಿತ ಪರ ಕಾಳಜಿ ಹೊಂದಿದ್ದ ಬಾಬೂಜಿ ಅವರು ಅಂದಿನ ಸಂಸತ್ತಿಗೆ 88 ಸಂಸದರನ್ನು ಆಯ್ಕೆ ಮಾಡಿ ಕಳುಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡ ಬಿ.ಮರಯ್ಯ, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಗ್ರಾಪಂ ಸದಸ್ಯ ಶಿವಶಂಕರ್, ಶಿವಕುಮಾರ್, ಮುಖಂಡರಾದ ರಾಚಪ್ಪ, ಲಿಂಗರಾಜು, ಸಿ.ಡಿ.ವೆಂಕಟೇಶ್, ಎಚ್.ನಾಗರಾಜು, ರಾಚಪ್ಪ ಲಿಂಗರಾಜು, ಶಂಭಯ್ಯ, ಚಿನ್ನಸ್ವಾಮಿ, ನಾರಾಯಣ, ಒಡ್ಡಲ್ಲಯ್ಯ, ದೇವರಾಜು, ನಾಗಣ್ಣ, ಕರಿಯಪ್ಪ ಮತ್ತಿತರಿದ್ದರು.

ಹುಣಸೂರಲ್ಲಿ ಉಪವಿಭಾಗಾಧಿಕಾರಿಗೆ ಬೀಳ್ಕೊಡುಗೆ

ಹುಣಸೂರು, ಜು.6– ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಉಪ ವಿಭಾಗದ ಅಧಿಕಾರಿಗಳು ಸಂಪೂರ್ಣವಾಗಿ ಸಹಕರಿಸಿದ್ದಾರೆ ಎಂದು ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್ ತಿಳಿಸಿದರು.

ಬೆಂಗಳೂರಿನ ಹಣಕಾಸು ಇಲಾಖೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ನಗರದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನಾನು ಉಪ ವಿಭಾಗದಲ್ಲಿ ಬಹಳ ತಿಳಿದುಕೊಂಡು ಕೆಲಸ ಮಾಡಿದ್ದೇನೆ ಹಾಗೂ ಈ ಭಾಗದಲ್ಲಿ ಕೆಲಸ ನಿರ್ವಹಿಸಲು ಅವಕಾಶ ಸಿಕ್ಕರೆ ಮುಂದಿನ ದಿನಗಳಲ್ಲಿ ಉನ್ನತಮಟ್ಟ ಅಧಿಕಾರಿಯಾಗಿ ಬರುತ್ತೇನೆ ಎಂದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಪ್ರಾಮಾಣಿಕ, ಕ್ರಿಯಾಶೀಲ ಅಧಿಕಾರಿಯಾಗಿ ಕಿರಿಯ ವಯಸ್ಸಿನಲ್ಲೇ ಉನ್ನತ ಮಟ್ಟದ ಸ್ಥಾನ ನಿರ್ವಹಿಸಿದ್ದಾರೆ. ಮುಂದಿನ ದಿನಗಳಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಆಗುವ ಎಲ್ಲಾ ಸಾಮರ್ಥ್ಯ ಉಪ ವಿಭಾಗಾಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್ ಅವರಲ್ಲಿದೆ ಎಂದರು.

ಉಪವಿಭಾಗದ ತಹಸೀಲ್ದಾರ್ ಯಾದವ್ ಗಿರೀಶ್ ಮಾತನಾಡಿ, ಒಬ್ಬ ಐಎಎಸ್ ಅಧಿಕಾರಿಯಾಗಿ ಯಾವುದೇ ಆಡಂಬರ ವಿಲ್ಲದೆ ಸಮಸ್ಯೆಗಳನ್ನು ಹೊತ್ತು ಕಚೇರಿಗೆ ಬರುವ ಜನರೊಂದಿಗೆ ಸೌಜನ್ಯದಿಂದ ಅವರ ಸಮಸ್ಯೆಗಳನ್ನು ಕೇಳಿ ಬಗೆಹರಿಸಲು ಕೆಳಹಂತದ ಅಧಿಕಾರಿಗಳಿಗೆ ತಕ್ಷಣ ನಿರ್ದೇಶನ ನೀಡುತ್ತಿದ್ದರು ಎಂದರು.


ಇದೇ ವೇಳೆ ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಸರಗೂರು, ವಿಭಾಗದ ಅಧಿಕಾರಿಗಳು ಹಾಗೂ ಪ್ರಗತಿಪರ ಸಂಘಟನೆಗಳು, ಜನಪ್ರತಿನಿಧಿಗಳು, ವಕೀಲರ ಸಂಘ, ಟಿಬೆಟ್ ಹಾಗೂ ಪತ್ರಕರ್ತರು ಮಹಮ್ಮದ್ ಹ್ಯಾರೀಸ್ ಸುಮೇರ್ ಅವರನ್ನು ಸನ್ಮಾನಿಸಿದರು.

ಈ ವೇಳೆ ತಹಸೀಲ್ದಾರ್ ಕುಂಜಿ ಅಹಮದ್, ಶ್ರೀನಿವಾಸ್, ಪೂರ್ಣಿಮಾ, ರುಖಿಯಾ ಬೇಗಂ, ಶಕೀಲಾ ಬಾನು, ನರಸಿಂಹಯ್ಯ, ಶ್ರೀಪದ ಸಿಬ್ಬಂದಿ ಹಾಜರಿದ್ದರು.



ಕಾರ್ಯಕ್ರಮದಲ್ಲಿ ಎಸಿ ಮಹಮ್ಮದ್ ಹ್ಯಾರೀಸ್ ಸುಮೇರ್ ಅವರನ್ನು ಸನ್ಮಾನಿಸಲಾಯಿತು.

ನಿವೃತ್ತರಾದ ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ



ಮೈಸೂರು ತಾಲೂಕು ಸಿದ್ದರಾಮನಹುಂಡಿ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕ ಮಾಯಂಗರವರು ನಿವೃತ್ತಿ ಹೊಂದಿದ್ದು, ಅವರನ್ನು ಗ್ರಾಮಸ್ಥರು, ಹಳೆ ವಿದ್ಯಾರ್ಥಿಗಳು, ಎಸ್‌ಡಿಎಂಸಿಯವರು ಆತ್ಮೀಯವಾಗಿ ಬೀಳ್ಕೊಟ್ಟರು. ಈ ವೇಳೆ ಎಸ್‌ಡಿಎಂಸಿ ಉಪಾಧ್ಯಕ್ಷ ಮಾದೇವು, ಬಲರಾಮು, ಕೆಂಪುರಾಮು, ಎಸ್‌ಡಿಎಂಸಿ ಮಾಜಿ ಸದಸ್ಯ ಉದಯ್ ರಾಜ್, ಎಪಿಎಂಸಿ ಸದಸ್ಯ ಬಸವರಾಜು, ಡೈರಿ ಅಧ್ಯಕ್ಷರಾದ ಸಿದ್ದರಾಮು, ಪುಟ್ಟಣ್ಣ, ಗ್ರಾಪಂ ಅಧ್ಯಕ್ಷ ಕುಮಾರ್, ಚಂದ್ರಶೇಖರ್, ಸಿದ್ದೇಗೌಡ, ಸಿದ್ದರಾಜು ಹಾಗೂ ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಅಂಬೇಡ್ಕರ್, ಬಾಬೂಜಿ ಕಂಚಿನ ಪ್ರತಿಮೆ ನಿರ್ಮಾಣ

ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಭರವಸೆ



ಡಾ.ಬಾಬುಜಗಜೀವನರಾಂ ಪ್ರತಿಮೆಗೆ ಶಾಸಕ ಡಿ.ರವಿಶಂಕರ್ ಮಾಲಾರ್ಪಣೆ ಮಾಡಿದರು.

ಕೆ.ಆರ್.ನಗರ, ಜು.6– ಚುನಾವಣೆ ಪೂರ್ವ ನೀಡಿದ ಭರವಸೆಯಂತೆ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಕುಬ್ಜ ಪುತ್ಥಳಿಗಳನ್ನು ತೆರವುಗೊಳಿಸಿ ಕಂಚಿನ ಪ್ರತಿಮೆ ನಿರ್ಮಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ಪಟ್ಟಣದ ಪುರಸಭೆ ಕಚೇರಿ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ ಮತ್ತು ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಶನಿವಾರ ನಡೆದ ಡಾ.ಬಾಬು ಜಗಜೀವನ ರಾಂ ಅವರ 38ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ಜಗಜೀವನರಾಂ ಸಮುದಾಯ ಭವನಕ್ಕೆ 92 ಲಕ್ಷ ಅನುದಾನ ಮಂಜೂರು ಮಾಡಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ ಕಾಮಗಾರಿಗೆ ಅಗತ್ಯ ಅನುದಾನ ಮಂಜೂರು ಮಾಡಿಸಿ ಭವನ ಪೂರ್ಣಗೊಳಿಸಿ ಉದ್ಘಾಟಿಸಲಾಗುವುದು ಎಂದರು.

ಡಾ.ಬಾಬು ಜಗಜೀವನ ರಾಂ ಅವರ ತತ್ವಾದರ್ಶಗಳು ಮತ್ತು ಹೋರಾಟದ ಮನೋಭಾವನೆಯನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರಲಿದೆ ಎಂದರು.

ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ದೇಶದ ಆಹಾರದ ಕೊರತೆ ನೀಗಿಸಿ ಹಸಿರು ಕ್ರಾಂತಿ ಹರಿಕಾರರೆಂಬ ಬಿರುದು ಪಡೆಯುವುದರ ಜೊತೆಗೆ ಕಾರ್ಖಾನೆಗಳ ಕಾರ್ಮಿಕರ ದುಡಿಮೆ ಅವಧಿಯನ್ನು 8 ಗಂಟೆಗಳಿಗೆ ನಿಗದಿಗೊಳಿಸಿದ ಮಹಾನಾಯಕ. ಅಂತಹ ಮಹನೀಯರನ್ನು ಸ್ಮರಿಸಬೇಕಾದುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಎಂದರು.

ಈ ವೇಳೆ ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಎಂ.ಲೋಕೇಶ್, ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ, ತಾಪಂ ಇಓ ಜಿ.ಕೆ.ಹರೀಶ್, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎಸ್.ಎಂ.ಅಶೋಕ್ ಕುಮಾರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಪುರಸಭೆ ಸದಸ್ಯರಾದ ಸರೋಜ, ಸಿ.ಶಂಕರ್, ಪ್ರಕಾಶ್, ನಟರಾಜು, ಸೌಮ್ಯ, ಮಾಜಿ ಅಧ್ಯಕ್ಷ ಡಿ.ಕಾಂತರಾಜು, ಮಾಜಿ ಸದಸ್ಯ ಕೆ.ವಿನಯ್, ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ವಕ್ತಾರ ಸೈಯದ್ ಜಾಬೀರ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ಬಿಇಓ ಆರ್.ಕೃಷ್ಣಪ್ಪ, ಮಾದಿಗ ದಂಡೋರ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ರವಿಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ಕೃಷ್ಣ, ಸಿದ್ದರಾಜು, ರತ್ನಮಾಲ, ಸ್ವಾಮಿ, ಪುರಂದರ ಮತ್ತಿತರರಿದ್ದರು.

ಬುದ್ಧ, ಬಸವ, ಅಂಬೇಡ್ಕರ್ ತತ್ವ ಸಿದ್ಧಾಂತ ಮೈಗೂಡಿಸಿಕೊಳ್ಳಿ

ಮೈಸೂರು ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನಪ್ರಕಾಶ್ ಸ್ವಾಮೀಜಿ ಕರೆ

ಮಲ್ಕುಂಡಿ, ಜು.6– ಪ್ರತಿಯೊಬ್ಬರೂ ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಹಾದಿಯಲ್ಲಿ ನಡೆಯಲು ಸಾಧ್ಯ ಎಂದು ಮೈಸೂರು ಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು.

ಗ್ರಾಮದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬುದ್ಧ, ಬಸವ, ಅಂಬೇಡ್ಕರ್ ಪುತ್ಥಳಿಯನ್ನು ಪೂಜಾ ವಸ್ತುವಾಗಿ ಮಾಡಬೇಡಿ. ಸಂವಿಧಾನದ ಆಶಯಗಳಂತೆ ನಾವೆಲ್ಲರೂ ಸಮ ಸಮಾಜದ ನಿರ್ಮಾಣಕ್ಕೆ ಹೆಜ್ಜೆ ಹಾಕಬೇಕಿದೆ. ಪ್ರತಿಯೊಬ್ಬರೂ ಬುದ್ಧನ ಮಾರ್ಗದಲ್ಲಿ ನಡೆದಾಗ ಮಾತ್ರ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ ಎಂದರು.

ಶಾಸಕ ದರ್ಶನ್ ಮಾತನಾಡಿದರು. ಈ ವೇಳೆ ಶ್ರೀಸಿದ್ದರಾಮೇಶ್ವರ ಸ್ವಾಮೀಜಿ, ಮಾಜಿ ಶಾಸಕ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಮಾಜಿ ಮೇಯರ್ ಪುರುಷೋತ್ತಮ್, ಗ್ರಾಪಂ ಅಧ್ಯಕ್ಷೆ ದೇವಮ್ಮ, ದಲಿತ ಮುಖಂಡ ವಿ.ರಾಮಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ ಸೇರಿದಂತೆ ಇನ್ನಿತರರಿದ್ದರು.



ಕಾರ್ಯಕ್ರಮದಲ್ಲಿ ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು.

ಸಂಕಷ್ಟದಲ್ಲೂ ಸಮಾಜಕ್ಕಾಗಿ ಮಾಧ್ಯಮಗಳಿಂದ ಉತ್ತಮ ಕಾರ್ಯ

ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ದರ್ಶನ್



ಪತ್ರಿಕಾ ದಿನಾಚರಣೆಯಲ್ಲಿ ಪತ್ರಕರ್ತ ನಂಜುಂಡನಾಯಕ ಅವರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಜು.6– ತಂತ್ರಜ್ಞಾನ ಬೆಳೆದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಪತ್ರಿಕೆಗಳು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದರೂ, ಸಮಾಜದ ಒಳಿತಿಗಾಗಿ ತಮ್ಮ ಪಾಲಿನ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿವೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಶನಿವಾರ ತಾಲೂಕು ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ ಸಮಸ್ಯೆಗಳನ್ನು ಪತ್ರಕರ್ತರು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತರುವ ಮೂಲಕ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ದುಡಿಯುತ್ತಿದ್ದಾರೆ. ಗ್ರಾಮಗಳಲ್ಲಿ ಸಮಸ್ಯೆಗಳು ಉದ್ಭವಿಸಿದಾಗ ಹಾಗೂ ಜನಸಂಪರ್ಕ ಸಭೆ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ನನ್ನ ಜೊತೆ ನಿಂತು ಸಹಕರಿಸುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಲುಪಿಸುವಲ್ಲಿ ಪತ್ರಿಕೆಗಳ ಪಾತ್ರ ಅಪಾರ. ಪತ್ರಕರ್ತ ಸುತ್ತೂರು ನಂಜುಂಡನಾಯಕ ಅವರಿಗೆ ಈ ಬಾರಿಯ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ದೊರೆತಿರುವುದು ಸಂತೋಷ ತಂದಿದೆ ಎಂದರು.

ಜೆಎಸ್‌ಎಸ್ ಸಂಸ್ಥೆ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಮಾತನಾಡಿ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ನಾಲ್ಕನೇ ಅಂಗವಾಗಿರುವ ಮಾಧ್ಯಮ ಕ್ಷೇತ್ರ ಸರ್ಕಾರದ ಆಡಳಿತಕ್ಕೆ ಕನ್ನಡಿಯಾಗಿ, ದೇಶದ ಜನಸಾಮಾನ್ಯರ ಅಭಿವೃದ್ಧಿಗಾಗಿ ದುಡಿಯುತ್ತಿವೆ. ಸುತ್ತೂರು ಶ್ರೀಮಠ ತಾಲೂಕಿನ ಪತ್ರಕರ್ತರನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತಿವರ್ಷ ಪತ್ರಕರ್ತರಿಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಕಳೆದ 20 ವರ್ಷಗಳಿಂದ ತಾಲೂಕಿನಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಸುತ್ತೂರು ನಂಜುಂಡನಾಯಕ ಅವರಿಗೆ ಪ್ರಶಸ್ತಿ ನೀಡಲು ಸಂಸ್ಥೆ ಹರ್ಷಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಎಚ್.ಎಸ್.ಕುಶಾಲ್ ಕುಮಾರ್ ಹಾಗೂ ಕೆ.ಕೃತಿಕಾ ಅವರಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಕೇಶವಮೂರ್ತಿ, ತ್ರಿಪುರಾಂತಕ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಗಂಗಾಧರ್, ಸತ್ಯನಾರಾಯಣ, ಶ್ರೀನಿವಾಸ್, ಮಧು, ಪ್ರತಾಪ್, ಕೃಷ್ಣಪ್ಪಗೌಡ, ದೀಪಕ್, ಬಸವರಾಜು, ಚಂದ್ರಶೇಖರ್, ಕೆಂಪೇಗೌಡ ಉಪಸ್ಥಿತರಿದ್ದರು.

ಯುವಕರು ಬಾಬೂಜಿಯವರ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಿ



ಸರಗೂರಲ್ಲಿ ಬಾಬು ಜಗಜೀವನರಾಂ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಸರಗೂರು, ಜು.6– ಬಾಬು ಜಗಜೀವನರಾಂ ಅವರು ಹಸಿರುಕ್ರಾಂತಿ ಮೂಲಕ ದೇಶದ ಕೋಟ್ಯಾಂತರ ಜನರ ಹಸಿವು ನೀಗಿಸಿದ ಸಮಾಜ ಸುಧಾರಕ. ಯುವಕರು ಅವರ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು ಎಂದು ಸಾಹಿತಿ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಬಾಬೂಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಾಬು ಜಗಜೀವನರಾಂ ಕೇಂದ್ರ ಕಾರ್ಮಿಕ ಸಚಿವರಾಗಿ ಅಸಂಘಟಿತರ ಬದುಕಿಗೆ ಬೆಳಕಾದರು. ಶೋಷಿತ ಸಮುದಾಯಗಳ ಸಮಸ್ಯೆಗಳಿಗೆ ಧ್ವನಿಯಾದರು. ಹತ್ತು ಹಲವು ಚಳವಳಿಗಳ ಮೂಲಕ ದಲಿತರ ಬದುಕು ಹಸನಾಗುವಲ್ಲಿ ಅವರ ಪರಿಶ್ರಮ, ಕಳಕಳಿ ಸದಾ ಸ್ಮರಣೀಯ ಎಂದರು.

ಗ್ರಾಪಂ ಸದಸ್ಯ ಬೆಟ್ಟಸ್ವಾಮಿ ಮಾತನಾಡಿ, ಬಾಬೂಜಿ, ಅಂಬೇಡ್ಕರ್ ಅವಂತಹ ಮಹನೀಯರು ನಮ್ಮ ಬದುಕಿಗೆ ಮಾರ್ಗದರ್ಶಕರು. ಪಟ್ಟಣದಲ್ಲಿ ಬಾಬು ಜಗಜೀವನರಾಂ ಭವನ ನಿರ್ಮಾಣವಾಗಲಿದ್ದು, ಇದಕ್ಕಾಗಿ ಸ್ಥಳ ಗುರ್ತಿಸುವಲ್ಲಿ ಪಪಂ ಸದಸ್ಯರ ಸಹಕಾರ ಹಾಗೂ ಸಮುದಾಯದ ಕೊಡುಗೆ ಅಮೂಲ್ಯ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ಅಧ್ಯಕ್ಷ ನಾಗಣ್ಣ, ಗೌರವಾಧ್ಯಕ್ಷ ವೈಕುಂಠಯ್ಯ, ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ, ಸಮಾಜ ಸೇವಕ ಮಹೇಶ್ ಮಾತನಾಡಿದರು.

ಗಡಿ ಯಜಮಾನರಾದ ಯಜ್ಜೂರಯ್ಯ, ಸೋಮಣ್ಣ, ಪಪಂ ಮಾಜಿ ಸದಸ್ಯೆ ಸಣ್ಣತಾಯಮ್ಮ, ಮಾಜಿ ಅಧ್ಯಕ್ಷ ಶಿವರಾಜು, ಮುಖಂಡರಾದ ಮಲ್ಲೇಶ್, ಸಿದ್ದಪ್ಪ, ಶ್ರೀನಿವಾಸ್, ಮಹೇಂದ್ರ, ಪುಟ್ಟಹನುಮಯ್ಯ, ನಾಗರಾಜು, ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಶಿರಸ್ತೇದಾರ್ ಗುರುರಾಜ್, ಪಪಂ ಮುಖ್ಯಾಧಿಕಾರಿ ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೋಪಾಲ್, ಕೃಷ್ಣಮೂರ್ತಿ ಇತರರಿದ್ದರು.

ತಿಂಗಳೊಳಗೆ ಸಾಗುವಳಿ ಚೀಟಿ ವಿತರಿಸದಿದ್ದರೆ

ಕೋಟೆ, ಸರಗೂರು ತಹಸೀಲ್ದಾರ್‌ಗಳ ವಿರುದ್ಧ ಸರ್ಕಾರಕ್ಕೆ ಪತ್ರ

ಜನಸ್ಪಂದನ ಸಭೆಯಲ್ಲಿ ಶಾಸಕ ಅನಿಲ್ ಎಚ್ಚರಿಕೆ

ಹೆಚ್.ಡಿ.ಕೋಟೆ, ಜು.6– ಸಾಗುವಳಿ ಚೀಟಿ ಹಕ್ಕುಪತ್ರ ಪಡೆಯಲು ರೈತರು ಸರ್ಕಾರಕ್ಕೆ ಕಿಮ್ಮತ್ತು ಕಟ್ಟಿದರೂ ಹೆಚ್.ಡಿ.ಕೋಟೆ ಮತ್ತು ಸರಗೂರು ತಹಸೀಲ್ದಾರ್‌ಗಳು ರೈತರಿಗೆ ಸಾಗುವಳಿ ಚೀಟಿ ವಿತರಿಸಿಲ್ಲ. ಒಂದು ತಿಂಗಳೊಳಗೆ ಈ ಬಗ್ಗೆ ಕ್ರಮ ವಹಿಸದಿದ್ದರೆ ನಿಮ್ಮ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಶಾಸಕ ಎಚ್ಚರಿಕೆ ನೀಡಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ತಾಲೂಕು ಆಡಳಿತದಿಂದ ಶಾಸಕರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಜನಸ್ಪಂದನ ಸಭೆಯಲ್ಲಿ ಮಾತನಾಡಿದ ಅವರು, ಒಂದು ವರ್ಷದ ಹಿಂದೆ ಅಕ್ರಮ ಸಕ್ರಮ ಸಮಿತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೋಟೆ ಮತ್ತು ಸರಗೂರು ತಾಲೂಕಿನ ನೂರಾರು ರೈತರಿಗೆ ಸಾಗುವಳಿ ಚೀಟಿ ನೀಡಲು ತೀರ್ಮಾನಿಸಲಾಯಿತು. ನಂತರ ಸಾಗುವಳಿ ಪತ್ರ ನೀಡಲು ರೈತರಿಂದ ತಹಸೀಲ್ದಾರ್‌ಗಳು ಹಣ ಕಟ್ಟಿಸಿಕೊಂಡರೂ ಇದುವರೆಗೂ ಸಾಗುವಳಿ ಚೀಟಿ ವಿತರಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ. ಇದರಿಂದ ನೂರಾರು ರೈತರಿಗೆ ತೊಂದರೆಯಾಗಿದೆ. ಮುಂದಿನ ದಿನಗಳಲ್ಲಿ ಸಾಗುವಳಿ ಚೀಟಿ ವಿತರಿಸದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಮೀನಿಗೆ ಓಡಾಡಲು ರಸ್ತೆ, ಆದಿವಾಸಿಗಳಿಗೆ ಮೂಲಸೌಕರ್ಯ, ಹಾಡಿಗಳಲ್ಲಿ ಅಕ್ರಮ ಮದ್ಯ ಮಾರಾಟ, ವಾಸಿಸಲು ಮನೆ ಇಲ್ಲ, ಮನೆ ಕಟ್ಟಲು ಜಾಗ ಇಲ್ಲ ಎಂಬುದು ಸೇರಿದಂತೆ ಇನ್ನಿತರ ಅರ್ಜಿಗಳನ್ನು ಸಾರ್ವಜನಿಕರು ಸಲ್ಲಿಸಿದರು. ಈ ವೇಳೆ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿದ ಶಾಸಕರು ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ ಜನಸ್ಪಂದನ ಕಾರ್ಯಕ್ರಮಕ್ಕೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆಯೂ ಸೂಚಿಸಿದರು.

ಪುರಸಭಾ ಸದಸ್ಯ ಐಡಿಯಾ ವೆಂಕಟೇಶ್ ಮಾತನಾಡಿ, ಇಲ್ಲಿನ ಪುರಸಭೆಯ ಇಂಜಿನಿಯರ್ ವಾರದಲ್ಲಿ ಒಂದು ದಿನವೂ ಕಚೇರಿಗೆ ಆಗಮಿಸುವುದಿಲ್ಲ. ಬಂದರೂ ಕಾಮಗಾರಿ ವೀಕ್ಷಣೆಗೆ ತೆರಳದೆ ಕಾಲಹರಣ ಮಾಡುತ್ತಾರೆ. ಸದಸ್ಯರು ಪ್ರಶ್ನಿಸಿದರೆ ಉಡಾಫೆ ಉತ್ತರ ನೀಡುತ್ತಾರೆ. ಇದರಿಂದ ಅಭಿವೃದ್ಧಿ ಕಾಮಗಾರಿಗೆ ಹಿನ್ನಡೆಯಾಗಿದೆ. ಹೀಗಾಗಿ ಬೇರೆ ಇಂಜಿನಿಯರ್ ನಿಯೋಜನೆ ಮಾಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪುಷ್ಟಿ ನೀಡುವಂತೆ ಪುರಸಭಾ ಮುಖ್ಯಾಧಿಕಾರಿ ಪುರಸಭಾ ಸದಸ್ಯರ ಮಾತಿಗೆ ದನಿಗೂಡಿಸಿದರು.

ನಂತರ ಮಾತನಾಡಿದ ಶಾಸಕರು, ಇಂಜಿನಿಯರ್ ಕೆಲಸ ಮಾಡದಿದ್ದರೆ ಅವರನ್ನು ಬೇರೆಡೆಗೆ ಕಳುಹಿಸಿ ಲೋಕೋಪಯೋಗಿ ಇಲಾಖೆಯಲ್ಲಿರುವ ಯಾರಾದರೂ ಒಬ್ಬರನ್ನು ಪುರಸಭಾ ಕಾರ್ಯಾಲಯಕ್ಕೆ ನಿಯೋಜನೆ ಮಾಡುವಂತೆ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಅವರಿಗೆ ಸೂಚಿಸಿದರು.

ಆದಿವಾಸಿ ಮುಖಂಡ ವಿಜಯಕುಮಾರ್ ಮಾತನಾಡಿ, ಮುಜಾಫರ್ ಅಜಾದಿ ವರದಿ ಜಾರಿಯಾಗದಿರುವುದರಿಂದ ಆದಿವಾಸಿಗಳು ಮೂಲಸೌಕರ್ಯದಿಂದ ವಂಚಿತರಾಗಿದ್ದಾರೆ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಮುಂದಿನ ದಿನಗಳಲ್ಲಿ ತಾಲೂಕಿನ ಆದಿವಾಸಿ ಮುಖಂಡರ ಸಭೆ ಕರೆದು ಚರ್ಚೆ ನಡೆಸಿ ಆದಿವಾಸಿಗಳ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೋಟೆ ತಾಲೂಕಿನಿಂದ 201, ಸರಗೂರು ತಾಲೂಕಿನಿಂದ 54 ಅರ್ಜಿಗಳು ಸಲ್ಲಿಕೆಯಾದವು.

ಈ ವೇಳೆ ತಹಸೀಲ್ದಾರ್‌ಗಳಾದ ಶ್ರೀನಿವಾಸ್, ರುಕಿಯಾ ಬೇಗಂ, ಇಓಗಳಾದ ಧರಣೇಶ್, ಸುಷ್ಮಾ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಿಡಿಪಿಓ ಆಶಾ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್, ಜಿಪಂ ಎಇಇ ನಾಗರಾಜು, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಪಿಡಬ್ಲ್ಯೂಡಿ ಎಇಇ ಬೋರಯ್ಯ, ಮೈಮುಲ್ ನಿರ್ದೇಶಕ ಈರೇಗೌಡ, ನಾಗನಹಳ್ಳಿ ಪ್ರದೀಪ, ಶಂಭುಲಿಂಗನಾಯಕ ಇದ್ದರು.



ಹೆಚ್.ಡಿ.ಕೋಟೆಯಲ್ಲಿ ಶಾಸಕ ಅನಿಲ್ ಅಧ್ಯಕ್ಷತೆಯಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಯಿತು.

> ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಮಸ್ಯೆಗಳನ್ನು 15 ದಿನದೊಳಗೆ ಬಗೆಹರಿಸಬೇಕು. ಮುಂದಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಮತ್ತೆ ಇದೇ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ದೂರಿದರೆ, ಬೇಜವಾಬ್ದಾರಿತನ ತೋರಿದ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುವುದು.
>
> -ಅನಿಲ್, ಶಾಸಕ.

ಮೂಗೂರು: ಹುಂಡಿಯಲ್ಲಿ 27.24 ಲಕ್ಷ ಸಂಗ್ರಹ

ಮೂಗೂರು, ಜು.6– ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಹುಂಡಿ ಎಣಿಕೆ ಕಾರ್ಯ ಉಪ ತಹಸೀಲ್ದಾರ್ ಲಕ್ಷ್ಮಿ ಅವರ ಸಮ್ಮುಖದಲ್ಲಿ ಶನಿವಾರ ನಡೆಯಿತು. ಬೆಳಗ್ಗೆಯಿಂದ ಸಂಜೆವರೆಗೂ ನಡೆದ ಹುಂಡಿ ಎಣಿಕೆ ಕಾರ್ಯದಲ್ಲಿ 27,24,038 ರೂ. ಸಂಗ್ರಹವಾಗಿದ್ದು, ಹಣವನ್ನು ದೇವಾಲಯದ ಖಾತೆಗೆ ಜಮಾ ಮಾಡಲಾಯಿತು ಎಂದು ಆರ್‌ಐ ಬಸವರಾಜು ತಿಳಿಸಿದರು. ಈ ವೇಳೆ ಪಾರಪತ್ತೇದಾರ್ ಸಾಗರ್, ಗೌಡರ ಎಂ.ಪಿ.ನಾಗರಾಜು, ಗ್ರಾಮ ಲೆಕ್ಕಾಧಿಕಾರಿ ಆನಂದ್, ಸಂತೋಷ್, ಪದ್ಮಶ್ರೀ, ಚೈತ್ರಾ, ಗೀತಾ, ಶೃತಿ, ಪ್ರಮೋದ್, ಮೂಗೂರು ಎಸ್‌ಬಿಐ ವ್ಯವಸ್ಥಾಪಕ ರವೀಂದ್ರನಾಥ ಶೆಟ್ಟಿಗಾರ್, ಕಾರ್ತಿಕ್, ಪ್ರಸಾದ್, ದೇವಯ್ಯ ಹಾಗೂ ಕಂದಾಯ ಇಲಾಖೆ ಸಿಬ್ಬಂದಿ ವರ್ಗ ಹಾಜರಿದ್ದರು.

ಮುಡಾ ಹಗರಣ: ಸಿಬಿಐಗೆ ವಹಿಸಿದರೆ ಮಾತ್ರ ನಿಷ್ಪಕ್ಷಪಾತ ತನಿಖೆ ಸಾಧ್ಯ

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ



ಪ್ರಹ್ಲಾದ್ ಜೋಷಿ

ಬೆಂಗಳೂರು, ಜು.6– ಮೈಸೂರಿನ ಮುಡಾದಲ್ಲಿ ನಡೆದಿರುವ ದೊಡ್ಡ ಹಗರಣವನ್ನು ಸಿಬಿಐಗೆ ವಹಿಸಿದರೆ ಮಾತ್ರ ನಿಷ್ಪಕ್ಷಪಾತ ತನಿಖೆ ಸಾಧ್ಯ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಏನೂ ಮಾಡಿಲ್ಲ ಎಂದಾದರೆ ಸಿಬಿಐ ತನಿಖೆಗೆ ಕೊಡಲಿ ಎಂದು ಅವರು ಆಗ್ರಹಿಸಿದರು. ಮುಡಾದಲ್ಲಿ ಬಹಳ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೊತ್ತಿದ್ದೇ ಆಗಿರುವ ಬಹುದೊಡ್ಡ ಹಗರಣ ಇದು ಎಂದು ಆರೋಪಿಸಿದರು. ಈ ಹಗರಣದಲ್ಲಿ 4 ಸಾವಿರ ಕೋಟಿ ಅಕ್ರಮ ಎಸಗಿರುವ ಬಗ್ಗೆ ಆರೋಪಗಳಿವೆ. ನಿವೇಶನಗಳನ್ನು ಬಿಜೆಪಿ ಕಾಲದಲ್ಲಿ ಕೊಟ್ಟಿದ್ದು ಎಂದು ಹೇಳುತ್ತಾರೆ. ಆದರೆ ಈ ಎಲ್ಲಾ ಅವ್ಯವಹಾರ ನಡೆದಿದ್ದು 2013 ರಿಂದ 2018 ರವರೆಗೆ ಎಂದ ಅವರು, ನೀವು (ಸಿದ್ದರಾಮಯ್ಯ) ಏನೂ ತಪ್ಪೇ ಮಾಡಿಲ್ಲ ಎಂದಾದರೆ ಅವ್ಯವಹಾರ ನಡೆಯುತ್ತಿದೆ ಎಂದು ಕಳೆದ ಒಂದು ವರ್ಷದಲ್ಲಿ 15ಕ್ಕೂ ಹೆಚ್ಚು ಪತ್ರ ಬರೆದಿದ್ದ ಜಿಲ್ಲಾಧಿಕಾರಿಯನ್ನು ಯಾಕೆ ವರ್ಗಾವಣೆ ಮಾಡಿದ್ದೀರಿ?

ಬಿಜೆಪಿಯದ್ದು 40 ಪರ್ಸೆಂಟ್ ಸರ್ಕಾರ ಎಂದರು. ಅದಕ್ಕೆ ಯಾವ ದಾಖಲೆಯೂ ಇಲ್ಲ. ನ್ಯಾಯಾಲಯದಲ್ಲಿ ಮಾನಹಾನಿ ಕೇಸ್ ಹಾಕಲಾಗಿತ್ತು. ಅದಕ್ಕೆ ವಾರೆಂಟ್ ತೆಗೆದುಕೊಂಡಿದ್ದಾರೆ. ಇದೀಗ ಎರಡು ಹಗರಣಗಳಲ್ಲಿ ಮುಖ್ಯಮಂತ್ರಿಯದ್ದೇ ಪಾತ್ರ ಇದೆ ಎಂದು ಟೀಕಿಸಿದರು.

ಒಂದು ಕಡೆ ವಾಲ್ಮೀಕಿ ಹಗರಣ, ಮತ್ತೊಂದು ಕಡೆ ಮುಡಾ ಹಗರಣ. ವಾಲ್ಮೀಕಿ ಹಗರಣ ಮುಚ್ಚಿ ಹಾಕಲು ಎಸ್‌ಐಟಿಯವರು ಕೆಲವರನ್ನು ಬಂಧಿಸಿದ್ದಾರೆ. ನಾಗೇಂದ್ರ ಅವರಿಗೆ ಶುಕ್ರವಾರ ನೋಟಿಸ್ ಕೊಟ್ಟಿದ್ದಾರೆ. ಎಲ್ಲವನ್ನೂ ಮುಚ್ಚಿ ಹಾಕಲು ಷಡ್ಯಂತ್ರ ನಡೆದಿದೆ. ಸಿದ್ದರಾಮಯ್ಯ ಸರ್ಕಾರ ಒಂದು ಕಡು ಭ್ರಷ್ಟ ಸರ್ಕಾರ ಎಂದು ಕಿಡಿಕಾರಿದರು.

ಕೆ.ಆರ್.ಕ್ಷೇತ್ರದ ಮತದಾರರಿಗೆ ಯದುವೀರ್ ಕೃತಜ್ಞತೆ



ಸುಣ್ಣದಕೇರಿಯಲ್ಲಿ ಸಂಸದ ಯದುವೀರ್ ಶನಿವಾರ ಸಂಜೆ ಕೃತಜ್ಞತಾ ಸಭೆ ನಡೆಸಿದರು. ಶಾಸಕ ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್ ಮತ್ತಿತರರಿದ್ದರು.

ಮೈಸೂರು, ಜು.6(ಎಂಕೆ)– ಕೆ.ಆರ್. ಕ್ಷೇತ್ರದ ವಿವಿಧೆಡೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಆಲನಹಳ್ಳಿ ಆಶ್ರಯ ಬಡಾವಣೆ, ಸಂಗೀತ ಕಾರ್ನರ್, ಜೆ.ಸಿ.ಬಡಾವಣೆಯ ಚಾಮುಂಡೇಶ್ವರಿ ದೇವಸ್ಥಾನ, ಅಗ್ರಹಾರ ಸಮೀಪದ ನಟರಾಜ ಮಠ, ಸುಣ್ಣದಕೇರಿ, ಬಲ್ಲಾಳ್ ವೃತ್ತದ ಸಮೀಪದಲ್ಲಿರುವ ನರಸರಾಜ ರಸ್ತೆ ಗೌರಿಶಂಕರನಗರದ ಗವೀಮಠ ಹಾಗೂ ಚಾಮುಂಡಿಪುರಂ ಸರ್ಕಲ್‌ನಲ್ಲಿ ಸರಣಿ ಕೃತಜ್ಞತಾ ಸಭೆಯನ್ನು ನಡೆಸುವ ಮೂಲಕ ಮತದಾರರಿಗೆ ಧನ್ಯವಾದ ಅರ್ಪಿಸಿದರು.

ಈ ವೇಳೆ ಮಾತನಾಡಿದ ಯದುವೀರ್, ನಿಮ್ಮೆಲ್ಲರ ಸಹಕಾರದಿಂದ ಒಂದೂವರೆ ಲಕ್ಷ ಮತಗಳ ಅಂತರದಿಂದ ಗೆಲುವು ಪಡೆಯಲು ಸಾಧ್ಯವಾಗಿದೆ. ಇದಕ್ಕಾಗಿ ನಿಮ್ಮೆಲ್ಲರಿಗೂ ಅಭಾರಿಯಾಗಿದ್ದು, ಕೃತಜ್ಞತೆ ಸಲ್ಲಿಸಲು ನಿಮ್ಮ ಬಾಗಿಲಿಗೆ ಬಂದಿದ್ದೇನೆ. ನಿಮ್ಮ ಹಾಗೂ ನಿಮ್ಮ ಬಡಾವಣೆಯ ಯಾವುದೇ ಕುಂದು–ಕೊರತೆಗಳಿಗೆ, ಸಮಸ್ಯೆಗಳಿದ್ದರೆ ನೇರವಾಗಿ ಭೇಟಿ ಮಾಡಿ. ಸದ್ಯದಲ್ಲಿ ಕಾಡಾ ಕಚೇರಿಯಲ್ಲಿ ಸಂಸದರ ಕಚೇರಿ ಆರಂಭವಾಗಲಿದೆ. ನಮ್ಮ ಕಚೇರಿ ಯಾವಾಗಲೂ ನಿಮಗೆ ತೆರೆದಿರುತ್ತೆ ಎಂದು ಭರವಸೆ ನೀಡಿದರು. ಶಾಸಕ ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಬಿ.ವಿ.ಮಂಜುನಾಥ್, ಛಾಯಾದೇವಿ, ಸೌಮ್ಯ ಉಮೇಶ್, ಮಂಡಲ ಅಧ್ಯಕ್ಷ ರಘು ಅರಸ್, ಜೋಗಿ ಮಂಜು, ಕೇಬಲ್ ಮಹೇಶ್, ಮುಖಂಡರಾದ ಅಶ್ವಥ್, ಜೋಗಪ್ಪ, ಮಂಜುನಾಥ್, ನಂದೀಶ್, ಜಯಸಿಂಹ ಇನ್ನಿತರರಿದ್ದರು.

ಸ್ವ–ನಿಧಿಯಿಂದ ಸಮೃದ್ಧಿ ಮೇಳ



ಬೀದಿ ಬದಿ ವ್ಯಾಪಾರಿಗಳಿಗೆ ಕ್ಯೂ ಆರ್ ಕೋಡ್ ವಿತರಣೆ ಮಾಡಲಾಯಿತು.

ಮೈಸೂರು, ಜು.6(ಎಂಕೆ)– ಮೈಸೂರು ನಗರಪಾಲಿಕೆ ಡೇ–ನಲ್ಮ್ ವಿಭಾಗ ಹಾಗೂ ಚಾಮುಂಡಿಪುರಂನ ಕರ್ನಾಟಕ ಬ್ಯಾಂಕ್ ಶಾಖೆ ಸಂಯುಕ್ತಾಶ್ರಯದಲ್ಲಿ ಪಿಎಂ ಸ್ವಾ–ನಿಧಿ ಅಡಿಯಲ್ಲಿ 'ಸ್ವ–ನಿಧಿಯಿಂದ ಸಮೃದ್ಧಿ ಮೇಳ' ನಡೆಯಿತು.

ಈ ವೇಳೆ 56 ಮಂದಿ ಬೀದಿ ಬದಿ ವ್ಯಾಪಾರಿಗಳಿಗೆ ಸಾಲ–ಸೌಲಭ್ಯ ವಿತರಣೆ ಮಾಡಲಾಯಿತು. ಅಲ್ಲದೆ ಡಿಜಿಟಲ್ ಬ್ಯಾಂಕಿಂಗ್, ಕ್ಯೂ ಆರ್ ಕೋಡ್ ಬಳಕೆ ಕುರಿತು ತರಬೇತಿ ನೀಡಿ, ಅರಿವು ಮೂಡಿಸಲಾಯಿತು. ನಗರಪಾಲಿಕೆ ಡೇ–ನಲ್ಮ್ ವಿಭಾಗದ ಅಭಿಯಾನ ವ್ಯವಸ್ಥಾಪಕ ಭೈರಲಿಂಗಯ್ಯ, ಲೀಡ್ ಬ್ಯಾಂಕ್ ಮ್ಯಾನೇಜರ್ ನಾಗೇಶ್, ಚಾಮುಂಡಿಪುರಂ ಕರ್ನಾಟಕ ಬ್ಯಾಂಕ್ ಶಾಖೆಯ ವ್ಯವಸ್ಥಾಪಕ ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಎಲ್.ಕೆ.ಅಡ್ವಾಣಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಯಡವಟ್ಟು ಮಾಡಿದ ಸಚಿವ ಸೋಮಣ್ಣ



ತುಮಕೂರಿನ ಅಭಿನಂದನಾ ಸಮಾರಂಭದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಮಾತನಾಡುತ್ತಿರುವುದು

ತುಮಕೂರು, ಜು.6–ಬಿಜೆಪಿ ಹಿರಿಯ ನಾಯಕ, ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿಯವರು ಜೀವಂತ ಇರುವಾಗಲೇ ಕೇಂದ್ರ ಸಚಿವ ವಿ.ಸೋಮಣ್ಣ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಯಡವಟ್ಟು ಮಾಡಿಕೊಂಡಿದ್ದಾರೆ.

ಇಂದು ಬೆಳಗ್ಗೆ ಅಡ್ವಾಣಿಯವರು ನಿಧನರಾಗಿದ್ದಾರೆ ಎಂಬ ವದಂತಿ ಸಾಮಾಜಿಕ ಜಾಲ ತಾಣದಲ್ಲಿ ಹರಡಿತ್ತು. ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಕೇಂದ್ರ ಸಚಿವ ಸೋಮಣ್ಣ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಿದ್ದರು. ಈ ಸಮಾರಂಭದಲ್ಲಿ ಭಾಗವಹಿಸಿದ್ದ ಸೋಮಣ್ಣ, ವದಂತಿಯನ್ನು ನಂಬಿ 'ಈಗ ತಾನೇ ಮಾಹಿತಿ ಬಂದಿದೆ. ಅಡ್ವಾಣಿಯವರು ಹೋಗಿಬಿಟ್ಟಿದ್ದಾರೆ. ನಾನು ದೆಹಲಿಗೆ ಹೋಗಬೇಕಾಗಿದೆ. ಎಲ್ಲರೂ ಎದ್ದು ನಿಂತು ಮೌನಾಚರಣೆ ಮಾಡೋಣ' ಎಂದು ಘೋಷಿಸಿಬಿಟ್ಟರು. ಸೋಮಣ್ಣ ಅವರಿಗೆ ಸಾಥ್ ನೀಡಿದ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ವೇದಿಕೆಯಲ್ಲಿ ಮೌನಾಚರಣೆ ನಡೆಸಿದರು. ಅಭಿನಂದನಾ ಸಮಾರಂಭವನ್ನು ಮೊಟಕುಗೊಳಿಸಿದರು.

ವರಕೋಡು ಅರಣ್ಯದಲ್ಲಿ ಮುಂದುವರೆದ ಹುಲಿಗಾಗಿ ಕಾರ್ಯಾಚರಣೆ

• ಹುಲಿರಾಯ ಘರ್ಜಿಸಿದ ಶಬ್ದ ಆಲಿಸಿರುವ ಸ್ಥಳೀಯರು • ಅರಣ್ಯ ಸಿಬ್ಬಂದಿಗಳಿಗೂ ವ್ಯಾಘ್ರ ಇರುವಿಕೆ ಖಚಿತವಾಗಿದೆ



ವರಕೋಡು–ಮೂಡಲಹುಂಡಿ ಭಾಗದ ಅರಣ್ಯದ ತಪ್ಪಲಿನ ಕಾಲುವೆ ಏರಿ ಮೇಲೆ ಹುಲಿ ಕಾಣಿಸಿಕೊಂಡಿದೆ ಎಂದು ವೈರಲ್ ಆದ ಫೋಟೋ.

ಮೈಸೂರು, ಜು.6(ಎಂಟಿವೈ)– ಮೈಸೂರು ತಾಲೂಕಿನ ವರಕೋಡು–ಮೂಡಲಹುಂಡಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಅರಣ್ಯ ಪ್ರದೇಶದಲ್ಲಿ ಕಂಡು ಬಂದ ಹುಲಿ ಸೆರೆ ಕಾರ್ಯಾಚರಣೆ ಮುಂದುವರೆದಿದ್ದು, ಕಳೆದ ಎರಡು ದಿನಗಳಿಂದ ಹುಲಿ ಘರ್ಜಿಸಿರುವ ಶಬ್ದ ಸ್ಥಳೀಯರ ಗಮನಕ್ಕೆ ಬಂದಿರುವುದರಿಂದ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ.

ದೊಣ್ಣೆಕಲ್ಲು ಬೆಟ್ಟದ ತಪ್ಪಲಿನ ವರುಣ ಕಾಲುವೆ ಏರಿ ಬಳಿ ಕಳೆದ ಶನಿವಾರ ರಾಜಾರೋಷವಾಗಿ ಓಡಾಡಿದ್ದ ಹುಲಿಯನ್ನು ಸ್ಥಳೀಯ ಯುವಕರು ಕಂಡು ವಿಡಿಯೋ ಚಿತ್ರೀಕರಿಸಿದ್ದರು. ಬಳಿಕ ಅರಣ್ಯ ಇಲಾಖೆ 25ಕ್ಕೂ ಹೆಚ್ಚು ಕ್ಯಾಮರಾ ಟ್ರ್ಯಾಪ್ ಬಳಸಿ ಹುಲಿ ಇರುವಿಕೆ ಪತ್ತೆ ಹಚ್ಚಲು ಅರಣ್ಯ ಇಲಾಖೆ ಮುಂದಾಗಿತ್ತು. ನೈಟ್ ವಿಷನ್ ಕ್ಯಾಮರಾ, ಡ್ರೋನ್ ಕ್ಯಾಮರಾ ಮೂಲಕವೂ ಪತ್ತೆ ಕಾರ್ಯಾಚರಣೆ ನಡೆಸಿದ್ದರೂ ಅರಣ್ಯ ಸಿಬ್ಬಂದಿಗೆ ಹುಲಿ ಜಾಡು ಪತ್ತೆಯಾಗಿರಲಿಲ್ಲ. ಕಳೆದ ಎರಡು ದಿನದಿಂದ ವರಕೋಡು ಭಾಗದ ಅರಣ್ಯ ಪ್ರದೇಶದಲ್ಲಿ ಹುಲಿ ಘರ್ಜಿಸಿರುವ ಶಬ್ದ ಕೇಳಿಸುತ್ತಿರುವುದಾಗಿ ವರಕೋಡು ಗ್ರಾಮದ ಕೆಲವರು ತಿಳಿಸಿದ್ದಾರೆ. ಅಲ್ಲದೆ, ಗ್ರಾಮದ ಬಳಿಯ ಇಟ್ಟಿಗೆಗೂಡಿನ ಬಳಿ ಕಚ್ಚಾ ರಸ್ತೆಯಲ್ಲಿ ಹೊಲದಿಂದ ಬೈಕ್‌ನಲ್ಲಿ ಬರುತ್ತಿದ್ದ ಯುವಕನೊಬ್ಬ ಹುಲಿ ನೋಡಿರುವುದಾಗಿ ಮಾಹಿತಿ ನೀಡಿದ್ದು, ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ಹೆಜ್ಜೆ ಗುರುತನ್ನು ಪರಿಶೀಲಿಸಿದ್ದಾರೆ.

ಈಗಾಗಲೇ ಹುಲಿ ಇರುವಿಕೆ ಖಚಿತಪಡಿಸಿಕೊಂಡಿರುವ ಅರಣ್ಯ ಇಲಾಖೆ, ಹುಲಿ ಸೆರೆಗೆ ಬೋನ್ ಇಟ್ಟು ಕಾರ್ಯಾಚರಣೆ ಮುಂದುವರೆಸಿದೆ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಕಾರ್ಯಾಚರಣೆಯನ್ನು ಚುರುಕುಗೊಳಿಸಲಾಗಿದ್ದು, ಮುಂಜಾನೆ ಹಾಗೂ ಸಂಜೆ ವೇಳೆ ಹೊಲ–ಗದ್ದೆಗಳಿಗೆ ಎಚ್ಚರಿಕೆಯಿಂದ ಓಡಾಡುವಂತೆ ಮನವಿ ಮಾಡಿದೆ. ಹುಲಿ ಚಲನವಲನದ ಮೇಲೆ ನಿಗಾ ವಹಿಸಲಾಗಿದ್ದು, ಗ್ರಾಮದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ವಿಶೇಷ ತಂಡವನ್ನು ರಚಿಸಿ ವಾಹನದೊಂದಿಗೆ ಗಸ್ತು ನಡೆಸಲಾಗುತ್ತಿದೆ. ಅರಣ್ಯದ ಒಳಗಡೆ ಹಾದು ಹೋಗುವ ರಸ್ತೆಗಳಲ್ಲಿ ಜನ ಸಂಚಾರ ನಿರ್ಬಂಧ ಮುಂದುವರಿಸಲಾಗಿದೆ.

ಸ್ಥಳೀಯ ವಾಟ್ಸಪ್ ಗ್ರೂಪ್‌ನಲ್ಲಿ ಫೋಟೋ ವೈರಲ್: ಬೆಟ್ಟದ ತಪ್ಪಲಿನಲ್ಲಿರುವ ವರುಣ ಕಾಲುವೆ ಏರಿ ಮೇಲೆ ಹುಲಿ ಮಲಗಿರುವ ಫೋಟೋ ವೈರಲ್ ಆಗಿದ್ದು, ಹುಲಿ ಇರುವಿಕೆ ಬಗ್ಗೆ ಜಾಗೃತಿ ಸಂದೇಶ ರವಾನಿಸಲಾಗುತ್ತಿದೆ. ಆದರೆ ಈ ಫೋಟೋವನ್ನು ಅರಣ್ಯ ಸಿಬ್ಬಂದಿ 3–4 ತಿಂಗಳ ಹಳೆ ಫೋಟೋ ಎಂದಿದ್ದಾರೆ. ಆದರೆ ಸ್ಥಳೀಯರು ಅದು ಹೊಸ ಫೋಟೊ. 3–4 ತಿಂಗಳ ಹಿಂದೆ ಕಾಡು ಒಣಗಿತ್ತು. ಈಗ ಹಸಿರಾಗಿದೆ. ಕಾಲುವೆ ಹೊಸದಾಗಿ ದುರಸ್ಥಿ ಮಾಡಿರುವ ಕುರುಹು ಫೋಟೋದಲ್ಲಿ ಗಮನಿಸಬಹುದಾಗಿದ್ದು. ಎರಡು ದಿನದ ಹಿಂದೆ ಸ್ಥಳೀಯರಿಗೆ ಹುಲಿ ಕಾಣಿಸಿಕೊಂಡಿದೆ ಎಂದು ಗ್ರೂಪ್‌ಗಳಲ್ಲಿ ಸ್ಥಳೀಯರು ವಾದಿಸುತ್ತಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾದಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಫ್ಲೋರೆಸೆನ್ಸ್ ಗೈಡೆಡ್ ಲ್ಯಾಪ್ರೊಸ್ಕೋಪಿಕ್‌ನಿಂದ ಕರುಳಿನ ಸಮಸ್ಯೆಗೆ ಯಶಸ್ವಿ ಚಿಕಿತ್ಸೆ

ಮೈಸೂರು, ಜು.6(ಜಿಎ)–ಮೈಸೂರಿನ ಇಲಾವಾಲದಲ್ಲಿರುವ ಎಸ್‌ಜೆ ಆಸ್ಪತ್ರೆ ಯಲ್ಲಿ ಸುಧಾರಿತ ಫ್ಲೋರೆಸೆನ್ಸ್ ಗೈಡೆಡ್ ಲ್ಯಾಪ್ರೊಸ್ಕೋಪಿಕ್ ವಿಧಾನ ಬಳಸಿ ಕರುಳಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿರುವ ಮೆಸೆಂಟೆರಿಕ್ ಇಸ್ಕೀಮಿಯ ಎಂಬ ಸಮಸ್ಯೆ ಯನ್ನು ನಿವಾರಿಸಲಾಯಿತು ಎಂದು ಡಾ.ಸತೀಶ್ ದುರ್ಗೇಶ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೀವ್ರ ಹೊಟ್ಟೆನೋವು, ವಾಂತಿ ಸಮಸ್ಯೆಯಿಂದ ಬಳಲುತ್ತಿದ್ದ ಮೈಸೂರು ಗ್ರಾಮಾಂತರದ ಸುಮಾರು 70 ವರ್ಷ ವಯಸ್ಸಿನ ಪುರುಷರೊಬ್ಬರು ತಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ಕರುಳಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿರುವುದು ಕಂಡುಬಂದಿತು. ಇದು ಮೆಸೆಂಟೆರಿಕ್ ಇಸ್ಕೀಮಿಯ ಎಂಬ ಸಮಸ್ಯೆಯಾಗಿದ್ದು, ತಡ ಮಾಡಿದಲ್ಲಿ ಕರುಳು ಕೊಳೆಯುವ ಸಾಧ್ಯತೆ ಇತ್ತು ಹೀಗಾಗಿ ಇವರಿಗೆ ಸುಧಾರಿತ ಫ್ಲೋರೆಸೆನ್ಸ್ ಗೈಡೆಡ್ ಲ್ಯಾಪ್ರೊಸ್ಕೋಪಿಕ್ ವಿಧಾನ ಬಳಸಿ, ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಿ ಗುಣಪಡಿಸಲಾಗಿದೆ ಎಂದರು. ಇದೊಂದು ಸುಧಾರಿತ ವಿಧಾನವಾಗಿದ್ದು, ಜಪಾನ್‌ನಿಂದ ತರಿಸಿಕೊಂಡಿರುವ ನಿಯರ್ ಇನ್ಫ್ರಾರೆಡ್ ಕ್ಯಾಮೆರಾ ಬಳಕೆಯೊಡನೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ನಗರದಲ್ಲಿ ಈ ರೀತಿಯ ಅತ್ಯಾಧುನಿಕ ವಿಧಾನ ಬಳಸುವ ಏಕೈಕ ಆಸ್ಪತ್ರೆ ತಮ್ಮದಾಗಿದೆ. ಇದರಿಂದಾಗಿ ಕರುಳಿಗೆ ರಕ್ತ ಹರಿವು ಸರಿಯಾಗಿ ಇದೆಯೋ, ಇಲ್ಲವೋ ಎಂಬುದನ್ನು ಪತ್ತೆ ಹಚ್ಚಿ, ಕೇವಲ ಸಮಸ್ಯೆಯಿರುವ ಭಾಗವನ್ನು ಮಾತ್ರ ದೊಡ್ಡ ಛೇದನ ಅಗತ್ಯವಿಲ್ಲದೇ ತೆಗೆದುಹಾಕಬಹುದಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ವೈದ್ಯರಾದ ಡಾ.ಸುದೇಶ್ ದುರ್ಗೇಶ್, ಡಾ.ದುರ್ಗೇಶ್, ಡಾ.ಪೂಜಿತಾ, ಡಾ.ಮಮತಾ ಇದ್ದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	100.30 ಅಡಿ
ಒಳಹರಿವು	9686 ಕ್ಯೂಸೆಕ್
ಹೊರಹರಿವು	546 ಕ್ಯೂಸೆಕ್

ಕಬಿನಿ ನೀರಿನ ಮಟ್ಟ




ಗರಿಷ್ಠ ಮಟ್ಟ	2284 ಅಡಿ
ಶುಕ್ರವಾರ	2281.12 ಅಡಿ
ಒಳಹರಿವು	8321 ಕ್ಯೂಸೆಕ್
ಹೊರಹರಿವು	2917 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2845.87 ಅಡಿ
ಒಳಹರಿವು	5048 ಕ್ಯೂಸೆಕ್
ಹೊರಹರಿವು	50 ಕ್ಯೂಸೆಕ್

ಹಸಿರು ನಮ್ಮ ಉಸಿರು



HAPPY BIRTHDAY
ಕೆ.ಆರ್.ಸಿ ಗ್ರೂಪ್ಸ್ ಮಾಲೀಕರು ಹಾಗೂ ಮೈಮುಲ್ ನಿರ್ದೇಶಕರು
ಕೆ.ಆರ್ ಚಲುವರಾಜು
ಅಣ್ಣನವರಿಗೆ
ಜನ್ಮದಿನದ ಶುಭಾಶಯಗಳು
ರವಿ.ಕೆ
K.P.R Building Material Supply
ಹಳೇ ಕೆಂಪಯ್ಯನಹುಂಡಿ
ಕುಮಾರ.ಕೆ
K.P.R Building Material Supply



ದುರ್ಗಾ ಗ್ರೂಪ್‌ನ ಎಂ.ಡಿ
ಕೇಬಲ್ ರವಿ
ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
VISMAYA ADVERTISERS
8050302424